ಸಂಪುಟ: 06 ಸಂಚಿಕೆ: 41 ಪುಟಗಳು: 08 ಶನಿವಾರ 25 ಏಪ್ರಿಲ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ಯಾರು ಏನೇನು ಮಾಡ್ತಾ ಇದ್ದಾರೆ, ಹೇಗೆ, ಯಾಕೆ ಇತ್ಯಾದಿ ಅನವಶ್ಯಕ ವಿವರಗಳಿಂದ ದೂರ ಇದ್ದಷ್ಟೂ ಒತ್ತಡ ಕಮ್ಮಿಯಾಗಿ ಸುಖ ಹೆಚ್ಚುತ್ತದೆ !

# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ರಾಹುಲ್ ಸುಳ್ಳುಕೋರ; ಜನರಲ್ ನರವಾಣೆ ಸ್ಪಷ್ಟೀಕರಣದ ಬಳಿಕ ಬಿಜೆಪಿ ವಾಗ್ದಾಳಿ


• ಉದಯವಾಹಿನಿ, ಬೆಂಗಳೂರು

ಲೋಕಸಭೆಯ ಪ್ರತಿಪಕ್ಷ ನಾಯಕ ಹಾಗೂ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿಯನ್ನು ಬಿಜೆಪಿ ತೀವ್ರವಾಗಿ ಟೀಕಿಸಿದೆ. ರಾಹುಲ್, ಸೇನಾ ಮುಖ್ಯಸ್ಥ ಜನರಲ್ ಮನೋಜ್ ಮುಖುಂದ್ ನರಾವಣೆ ಅವರ ಪುಸ್ತಕದಲ್ಲಿನ ವಿಷಯದ ಕುರಿತು ಮಾತನಾಡಿದ್ದರು. ಇದೀಗ ಭಾರತವು ಚೀನಾದಿಂದಾಗಿ ಭೂಮಿ ಕಳೆದುಕೊಂಡಿಲ್ಲ ಎಂದು ಮಾಜಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಮುಖುಂದ್ ನರಾವಣೆ ಅವರು ಸ್ಪಷ್ಟೀಕರಣ ನೀಡಿದ್ದಾರೆ. ಹೀಗಾಗಿ ಭಾರತೀಯ ಜನತಾ ಪಕ್ಷ ರಾಹುಲ್ ಗಾಂಧಿ ವಿರುದ್ಧ ಟೀಕಾಪ್ರಹಾರ ನಡೆಸಿದೆ.

ಫೆಬ್ರವರಿಯಲ್ಲಿ ನಡೆದ ಸಂಸತ್ತಿನ ಬಜೆಟ್ ಅಧಿವೇಶನದ ವೇಳೆ, ರಾಹುಲ್ ಗಾಂಧಿ ಅವರು ಭಾರತ-ಚೀನಾ ಗಡಿ ವಿವಾದದ ಬಗ್ಗೆ ಮಾತನಾಡುತ್ತಿದ್ದರು. ಈ ವೇಳೆ ಅವರು ಮಾಜಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಮುಖುಂದ್ ನರಾವಣೆ ಅವರು ಬರೆದ ಆತ್ಮಕಥೆಯ (ಇನ್ನೂ ಪ್ರಕಟವಾಗದ ಪುಸ್ತಕ) ಬಗ್ಗೆ ಮಾತನಾಡಿದ್ದರು. ಆ ಪುಸ್ತಕದಲ್ಲಿ ಭಾರತದ ಕೆಲವು ಪ್ರದೇಶಗಳನ್ನು ಚೀನಾ ವಶಪಡಿಸಿಕೊಂಡಿದೆ ಎಂಬ ಅರ್ಥ ಬರುವಂತಹ ಉಲ್ಲೇಖಗಳಿವೆ ಎಂದು ಹೇಳಿದ್ದರು. ಆದರೆ, ನರವಾಣೆ ಅವರು ಚೀನಾಕ್ಕೆ ಭೂಮಿ ನೀಡಲಾಗಿಲ್ಲ ಎಂದು ಹೇಳಿದ್ದಾರೆ. ಹೀಗಾಗಿ ಬಿಜೆಪಿಯು ರಾಹುಲ್ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಚೀನಾಕ್ಕೆ ಒಂದು ಇಂಚು ಭೂಮಿಯನ್ನು ಸಹ ನೀಡಿಲ್ಲ ಎಂದು ನರವಾಣೆ ಹೇಳಿದ್ದಾರೆ. ರಾಹುಲ್ ಗಾಂಧಿ ಗೊಂದಲ ಸೃಷ್ಟಿಸಿದರು. ಆದರೆ ಈಗ ನರವಾಣೆ ಮೌನ ಮುರಿದು ರಾಹುಲ್ ಗಾಂಧಿಯವರ ಸುಳ್ಳುಗಳನ್ನು ಬಹಿರಂಗಪಡಿಸಿದ್ದಾರೆ ಎಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲ್ಲಾ ಹೇಳಿದ್ದಾರೆ. ಜನರಲ್ ನರವಾಣೆ ಅವರನ್ನು ಉಲ್ಲೇಖಿಸಿ, ಬಿಜೆಪಿ ನಾಯಕರು 2020ರ ಚೀನಾದೊಂದಿಗಿನ ಬಿಕ್ಕಟ್ಟಿನ ಸಂದರ್ಭದಲ್ಲಿ ಸೇನೆಗೆ ರಾಜಕೀಯ ಬೆಂಬಲವಿತ್ತು ಎಂದು ಒತ್ತಿ ಹೇಳಿದರು. ಇನ್ನೂ ಪ್ರಕಟವಾಗದ ಪುಸ್ತಕವನ್ನು ಬಳಸಿಕೊಂಡು ತನ್ನನ್ನು ಮತ್ತು ಸೈನ್ಯವನ್ನು ರಾಜಕೀಯ ಎಳೆದು ತರುವುದು ಸರಿಯಲ್ಲ, ಇದು ಅನ್ಯಾಯ ಎಂದು ನರವಾಣೆ ಅವರು ಹೇಳಿದ್ದಾರೆ. ಚೀನಾದೊಂದಿಗಿನ ಗಡಿ ಸಂಘರ್ಷದ ಬಗ್ಗೆ ನರವಾಣೆಯವರನ್ನು ಮಾಧ್ಯಮವೊಂದು ಪ್ರಶ್ನಿಸಿದಾಗ, ಅನುಮಾನಗಳು ನಿವಾರಣೆಯಾಗಬೇಕೆಂದರೆ ಈ ಬಗ್ಗೆ ಚೀನಾದವರನ್ನೇ ಕೇಳಿ ಎಂದು ಉತ್ತರಿಸಿದ್ದಾರೆ.

ಭಾರತದ ಭೂಭಾಗಗಳನ್ನು ಒಳಗೆ ಹಾಕಿಕೊಂಡಿದ್ದೀರಾ ಎಂದು ಚೀನೀಯರನ್ನೇ ಕೇಳಿ ಎಂದು ಹೇಳಿದ್ದಾರೆ. ಫೆಬ್ರವರಿಯಲ್ಲಿ ಈ ವಿಷಯ ದೊಡ್ಡ ರಾಜಕೀಯ ಚರ್ಚೆಗೆ ಕಾರಣವಾಯಿತು. ಮಾಜಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಮುಖುಂದ್ ನರಾವಣೆ ಅವರ ಇನ್ನೂ ಪ್ರಕಟವಾಗದ ಆತ್ಮಕಥೆ ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ ದೇಶದ ರಾಜಕೀಯ ವಲಯದಲ್ಲಿ ವಿವಾದದ ಕೇಂದ್ರಬಿಂದುವಾಯಿತು. ರಾಹುಲ್ ಗಾಂಧಿ ಅವರು ಆ ಪುಸ್ತಕದ ಕೆಲವು ಭಾಗಗಳನ್ನು ಸಂಸತ್ತಿನಲ್ಲಿ ಉಲ್ಲೇಖಿಸಲು ಪ್ರಯತ್ನಿಸಿದ್ದರು. ಇದು ಭಾರಿ ಕೋಲಾಹಲಕ್ಕೆ ಕಾರಣವಾಗಿತ್ತು.




### ರಕ್ಷಣಾ ಸಚಿವಾಲಯದ ಅನುಮೋದನೆಗಾಗಿ ಬಾಕಿ

ಚೀನಾದ ಟ್ಯಾಂಕ್‌ಗಳು ಭಾರತದ ಗಡಿಯ ಕಡೆಗೆ ಬರುತ್ತಿರುವ ಬಗ್ಗೆ ಜನರಲ್ ನರಾವಣೆಯವರು ಸರ್ಕಾರಕ್ಕೆ ಮಾಹಿತಿ ನೀಡಿದ್ದಾರೆ. ವಿಶೇಷವಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಈ ವಿಷಯ ತಿಳಿಸಲಾಗಿತ್ತು. ಸರ್ಕಾರದಿಂದ ಬಹುಕಾಲ ಯಾವುದೇ ನೇರ ಪ್ರತಿಕ್ರಿಯೆ ಬಂದಿಲ್ಲ ಎಂದು ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ ಎಂದು ರಾಹುಲ್ ಗಾಂಧಿ ತಿಳಿಸಿದ್ದರು. ಇದು ಭಾರಿ ವಿವಾದಕ್ಕೆ ಕಾರಣವಾಯಿತು. ಈ ಆತ್ಮಚರಿತ್ರೆಯು 2024ರಲ್ಲಿ ಬಿಡುಗಡೆಯಾಗಬೇಕಿತ್ತು. ಆದರೆ, ಇದು ಪ್ರಸ್ತುತ ರಕ್ಷಣಾ ಸಚಿವಾಲಯದ ಅನುಮೋದನೆಗಾಗಿ ಬಾಕಿ ಇದೆ. ಹಿರಿಯ ಸೇನಾ ಅಧಿಕಾರಿಗಳು ತಮ್ಮ ಸೇವಾ ಅನುಭವಗಳನ್ನು ಬರೆಯುವಾಗ, ಅದರಲ್ಲಿರುವ ಮಾಹಿತಿಗಳು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿರಬಹುದು. ಹೀಗಾಗಿ ಅನುಮತಿಯ ಅಗತ್ಯವಿರುತ್ತದೆ.

## ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಆರೋಪ

• ಉದಯವಾಹಿನಿ, ಬೆಂಗಳೂರು

ಸಿಇಟಿ ಪರೀಕ್ಷೆ ವೇಳೆ ಜನಿವಾರ ತೆಗೆದು ಕಳೆದ ವರ್ಷ ಶಿವಮೊಗ್ಗದ ಆದಿಚುಂಚನಗಿರಿ ಕಾಲೇಜು ಮತ್ತು ಬೀದರ್‌ನ ಪರೀಕ್ಷಾ ಕೇಂದ್ರಗಳಲ್ಲಿ ವಿವಾದ ಉಂಟಾಗಿತ್ತು. ಇಂದು ಅಂತಹದ್ದೇ ಘಟನೆ ಬೆಂಗಳೂರಿನಲ್ಲಿ ಮರುಕಳಿಸಿದೆ. ಬೆಂಗಳೂರಿನ ಮಡಿವಾಳದ ಕೃಪಾನಿಧಿ ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಸಿಬ್ಬಂದಿ ವಿದ್ಯಾರ್ಥಿಗಳ ಜನಿವಾರವನ್ನು ಬಲವಂತವಾಗಿ ತೆಗೆಸಿ ಪರೀಕ್ಷೆಗೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂಬ ಗಂಭೀರ ಆರೋಪ ಕೇಳಿಬಂದಿದೆ.

ಇದರೊಂದಿಗೆ, ಕಳೆದ ವರ್ಷದಂತೆ ಈ ವರ್ಷವೂ ಸಿಇಟಿ ಪರೀಕ್ಷೆಯಲ್ಲಿ ಜನಿವಾರ ವಿವಾದ ಮುನ್ನೆಲೆಗೆ ಬಂದಿದೆ. ಸಿಇಟಿ ಪರೀಕ್ಷೆ ಆರಂಭವಾದ ದಿನ ನಡೆದ ಪರೀಕ್ಷೆ ವೇಳೆ ಆನಂದ್ ಸುಧೀರ್ ರಾವ್ ಸೇರಿದಂತೆ ಐದಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ತಪಾಸಣೆ ನೆಪದಲ್ಲಿ ಅಡ್ಡಗಟ್ಟಿದ ಸಿಬ್ಬಂದಿ, ಜನಿವಾರ ತೆಗೆಯುವಂತೆ ಸೂಚಿಸಿದ್ದಾರೆ ಎಂಬ ಆರೋಪವಿದೆ. ಇದಕ್ಕೆ ವಿದ್ಯಾರ್ಥಿಗಳು ವಿರೋಧ ವ್ಯಕ್ತಪಡಿಸಿದಾಗ, ಜನಿವಾರ ತೆಗೆಯದಿದ್ದರೆ ಪರೀಕ್ಷಾ ಕೇಂದ್ರದಿಂದ ಹೊರಹೋಗಿ' ಎಂದು ಧಮಕಿ ಹಾಕಿದ್ದಾರೆ ಎಂದು ಆರೋಪಿಸಲಾಗಿದೆ.

## ಬಿಎಸ್ ವೈ 5 ದಶಕಗಳ ರಾಜಕೀಯ ಜೀವನ ಮೇ 9ರಂದು ಅಭಿಮಾನೋತ್ಸವ

• ಉದಯವಾಹಿನಿ, ಬೆಂಗಳೂರು

ಹಿರಿಯ ಬಿಜೆಪಿ ನಾಯಕ ಬಿ ಎಸ್ ಯಡಿಯೂರಪ್ಪ ಅವರ ಐದು ದಶಕಗಳ ರಾಜಕೀಯ ಜೀವನವನ್ನು ಆಚರಿಸುವ ಕಾರ್ಯಕ್ರಮವು ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಸನ್ಮಾನಿಸಲಿದ್ದಾರೆ.

ಜಂಟಿ ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮದ ವಿವರಗಳನ್ನು ಹಂಚಿಕೊಂಡ ರಾಜ್ಯ ಬಿಜೆಪಿ ಅಧ್ಯಕ್ಷ ಬಿ ವೈ ವಿಜಯೇಂದ್ರ ಹಾಗೂ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಅವರು ಲಕ್ಷಾಂತರ ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ಯಡಿಯೂರಪ್ಪನವರು 50 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿ ಸಕ್ರಿಯರಾಗಿದ್ದಾರೆ. ಅವರು ರೈತರಿಗಾಗಿ ಹೋರಾಟ ಮಾಡಿದ್ದಾರೆ, ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಕೆಲಸ ಮಾಡಿದ್ದಾರೆ ಹಾಗೂ ಸಾಮಾಜಿಕ ನ್ಯಾಯಕ್ಕೆ ಹೋರಾಟ ಮಾಡಿದ್ದಾರೆ.

## ಸರ್ಕಾರಕ್ಕೆ ಸುರೇಶ್ ಕುಮಾರ್ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಒತ್ತಾಯ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮದ್ಯದಂಗಡಿಗಳ ಕಾರ್ಯನಿರ್ವಹಣೆಯ ಸಮಯ ಉಲ್ಲಂಘನೆ ವಿಚಾರವಾಗಿ ರಾಜಕೀಯ ಚರ್ಚೆ ತೀವ್ರಗೊಂಡಿದ್ದು, ಬಿಜೆಪಿ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಸುರೇಶ್ ಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಠಿಣ ಶಬ್ದಗಳಲ್ಲಿ ಪತ್ರ ಬರೆದು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ. ತಮ್ಮ ಪತ್ರದಲ್ಲಿ ಅವರು ರಾಜ್ಯದ ವಿವಿಧ ಭಾಗಗಳಲ್ಲಿ ಮದ್ಯ ಅಂಗಡಿಗಳು ಹಾಗೂ ಬಾರ್‌ಗಳು ಸರ್ಕಾರ ನಿಗದಿಪಡಿಸಿರುವ ಸಮಯಕ್ಕಿಂತ ಮುಂಚೆಯೇ ತೆರೆಯುತ್ತಿದ್ದು, ನಿಯಮಗಳನ್ನು ಬಹಿರಂಗವಾಗಿ ಉಲ್ಲಂಘಿಸುತ್ತಿದ್ದಾರೆಂದು ಆರೋಪಿಸಿದ್ದಾರೆ.

ಸರ್ಕಾರದ ನಿಯಮಾವಳಿಗಳ ಪ್ರಕಾರ ಮದ್ಯ ಅಂಗಡಿಗಳು ಬೆಳಿಗ್ಗೆ 10 ಗಂಟೆಯ ನಂತರವೇ ಕಾರ್ಯಾರಂಭ ಮಾಡಬೇಕು. ಆದರೆ, ಅನೇಕ ಕಡೆಗಳಲ್ಲಿ ಬೆಳಿಗ್ಗೆ 5 ಗಂಟೆಯಿಂದಲೇ ಅಂಗಡಿಗಳು ತೆರೆಯಲ್ಪಡುತ್ತಿವೆ. ಈ ರೀತಿಯ ಅಕ್ರಮಗಳಿಂದ ಯುವಕರು ಸೇರಿದಂತೆ ಸಾಮಾನ್ಯ ಜನರು ಮದ್ಯಪಾನಕ್ಕೆ ಒಳಗಾಗುವ ಅಪಾಯ ಹೆಚ್ಚುತ್ತಿದೆ ಎಂದು ಎಚ್ಚರಿಸಿದ್ದಾರೆ. ಬೆಳಿಗ್ಗೆ 6-7 ಗಂಟೆಯಲ್ಲೇ ಮದ್ಯಪಾನ ಮಾಡಿದವರು ಸಾರ್ವಜನಿಕ ಸ್ಥಳಗಳಲ್ಲಿ ಬಿದ್ದಿರುವ ದೃಶ್ಯಗಳು ಸಾಮಾನ್ಯವಾಗಿವೆ. ಇದು ಸಮಾಜದ ಆರೋಗ್ಯ ಮತ್ತು ಶಿಸ್ತಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ ಎಂದು ಹೇಳಿದ್ದಾರೆ.

**ಆದಿ ಕರ್ನಾಟಕ, ಆದಿ ದ್ರಾವಿಡ ಆದಿ ಆಂಧ್ರ ಈ ಜಾತಿಗಳ ಸುಮಾರು 4,74,954 ಜನಸಂಖ್ಯೆಯ ಮೂಲ ಜಾತಿಗಳನ್ನು ಕಂಡುಹಿಡಿದಿಲ್ಲ. ಇವರಿಗೆ ಶೇಕಡ 1ರಷ್ಟು ಮೀಸಲಾತಿ ನಿಗದಿಪಡಿಸಲು ಶಿಫಾರಸ್ಸು ಮಾಡಿರುವುದು ಸರ್ಕಾರದ ಷರತ್ತುಗಳ ವಿರುದ್ಧವಾಗಿದೆ. ಆಯೋಗವು ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಶಿಫಾರಸ್ಸು ಮಾಡಿರುವುದು ಸರಿಯಲ್ಲ. ಆಯೋಗವು ಎಂದು ಹೊಸದಾಗಿ ಗುಂಪುಗಳನ್ನು ಸೃಷ್ಟಿ ಮಾಡಿ ಪ್ರತ್ಯೇಕವಾಗಿ ಮೀಸಲಾತಿಯನ್ನು ನಿಗದಿ ಪಡಿಸಲು ಯಾವುದೇ ಅಧಿಕಾರವನ್ನು ಹೊಂದಿರಲಿಲ್ಲ ಎಂಬುವುದು ಬಲಗೈ ಸಮುದಾಯಗಳ ವಾದವಾಗಿದೆ.**

## ಎಸ್‌ಸಿ ಒಳ ಮೀಸಲಾತಿ ನೀಡಲು ತೀರ್ಮಾನ




• ಉದಯವಾಹಿನಿ, ಬೆಂಗಳೂರು

ಎಸ್‌ಸಿ ಒಳಮೀಸಲಾತಿ ಸಂಬಂಧ ಶುಕ್ರವಾರ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ 'ಎ'ಗೆ 5.25%, 'ಬಿ'ಗೆ 5.25%, 'ಸಿ'ಗೆ 4.50% ಒಳ ಮೀಸಲಾತಿ ನೀಡಲು ತೀರ್ಮಾನಿಸಲಾಗಿದೆ.

ಶೇ.17ರ ಎಸ್‌ಸಿ ಒಳಮೀಸಲಾತಿ ಅನ್ವಯ ಎಸ್‌ಸಿಯನ್ನು ಎ (ಬಲ), ಬಿ (ಎಡ) ಮತ್ತು ಸಿ (ಸ್ಪೃಶ್ಯರು) ಎಂದು ಮೂರು ವರ್ಗೀಕರಣ ಮಾಡಲಾಗಿದೆ. ಅದರಂತೆ ಒಳಮೀಸಲಾತಿ ಕಲ್ಪಿಸಲು ಸರ್ಕಾರ ನಿರ್ಧರಿಸಿದೆ. ಈ ಕುರಿತು ಸಿಎಂ ಸಿದ್ದರಾಮಯ್ಯ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಶೇ.17ರ ಎಸ್‌ಸಿ ಒಳಮೀಸಲಾತಿ ಅನ್ವಯ 'ಎ'ಗೆ 5.25%, 'ಬಿ'ಗೆ 5.25%, 'ಸಿ'ಗೆ 4.50% ಒಳ ಮೀಸಲಾತಿ ನೀಡಲು ತೀರ್ಮಾನಿಸಿದ್ದೇವೆ.

ಒಳಮೀಸಲಾತಿ ಬಗ್ಗೆ ಸಾಕಷ್ಟು ಹೋರಾಟ ನಡೆಯುತ್ತಿದೆ. 1-8-2024ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿ ಒಳಮೀಸಲಾತಿ ಮಾಡಬಹುದು ಎಂದು ಹೇಳಿತ್ತು. ಬಳಿಕ ನಾವು ನಾಗಮೋಹನ ದಾಸ್ ನೇತೃತ್ವದಲ್ಲಿ ಆಯೋಗ ರಚನೆ ಮಾಡಿದೆವು. ಅವರ ವರದಿಯನ್ನು ಸಂಪುಟದ ಮುಂದೆ ಇಟ್ಟು ಅನುಮೋದನೆ ನೀಡಲಾಗಿದೆ. ಸಂಪುಟ ಸಭೆಯಲ್ಲಿ 6:6:5ರಂತೆ ಒಳ ಮೀಸಲಾತಿ ನೀಡಲು ತೀರ್ಮಾನಿಸಲಾಗಿತ್ತು. ಈ ಸಂಬಂಧ ಕಾನೂನು ಮಾಡಲಾಯಿತು. ಕಾನೂನು ಮಾಡಿದ ಬಳಿಕ ರೋಸ್ಟರ್‌ನಲ್ಲಿ ಗೊಂದಲ ಉಂಟಾಯಿತು. ಇತ್ತ ಅಲೆಮಾರಿಯವರು ಕೋರ್ಟ್‌ಗೆ ಹೋದರು. ಕೋರ್ಟ್‌ನಲ್ಲಿ ಮೀಸಲಾತಿ 50% ಮೀರಬಾರದು ಎಂದು ತೀರ್ಪು ನೀಡಿತು. ಎಸ್,ಸಿ (17%), ಎಸ್ ಟಿ (7%)ರಂತೆ 24% ಮೀಸಲಾತಿ ಹಿನ್ನೆಲೆಯಲ್ಲಿ ಒಟ್ಟು ಮೀಸಲಾತಿ 56% ಗೆ ಹೋಯಿತು. ಹೈಕೋರ್ಟ್ ಒಟ್ಟು ಮೀಸಲಾತಿ ಪ್ರಮಾಣ 50% ಮೀರಬಾರದು ಎಂದು ಹೇಳಿತು. ಮಾ.27ರಂದು ವಿಶೇಷ ಸಂಪುಟ ಸಭೆ ಮಾಡಲು ತೀರ್ಮಾನಿಸಲಾಗಿತ್ತು. ಆದರೆ, ನೀತಿ ಸಂಹಿತೆ ಇದ್ದ ಕಾರಣ ಸಭೆ ಸಾಧ್ಯವಾಗಿರಲಿಲ್ಲ ಎಂದರು. ಕಳೆದ ಸಂಪುಟ ಸಭೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ತಾಂತ್ರಿಕ ಸಮಿತಿ ರಚಿಸಲು ತೀರ್ಮಾನಿಸಲಾಗಿತ್ತು. ಅವರು ಇಂದು ವಿಶೇಷ ಸಚಿವ ಸಂಪುಟ ಸಭೆಯಲ್ಲಿ ವರದಿ ನೀಡಿದರು. ಒಳಮೀಸಲಾತಿ ಕಾಯ್ದೆಯ ಪ್ರಕಾರ 6:6:5ರಂತೆ ಒಳಮೀಸಲಾತಿ ನೀಡಲಾಗಿತ್ತು. ಈಗ 15% ಎಸ್‌ಸಿ ಒಳಮೀಸಲಾತಿಯಡಿ 5.3, 5.3 ಮತ್ತು 4.4ರಂತೆ ಮಾಡುವ ಸಂಬಂಧ ಚರ್ಚಿಸಲಾಯಿತು ಎಂದು ಹೇಳಿದರು.

ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸರ್ವಾನುಮತದಿಂದ ಈ ಬಗ್ಗೆ ತೀರ್ಮಾನವಾಗಿದೆ. ಇದಕ್ಕೆ ಮುನಿಯಪ್ಪ, ತಿಮ್ಮಾಪೂರ, ಪ್ರಿಯಾಂಕ್ ಖರ್ಗೆ, ಮಹದೇವಪ್ಪ, ಸತೀಶ್ ಜಾರಕಿಹೊಳಿ ಒಪ್ಪಿಕೊಂಡಿದ್ದಾರೆ. ಯಾವುದೇ ಅಪಸ್ವರ ಇಲ್ಲದೇ ತೀರ್ಮಾನಕ್ಕೆ ಬರಲಾಗಿದೆ ಎಂದು ಸಿಎಂ ತಿಳಿಸಿದರು. ಹೈಕೋರ್ಟ್ ತೀರ್ಮಾನದವರೆಗೆ 6% ಬ್ಯಾಕ್ ಲಾಗ್ ಆಗಿ ಪರಿಗಣಿಸಲಾಗುವುದು. ಹೈಕೋರ್ಟ್ ತೀರ್ಮಾನದ ಬಳಿಕ ಇದನ್ನು ತೀರ್ಮಾನಿಸಲು ನಿರ್ಧರಿಸಲಾಗಿದೆ. ಈ ಹಿಂದಿನ 6:6:5 ಒಳಮೀಸಲಾತಿ ಅಧಿಸೂಚನೆ ವಾಪಸ್ ಪಡೆದು ಇಂದಿನ ತೀರ್ಮಾನದಂತೆ 5.25, 5.25, 4.50ರ ಅಧಿಸೂಚನೆ ಹೊರಡಿಸಲಾಗುವುದು ಎಂದು ಮಾಹಿತಿ ನೀಡಿದರು. ಬಜೆಟ್‌ನಲ್ಲಿ 56,432 ನೇಮಕಾತಿ ಮಾಡುವ ಘೋಷಣೆ ಮಾಡಲಾಗಿದೆ. ಈ ಸಂಬಂಧ ತುರ್ತು ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಿದ್ದೇವೆ. ಈ ನೇಮಕಾತಿಯಲ್ಲಿ ಒಳಮೀಸಲಾತಿ ನೀಡಲಾಗುವುದು. ಸಿ ವರ್ಗಕ್ಕೆ ಲಭ್ಯವಾಗುವ ಹುದ್ದೆಗಳಲ್ಲಿ ಸುಮಾರು 20% 59 ಅಲೆಮಾರಿ ಸಮುದಾಯಕ್ಕೆ ಮೀಸಲಾಗಿಡಬೇಕು ಎಂದು ತೀರ್ಮಾನಿಸಲಾಗಿದೆ. ಅಂದರೆ ಸಿ ವರ್ಗದ 4 ಹುದ್ದೆಗಳಲ್ಲಿ 1 ಹುದ್ದೆ ಅಲೆಮಾರಿ ಸಮುದಾಯಕ್ಕೆ ಮೀಸಲಿಡಲಾಗುವುದು ಎಂದರು.

ನೇಮಕಾತಿ ಕೂಡಲೇ ಆರಂಭವಾಗಲಿದೆ. ನಮ್ಮ ಪಕ್ಷದ ನಿಲುವು ಸಮ ಪಾಲು, ಸಮಬಾಳು ಅನ್ನೋದು. ಯಾರಿಗೂ ಅನ್ಯಾಯ ಆಗಬಾರದು ಎಂಬುದು ನಮ್ಮ ಉದ್ದೇಶ. ನಾವು ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ. ದಲಿತ ಸಂಘಟನೆಗಳು ಇದನ್ನು ಒಪ್ಪಿಕೊಳ್ಳುವ ವಿಶ್ವಾಸವಿದೆ ಎಂದು ಸಿಎಂ ಹೇಳಿದ್ದಾರೆ.

### ಆಕ್ಷೇಪ ಯಾಕಾಗಿ?





ಸರ್ಕಾರಕ್ಕೆ ಬಿಸಿ ಮುಟ್ಟಿಸಿದ ಮೀಸಲಾತಿ

ಬಲಗೈ ಸಮುದಾಯದ ವಾದ ಏನು

ಹಿಂದಿನ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರವನ್ನು ಹಿಂಪಡೆಯಲೇಬೇಕು. 16 ಬಲಗೈ ಸಂಬಂಧಿತ ಜಾತಿಗಳನ್ನು ಬಂಜಾರ, ಭೋವಿ ಮತ್ತು ಇತರೆ ಜಾತಿಗಳ ಗುಂಪಿಗೆ ಸಚಿವ ಸಂಪುಟ ಸೇರಿಸಿರುವುದು ತಪ್ಪು. ಯಾವುದೇ ವೈಜ್ಞಾನಿಕ ಆಧಾರಗಳಿಲ್ಲದೆ ಬಲಗೈ ಮತ್ತು ಎಡಗೈ ಜಾತಿಗಳ ಗುಂಪುಗಳ ಮಧ್ಯೆ 50%-50% ರಂತೆ ಹಂಚಲು ಸಚಿವ ಸಂಪುಟ ತಿರ್ಮಾನಿಸಿರುವುದು ಸರಿಯಲ್ಲ ಎಂದು ಅಗ್ರಹಿಸಿದ್ದಾರೆ.

ಹಿಂದಿನ 15% ಮೀಸಲಾತಿಯಲ್ಲಿ ಒಳಮೀಸಲಾತಿ ಕಲ್ಪಿಸುವುದು ನ್ಯಾಯಾಂಗದ ಉಲ್ಲಂಘನೆಯಾಗಿದೆ. ಪರಿಶಿಷ್ಟ ಜಾತಿಯ ಹಿಂದಿನ 15% ಮೀಸಲಾತಿಯಲ್ಲಿ ಒಳಮೀಸಲಾತಿ ಅಸಾಧ್ಯ. ಅಂತಹ ಸೂತ್ರವು ವಿಧಾನ ಸಭೆಯ ಉಭಯ ಸದನಗಳಲ್ಲಿ ಅಂಗೀಕರಿಸಲ್ಪಡಬೇಕು. ಇದೆಲ್ಲ ಕಾರಣದಿಂದ ನಾಗಮೋಹನ್ ದಾಸ್ ವರದಿಯನ್ನೇ ತಿರಸ್ಕರಿಸಬೇಕು ಎಂದು ಒತ್ತಾಯಿಸಿದ್ದಾರೆ.

**ನ್ಯಾ. ನಾಗಮೋಹನ್ ದಾಸ್ ಆಯೋಗದ ವರದಿ ತಿರಸ್ಕಾರಕ್ಕೆ ಒತ್ತಡ**

### 3 ವರ್ಗಕ್ಕೂ ಒಳಮೀಸಲಾತಿ ಲಭ್ಯವಾಗದಿದ್ದರೆ ಎಸ್‌ಸಿ ಜನರಲ್ ಎಂದು ಪರಿಗಣನೆ



ಒಂದು ವೇಳೆ ನೇಮಕಾತಿ ಹುದ್ದೆಗಳಲ್ಲಿ ರೋಸ್ಟರ್ ಪ್ರಕಾರ ಎಸ್‌ಸಿ ಸಮುದಾಯದ ಮೂರೂ ವರ್ಗಗಳಾದ ಎ, ಬಿ, ಸಿಗೆ ಒಳ ಮೀಸಲಾತಿ ಲಭ್ಯವಾಗದಿದ್ದಲ್ಲಿ, ನೇಮಕಾತಿ ವೇಳೆ ಎಸ್‌ಸಿ ಜನರಲ್ ಅಂತ ಪರಿಗಣಿಸಲಾಗುವುದು. ಅಂದರೆ ಎ, ಬಿ,ಸಿ ವರ್ಗಗಳಿಗೆ ಮೆರಿಟ್ ಆಧಾರದಲ್ಲಿ ಒಳಮೀಸಲಾತಿ ಕಲ್ಪಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ಉದಾಹರಣೆಗೆ ಯಾವುದೇ ಸಂಸ್ಥೆಗಳಲ್ಲಿ 8 ಹುದ್ದೆಗಳಿಗಿಂತ ಕಡಿಮೆ ಹುದ್ದೆಗಳಿಗೆ ಪ್ರಪ್ರಥಮ ಒಳಮೀಸಲಾತಿ ಆಧಾರಿತ ನೇಮಕಾತಿ ಪ್ರಕ್ರಿಯೆ ತೆಗೆದುಕೊಳ್ಳುವಾಗ, ರೋಸ್ಟರ್ ಪ್ರಕಾರ ಎ ಮತ್ತು ಬಿಗೆ ಒಳಮೀಸಲಾತಿ ಲಭ್ಯವಾಗಿ, ಸಿ ವರ್ಗಕ್ಕೆ ಒಳ ಮೀಸಲಾತಿ ಲಭ್ಯವಾಗದಿದ್ದಲ್ಲಿ ಮೂರು ವರ್ಗಗಳಿಗೆ ಒಳ ಮೀಸಲಾತಿ ನೀಡಲಾಗುವುದಿಲ್ಲ. ಬದಲಿಗೆ ಪ್ರಥಮ ಬಿಂದು ಮೀಸಲಾತಿಗಾಗಿ 3 ವರ್ಗಗಳ ಪೈಕಿ, ಹೆಚ್ಚು ಅರ್ಹತೆ ಹೊಂದಿರುವ ಪರಿಶಿಷ್ಟ ಜಾತಿ ವರ್ಗದ ಅಭ್ಯರ್ಥಿಗೆ ಅವಕಾಶ ನೀಡಲಾಗುವುದು.

**ಎ'ಗೆ 5.25%, 'ಬಿ'ಗೆ 5.25%, 'ಸಿಗೆ 4.50% ನೀಡಲು ಸಂಪುಟ ಸಭೆ ತೀರ್ಮಾನ**

### ಬೇಡಿಕೆ ಏನೇನು?

ಒಳ ಮೀಸಲಾತಿ ಹಂಚಿಕೆಯನ್ನೇ ವಿರೋಧಿಸುತ್ತಿರುವ ಬಲಗೈ ಸಮುದಾಯ ನ್ಯಾ.ನಾಗಮೋಹನ್‌ದಾಸ್ ರವರ ಆಯೋಗದ ವರದಿಯನ್ನೇ ಸಂಪೂರ್ಣವಾಗಿ ತಿರಸ್ಕರಿಸುವಂತೆ ಒತ್ತಡ ಹೇರಿದೆ. ಸರ್ಕಾರದ ಹಿಂದಿನ ನಿರ್ಧಾರವನ್ನು ಮರುಪರಿಶೀಲಿಸಿ ಸದರಿ ನಿರ್ಣಯವನ್ನು ಕೈಬಿಡುವಂತೆ ಬಲಗೈ ಒತ್ತಾಯ ಮಾಡಲಾಗಿದೆ. ನಾಗಮೋಹನ್ ದಾಸ್ ವರದಿಯೇ ಅವೈಜ್ಞಾನಿಕ ಮತ್ತು ಅಪೂರ್ಣವಾದ ದತ್ತಾಂಶ ಎಂಬುವುದು ಇವರ ವಾದವಾಗಿದೆ.

ನಾಗಮೋಹನ್ ದಾಸ್ ಆಯೋಗವು ಪ್ರತಿ ಜಿಲ್ಲೆಯಲ್ಲೂ ಸಮೀಕ್ಷೆಯನ್ನು ಪೂರ್ಣಗೊಳಿಸಿಲ್ಲ. ಬೆಂಗಳೂರು ಮಹಾನಗರದಲ್ಲಿ ಕೇವಲ 48% ಮತ್ತು ಜಿಲ್ಲೆಗಳಲ್ಲಿ 52% ಮಾತ್ರ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ. ಇದೇ ಅಪೂರ್ಣವಾದ ದತ್ತಾಂಶದ ಆಧಾರದ ಮೇಲೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂಬುವುದು ಆಕ್ಷೇಪವಾಗಿದೆ.

ಅವೈಜ್ಞಾನಿಕ ಮತ್ತು ಅಪೂರ್ಣವಾದ ದತ್ತಾಂಶವನ್ನು ಆಧರಿಸಿ ಒಳಮೀಸಲಾತಿಯನ್ನು ಕಲ್ಪಿಸುವುದು ಸರಿಯಲ್ಲ. ಇದು ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗಿದೆ.

**ಸದರಿ ನಿರ್ಣಯವನ್ನು ಕೈಬಿಡುವಂತೆ ಬಲಗೈ ಒತ್ತಾಯ**

## ಬೆಂಗಳೂರಿನಲ್ಲಿ ಕಟ್ಟಡಗಳ ಎತ್ತರದ ನಿರ್ಬಂಧ ಸಡಿಲಿಸಿ; ಕೇಂದ್ರ ರಕ್ಷಣಾ ಸಚಿವರಿಗೆ ಡಿ.ಕೆ.ಶಿವಕುಮಾರ್ ಮನವಿ

• ಉದಯವಾಹಿನಿ, ಬೆಂಗಳೂರು

ರಕ್ಷಣಾ ಇಲಾಖೆ ವಿಮಾನ ನಿಲ್ದಾಣಗಳ ಸುತ್ತಮುತ್ತಲ ಪ್ರದೇಶದಲ್ಲಿ ವಿಧಿಸಲಾಗಿರುವ ಕಟ್ಟಡಗಳ ಎತ್ತರದ ನಿರ್ಬಂಧಗಳು ಬೆಂಗಳೂರಿನ ಪ್ರಗತಿಗೆ ಅಡ್ಡಿಯಾಗಿದ್ದು, ಸುರಕ್ಷತೆ ಹಾಗೂ ಪ್ರಗತಿಯ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಿರ್ಬಂಧಗಳನ್ನು ಸಡಿಲಗೊಳಿಸಿ ಸಮಸ್ಯೆಗಳಿಗೆ ಪರಿಹಾರ ನೀಡುವಂತೆ ಡಿಸಿಎಂ ಡಿ.ಕೆ. ಶಿವಕುಮಾರ್ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಮನವಿ ಮಾಡಿದರು. ನವದೆಹಲಿಯಲ್ಲಿ ಕೇಂದ್ರ ಸಚಿವರನ್ನು ಶುಕ್ರವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿ, ಅವರು ಮನವಿ ಪತ್ರ ಸಲ್ಲಿಸಿದರು.

ಬೆಂಗಳೂರಿನ ರಕ್ಷಣಾ ಇಲಾಖೆ ಸುಪರ್ದಿಯ ವಿಮಾನ ನಿಲ್ದಾಣಗಳ 20 ಕಿ.ಮೀ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ನಿರಾಕ್ಷೇಪಣಾ ಪತ್ರ ನೀಡುವಾಗ ವಿಮಾನ ನಿಲ್ದಾಣದ ಅಧಿಕಾರಿಗಳು ವಿಪರೀತ ನಿರ್ಬಂಧಗಳನ್ನು ವಿಧಿಸುತ್ತಿದ್ದಾರೆ. ಬೆಂಗಳೂರು ವಿಶ್ವದ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದೆ. ಎಚ್‌ಎಎಲ್ ವಿಮಾನ ನಿಲ್ದಾಣ ಬೆಂಗಳೂರಿನ ಹೃದಯ ಭಾಗದಲ್ಲಿದ್ದು, ಅಭಿವೃದ್ಧಿ ಕಾಮಗಾರಿಗಳಿಗೆ ಹೆಚ್ಚಿನ ಬೇಡಿಕೆ ಇದೆ. ಆದರೆ ಹೆಚ್ಚುವರಿಯಾಗಿ ವಿಧಿಸಲಾಗಿರುವ ನಿರ್ಬಂಧಗಳು ಈ ಪ್ರದೇಶಗಳಲ್ಲಿ ಅಭಿವೃದ್ಧಿಗೆ ಅಡ್ಡಿಯಾಗಿವೆ ಎಂದು ಪತ್ರದಲ್ಲಿ ವಿವರಿಸಿದ್ದಾರೆ.




ಈ ವಿಚಾರವಾಗಿ ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿಗಳು, ರಕ್ಷಣಾ ಸಚಿವಾಲಯದ ರಕ್ಷಣಾ ಉತ್ಪಾದನಾ ಇಲಾಖೆ ಕಾರ್ಯದರ್ಶಿಗಳು ಹಾಗೂ ರಕ್ಷಣಾ ಕಾರ್ಯದರ್ಶಿಗಳಿಗೆ ಪತ್ರಗಳನ್ನು ಬರೆಯಲಾಗಿದೆ. ವಿಮಾನ ಸುರಕ್ಷತೆ ಹಾಗೂ ನಗರದ ಅಭಿವೃದ್ಧಿ ಎರಡರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ನಡೆಸಿ, ಎದುರಾಗಿರುವ ಸಮಸ್ಯೆಗಳನ್ನು ಪರಿಹರಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿ ಎಂದು ಮನವಿ ಮಾಡಿದ್ದಾರೆ.

ಪ್ರಸ್ತುತ ಬೆಂಗಳೂರಿನಲ್ಲಿ ನಾಲ್ಕು ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿದ್ದು, ಅವುಗಳಲ್ಲಿ ಎಚ್‌ಎಎಲ್ ಹಾಗೂ ಯಲಹಂಕ ವಾಯುನೆಲೆ ರಕ್ಷಣಾ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ವಿಮಾನ ನಿಲ್ದಾಣಗಳ ಸುತ್ತಮುತ್ತಲ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಮಾಡಲು ವಿಮಾನ ನಿಲ್ದಾಣ ಅಧಿಕಾರಿಗಳಿಂದ ನಿರಾಕ್ಷೇಪಣ ಪತ್ರ ಪಡೆಯಬೇಕಾಗಿದೆ. ವಿಮಾನ ನಿಲ್ದಾಣದ ಸುತ್ತಮುತ್ತಲ 15 ಕಿ.ಮೀ ವ್ಯಾಪ್ತಿಯಲ್ಲಿ ಕಟ್ಟಡಗಳ ಎತ್ತರದ ಮಿತಿಯನ್ನು 150 ಮೀ. ನಿಗದಿಪಡಿಸಲಾಗಿದೆ ಎಂದು ಜಿ.ಎಸ್.ಆರ್ 751 (ಇ) ನಿಯಮದಲ್ಲಿ ಸೂಚಿಸಲಾಗಿದೆ. ಆದರೆ ರಕ್ಷಣಾ ಇಲಾಖೆ ವಿಮಾನ ನಿಲ್ದಾಣಗಳು ಈ ವಿಪರೀತ ನಿರ್ಬಂಧ ಹೇರುವುದರ ಜತೆಗೆ 150 ಮೀ. ಎತ್ತರದ ಮಿತಿಯನ್ನು 15 ಕಿ.ಮೀ ಮೀರಿ 20 ಕಿ.ಮೀ ವರೆಗೂ ವಿಸ್ತರಿಸಿವೆ. ಈ ನಿರ್ಬಂಧಗಳು ಈ ಬೆಂಗಳೂರು ನಗರದ ಪ್ರಗತಿಗೆ ಮಾರಕವಾಗಿವೆ. ಸಿಂಗಾಪುರ, ಆಂಸ್ಟರ್ಡ್ಯಾಮ್, ಡಲ್ಲಾಸ್, ಲಂಡನ್ ಹಾಗೂ ದುಬೈ ಸೇರಿದಂತೆ ಅನೇಕ ನಗರಗಳಲ್ಲಿ ವಿಮಾನ ನಿಲ್ದಾಣಗಳನ್ನು ಕಚೇರಿ, ಮನರಂಜನೆ ಸೇರಿದಂತೆ ವಿವಿಧೋದ್ದೇಶಕ್ಕೆ ಬಳಸಲಾಗುತ್ತಿದೆ.

ಈ ನಗರಗಳಲ್ಲಿ ವಿಮಾನ ನಿಲ್ದಾಣಗಳು ಕೇವಲ ಸಂಚಾರ ಉದ್ದೇಶಕ್ಕೆ ಮಾತ್ರವಲ್ಲದೇ ಉದ್ಯೋಗದ ಕೇಂದ್ರವಾಗಿ ನಗರ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ.

ಹೀಗಾಗಿ ಜಿ.ಎಸ್.ಆರ್ 751 (ಇ) ನಿಯಮವನ್ನು ಸಡಿಲಗೊಳಿಸಬೇಕು. 150 ಮೀ. ಎತ್ತರದ ಮಿತಿಯನ್ನು 20 ಕಿ.ಮೀ ಬದಲಿಗೆ 15 ಕಿ.ಮೀ ವ್ಯಾಪ್ತಿಗೆ ಸೀಮಿತಗೊಳಿಸಬೇಕು ಎಂದು ರಾಜ್ಯ ಸರ್ಕಾರದ ವಿವಿಧ ಅಧಿಕಾರಿಗಳು ಕೇಂದ್ರ ರಕ್ಷಣಾ ಇಲಾಖೆ ಅಧಿಕಾರಿಗಳಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆ.

## ಖಾಲಿ ಹುದ್ದೆಗಳ ಭರ್ತಿ ಮಾಡದಿದ್ರೆ ರಾಜ್ಯಾದ್ಯಂತ ಉಗ್ರ ಹೋರಾಟ

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಧಾರವಾಡ ಸೇರಿ ರಾಜ್ಯದ ವಿವಿಧೆಡೆ ಉದ್ಯೋಗಾಕಾಂಕ್ಷಿಗಳಿಂದ ಬೃಹತ್ ಪ್ರತಿಭಟನೆಗಳು ನಡೆದಿವೆ. ಸರ್ಕಾರ ಯುವಕರ ಆಶಯಗಳಿಗೆ ಸ್ಪಂದಿಸಿ, ಖಾಲಿ ಹುದ್ದೆಗಳ ಭರ್ತಿಗೆ ಸ್ಪಷ್ಟ ವೇಳಾಪಟ್ಟಿ ಪ್ರಕಟಿಸಿ, ನೇಮಕಾತಿ ಪ್ರಕ್ರಿಯೆಯನ್ನು ಈ ಕೂಡಲೇ ಪ್ರಾರಂಭಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳ್ಳಲಿದೆ ಎಂದು ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿ ಸಂಘಟನೆಯ ರಾಜ್ಯಾಧ್ಯಕ್ಷ ಕಾಂತ್ ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಅವರು, ಇಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಸ್ಪಷ್ಟ ಹಾಗೂ ತಕ್ಷಣದ ನಿರ್ಧಾರ ಕೈಗೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ಉಂಟಾಗುವ ಯಾವುದೇ ಅನಾಹುತಗಳಿಗೆ ಸರ್ಕಾರವೇ ನೇರ ಹೊಣೆಯಾಗುತ್ತದೆ. ಯುವಕರ ಭವಿಷ್ಯವನ್ನು ನಿರ್ಲಕ್ಷಿಸುವ ಧೋರಣೆ ಇನ್ನು ಸಹಿಸಲಾಗದು. ನಮ್ಮ ಹಕ್ಕಿಗಾಗಿ ಹೋರಾಟ ಮುಂದುವರಿಯಲಿದೆ ಎಂದು ತಿಳಿಸಿದ್ದಾರೆ.

ರಾಜ್ಯದ ಪ್ರತೀ ಜಿಲ್ಲೆಯಲ್ಲೂ ಹೋರಾಟ ನಡೆಸಿದ್ದೇವೆ. ಇದು ಕೇವಲ ಒಂದು ಸಂಘಟನೆಯ ಹೋರಾಟವಲ್ಲ. ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ, ಪರಿಶ್ರಮ ಮತ್ತು ನಿರೀಕ್ಷೆಗಳ ಪ್ರತಿಬಿಂಬವಾಗಿದೆ. ವಿದ್ಯಾರ್ಥಿಗಳು ವರ್ಷಗಳ ಕಾಲ ಶ್ರಮಿಸಿ, ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಂಡಿದ್ದಾರೆ. ಆದರೆ ನೇಮಕಾತಿ ವಿಳಂಬದಿಂದ ಅವರ ಕನಸುಗಳು ಅನಿಶ್ಚಿತತೆಯಲ್ಲಿ ಸಿಲುಕಿವೆ. ನಿರುದ್ಯೋಗಿ ಯುವಕರ ನೋವು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಸರ್ಕಾರ ಯುವಕರ ಆಶಯಗಳಿಗೆ ಸ್ಪಂದಿಸಿ, ಖಾಲಿ ಹುದ್ದೆಗಳ ಭರ್ತಿಗೆ ಸ್ಪಷ್ಟ ವೇಳಾಪಟ್ಟಿ ಪ್ರಕಟಿಸಬೇಕು ಎಂದು ಆಗ್ರಹಿಸಿದರು.




**ಯುವಕರ ಭವಿಷ್ಯವನ್ನು ನಿರ್ಲಕ್ಷಿಸುವ ಧೋರಣೆ**



**ಕೆಪಿಎಸ್‌ಸಿ ಅಕ್ರಮಗಳ ಸಿಬಿಐಗೆ ಒಪ್ಪಿಸಿ**

**ವರ್ಷಗಳಿಂದ ಯುವಜನರ ಭವಿಷ್ಯ ಅನಿಶ್ಚಿತತೆಯಲ್ಲಿ ತೂಗುತ್ತಿದೆ. ಉದ್ಯೋಗದ ನಿರೀಕ್ಷೆಯಲ್ಲಿ ಕಾಯುತ್ತಿರುವ ಸಾವಿರಾರು ಅಭ್ಯರ್ಥಿಗಳ ಸಹನೆಗೆ ಮಿತಿ ಇದೆ. ಕೆಪಿಎಸ್‌ಸಿಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಸಿಬಿಐ ತನಿಖೆಗೆ ತಕ್ಷಣ ಒಪ್ಪಿಸಬೇಕು. ನೇಮಕಾತಿ ವ್ಯವಸ್ಥೆಯ ಮೇಲಿನ ಜನರ ನಂಬಿಕೆಯನ್ನು ಮರುಸ್ಥಾಪಿಸುವುದು ಅಗತ್ಯ. ಪಾರದರ್ಶಕತೆ ಇಲ್ಲದೆ, ನ್ಯಾಯ ಇಲ್ಲದೆ, ಯುವಜನರಿಗೆ ಸಮಾನ ಅವಕಾಶ ಸಿಗದು ಎಂದು ಕಾಂತ್ ಕುಮಾರ್ ತಿಳಿಸಿದ್ದಾರೆ.**

## ಮಹೇಶ್ ಶೆಟ್ಟಿ ತಿಮರೋಡಿ ಗಡಿಪಾರು ಆದೇಶ ಪ್ರಶ್ನಿಸಿದ್ದ ಅರ್ಜಿ ತೀರ್ಪು ಕಾಯ್ದಿರಿಸಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಬೆಳ್ತಂಗಡಿ ವಿದ್ಯಾರ್ಥಿನಿ ಸಾವಿನ ಕುರಿತು ಹೋರಾಟ ನಡೆಸುತ್ತಿರುವ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರಿನ ಮಾನ್ವಿ ತಾಲ್ಲೂಕಿಗೆ ಮೂರನೇ ಬಾರಿಗೆ ಗಡಿಪಾರು ಮಾಡಿ ಹೊರಡಿಸಿರುವ ಆದೇಶ ಪ್ರಶ್ನಿಸಿರುವ ಸಲ್ಲಿಸಿರುವ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್, ತೀರ್ಪನ್ನು ಕಾಯ್ದಿರಿಸಿದೆ.

ತಮ್ಮನ್ನು ಮಾನ್ವಿಗೆ ಗಡಿಪಾರು ಮಾಡಿದ್ದ ಪುತ್ತೂರು ಉಪವಿಭಾಗಾಧಿಕಾರಿ ಕ್ರಮವನ್ನು ಪ್ರಶ್ನಿಸಿ ಮಹೇಶ್ ಶೆಟ್ಟಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದಂ ಅವರಿದ್ದ ನ್ಯಾಯಪೀಠ ವಿಚಾರಣೆ ನಡೆಸಿತು.

ಇದಕ್ಕೂ ಮುನ್ನ, ವಿಚಾರಣೆಯಲ್ಲಿ ಅರ್ಜಿದಾರರ ಪರ ವಕೀಲರು, ಅರ್ಜಿದಾರರು ಬೆಳ್ತಂಗಡಿ ವಿದ್ಯಾರ್ಥಿನಿ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ನ್ಯಾಯ ದೊರಕಿಸುವುದಕ್ಕೆ ಸಂಬಂಧಿಸಿದಂತೆ ರ‍್ಯಾಲಿಗಳನ್ನು ನಡೆಸಿದ್ದಾರೆ. ಅಲ್ಲದೆ, ಹೋರಾಟಕ್ಕೆ ಮುಂದೆ ನಿಂತು ಬೆಂಬಲಿಸಿದ್ದಾರೆ. ಇದೇ ಕಾರಣದಿಂದ ಅವರ ವಿರುದ್ಧ ಹಲವು ಮಂದಿ ಕ್ಷುಲ್ಲಕ ಆರೋಪದಲ್ಲಿ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂದು ತಿಳಿಸಿದರು.

ಅಲ್ಲದೆ, ಈ ಹಿಂದೆ ಹೊರಡಿಸಿದ್ದ ಗಡಿಪಾರು ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದ್ದು, ಹೊಸದಾಗಿ ಆದೇಶಿಸುವುದಕ್ಕೆ ನಿರ್ದೇಶನ ನೀಡಲಾಗಿತ್ತು.

**ಈ ದಿನದ ದರ** ಪೆಟ್ರೋಲ್: 102.96 ₹/L ಡೀಸೆಲ್ : 90.99 ₹/L ಬಂಗಾರ: ₹15,404/Gram24ct ₹14,120/Gram22ct ಬೆಳ್ಳಿ: ₹260.00/Gram

## ರಾಜ್ ಕುಮಾರ್‌ಗೆ ಭಾರತರತ್ನ ನೀಡಿ ಶೋಭಾ ಕರಂದ್ಲಾಜೆ ಒತ್ತಾಯ

• ಉದಯವಾಹಿನಿ, ಬೆಂಗಳೂರು

ನಮ್ಮ ಸಂಸ್ಕೃತಿ, ಆಚಾರ- ವಿಚಾರ ಹೇಗಿರಬೇಕು ಎಂದು ಯುವ ಜನರಿಗೆ ಸಂದೇಶ ನೀಡುವ ಚಲನಚಿತ್ರಗಳನ್ನು ಕೊಟ್ಟ ಡಾ. ರಾಜ್ ಕುಮಾರ್ ಅವರಿಗೆ ಮರಣೋತ್ತರವಾಗಿ ಭಾರತ ರತ್ನ ನೀಡಬೇಕು ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಕೆ. ಗೋಪಾಲಯ್ಯ ಆಗ್ರಹಿಸಿದರು. ಶ್ರೀ ಕಂಠೀರವ ಸ್ಟುಡಿಯೋದಲ್ಲಿರುವ ಡಾ. ರಾಜ್ ಕುಮಾರ್ ಅವರ ಪುಣ್ಯ ಭೂಮಿ ಬಳಿ ಆಯೋಜಿಸಿದ್ದ ಡಾ. ರಾಜ್ ಕುಮಾರ್ ಅವರ 97ನೇ ಜನ್ಮ ದಿನಾಚರಣೆಯಲ್ಲಿ ಈ ಅಭಿಲಾಷೆ ವ್ಯಕ್ತಪಡಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ರಾಜ್ ಕುಮಾರ್ ಪ್ರತಿಷ್ಠಾನ ಜಂಟಿಯಾಗಿ ಈ ಕಾರ್ಯಕ್ರಮ ಆಯೋಜಿಸಿದ್ದವು. ರಾಜ್ ಕುಮಾರ್ ಅವರ ಚಲನಚಿತ್ರಗಳು ಕೇವಲ ಮನರಂಜನೆಗೆ ಮಾತ್ರ ಸೀಮಿತವಾಗಿರಲಿಲ್ಲ, ಸಮಾಜಕ್ಕೆ ಉತ್ತಮ ಸಂದೇಶ, ಮೌಲ್ಯಗಳನ್ನು ನೀಡುವ ಚಿತ್ರಗಳನ್ನು ಮಾತ್ರ ಮಾಡಿದ್ದಾರೆ. ಕೇವಲ ನಟರಾಗಿ ಉಳಿಯದೆ, ಜನರ ಮನದಲ್ಲಿ ಸಂತರಾಗಿದ್ದಾರೆ. ಸಮಾಧಿಗಳಿಗೆ ವರ್ಷಕ್ಕೆ ಒಂದು ಸಾರಿ ಪೂಜೆ ಮಾಡಲಾಗುತ್ತದೆ. ಆದರೆ ಜನರು ರಾಜ್ ಕುಮಾರ್ ಅವರಲ್ಲಿ ಅಧ್ಯಾತ್ಮ ಶಕ್ತಿಯನ್ನು ಗುರುತಿಸಿರುವುದರಿಂದಾಗಿ ಅವರ ಸಮಾಧಿಗೆ ಪ್ರತಿ ದಿನ ಸಾವಿರಾರು ಜನರು ಭೇಟಿ ನೀಡಿ ಪೂಜೆ ಸಲ್ಲಿಸುತ್ತಿದ್ದಾರೆ ಎಂದು ಶೋಭಾ ಕರಂದ್ಲಾಜೆ ತಿಳಿಸಿದರು.

## ಸಾಲ ನೀಡಿದವರ ಕಿರುಕುಳ: 13ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ

• ಉದಯವಾಹಿನಿ, ಬೆಂಗಳೂರು

ಸಾಲ ನೀಡಿದವರ ಕಿರುಕುಳದಿಂದ ಬೇಸತ್ತು ವ್ಯಕ್ತಿಯೊಬ್ಬರು ಅಪಾರ್ಟ್‌ಮೆಂಟ್ ಒಂದರ 13ನೇ ಮಹಡಿಗೆ ತೆರಳಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಂಪಿಗೆಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಗುರುವಾರ ರಾತ್ರಿ ನಡೆದಿದೆ. ವಿವೇಕಾನಂದ (45) ಆತ್ಮಹತ್ಯೆ ಮಾಡಿಕೊಂಡವರು.

ಅಪಾರ್ಟ್‌ಮೆಂಟ್‌ನಲ್ಲಿ ಫ್ಲ್ಯಾಟ್ ಕೊಂಡುಕೊಳ್ಳಬೇಕಿದೆ. ಒಮ್ಮೆ ಫ್ಲ್ಯಾಟ್ ನೋಡಬೇಕಿದೆ ಎಂದು ಹೇಳಿ ಮಹಡಿಗೆ ತೆರಳಿದ್ದರು. ಅಲ್ಲಿಂದ ಏಕಾಏಕಿ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಸಂಪಿಗೆಹಳ್ಳಿ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ವಿವೇಕಾನಂದ ಅವರು ಲಕ್ಷಾಂತರ ರೂಪಾಯಿ ಸಾಲ ಮಾಡಿದ್ದರು. ಸಾಲ ನೀಡಿದವರು ಹಣ ವಾಪಸ್ ನೀಡುವಂತೆ ಒತ್ತಡ ಹೇರಿದ್ದರು. ಇದರಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. ವಿವೇಕಾನಂದ ಅವರ ವಿರುದ್ಧ ಸಿಸಿಬಿ ಪೊಲೀಸರಲ್ಲಿ ದೂರು ನೀಡಲಾಗಿತ್ತು. ಪೊಲೀಸರು ವಿವೇಕಾನಂದ ಅವರನ್ನು ವಿಚಾರಣೆಗೆ ಕರೆದಿದ್ದರು. ವಿಚಾರಣೆ ವೇಳೆ ಸಿಸಿಬಿ ಪೊಲೀಸರು, ಕಿರುಕುಳ ನೀಡಿದ್ದರು ಎಂದು ವಿವೇಕಾನಂದ ಕುಟುಂಬಸ್ಥರು ಆರೋಪಿಸಿದ್ದಾರೆ.

## ಮದ್ಯದಂಗಡಿ ಕಾರ್ಯನಿರ್ವಹಣಾ ಅವಧಿ ಕಟ್ಟುನಿಟ್ಟಾಗಿ ಜಾರಿಗೆ ತನ್ನಿ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮದ್ಯದಂಗಡಿಗಳ ಕಾರ್ಯನಿರ್ವಹಣಾ ಅವಧಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತನ್ನಿ ಎಂದು ಬಿಜೆಪಿ ಶಾಸಕ ಎಸ್. ಸುರೇಶ್ ಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ. ಈ ಬಗ್ಗೆ ಪತ್ರ ಬರೆದಿರುವ ಅವರು, ರಾಜ್ಯದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ಎಂಆರ್‌ಪಿ ಮಾರಾಟ ಮಳಿಗೆಗಳು ಸೇರಿ ಹಲವು ಸ್ವರೂಪದ ಮದ್ಯದಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಯಾವ ಮದ್ಯದಂಗಡಿಗಳೂ ಬೆಳಗ್ಗೆ 10ಕ್ಕೆ ಮೊದಲು ತೆರೆಯುವಂತಿಲ್ಲ ಮತ್ತು ರಾತ್ರಿ ನಿಗದಿಪಡಿಸಿದ ಸಮಯಕ್ಕೆ ಬಾಗಿಲು ಹಾಕಬೇಕು ಎಂಬ ನಿಯಮವಿದೆ ಎಂದಿದ್ದಾರೆ.

ನಾನು ನನ್ನ ವಿಧಾನಸಭಾ ಕ್ಷೇತ್ರದಲ್ಲಿನ ಪ್ರತಿ ವಾರ್ಡ್‌ಗೆ ಭೇಟಿ ಕೊಟ್ಟು, ಜನರೊಂದಿಗೆ ಮಾತನಾಡುತ್ತೇನೆ. ಕಾರ್ಯನಿರ್ವಹಣಾ ಅವಧಿಯನ್ನು ಉಲ್ಲಂಘಿಸಿ ಮದ್ಯದಂಗಡಿಗಳು ವ್ಯಾಪಾರ ನಡೆಸುತ್ತಿರುವುದು ಈ ವೇಳೆ ನನ್ನ ಗಮನಕ್ಕೆ ಬಂದಿದೆ. ಹಲವು ಮದ್ಯದಂಗಡಿಗಳು ಬೆಳಗ್ಗೆ 6ರ ಹೊತ್ತಿಗೆ ತೆರೆದಿರುತ್ತವೆ. ಅವಧಿ ಮೀರಿ ತಡರಾತ್ರಿಯವರೆಗೂ ವ್ಯಾಪಾರ ನಡೆಸುತ್ತವೆ ಎಂದು ಆರೋಪಿಸಿದ್ದಾರೆ.

ರಾಜ್ಯದ ತೆರಿಗೆ ಆದಾಯಕ್ಕೆ ಮದ್ಯದಂಗಡಿಗಳು ಮಹತ್ವದ ಕೊಡುಗೆ ನೀಡುತ್ತವೆ ಎಂಬುದು ಸತ್ಯ. ಆದರೆ ಜನರ ಆರೋಗ್ಯ ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡಬೇಕಾದ್ದು ಸರ್ಕಾರದ ಹೊಣೆಗಾರಿಕೆ. ಕೇವಲ ಹೆಸರಿಗಷ್ಟೇ ಮದ್ಯಪಾನ ಸಂಯಮ ಮಂಡಳಿ ಸ್ಥಾಪಿಸಿದರೆ ಸಾಲದು. ಮದ್ಯದಂಗಡಿಗಳ ಕಾರ್ಯನಿರ್ವಹಣಾ ಅವಧಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತನ್ನಿ. ಇಲ್ಲವೇ ರಾಜ್ಯದಲ್ಲಿ ಮದ್ಯದಂಗಡಿಗಳು ದಿನದ 24 ಗಂಟೆಯೂ ತೆರೆದಿರಬಹುದು ಎಂದು ಫರ್ಮಾನು ಹೊರಡಿಸಿ ಎಂದು ಸವಾಲು ಹಾಕಿದ್ದಾರೆ.

## ಟಿಸಿಎಸ್ ವರ್ಲ್ಡ್ 10ಕೆ ಓಟ ಮೆಟ್ರೊ ಸಂಚಾರ ಬೇಗ

• ಉದಯವಾಹಿನಿ, ಬೆಂಗಳೂರು

ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು ಓಟದಲ್ಲಿ ಭಾಗವಹಿಸಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಏ.26ರಂದು ಮುಂಜಾನೆ 3 ಗಂಟೆಗೆ ಮೆಟ್ರೊ ಸಂಚಾರ ಆರಂಭಗೊಳ್ಳಲಿದೆ. ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ 10ಕೆ ಓಟ ಆರಂಭಗೊಳ್ಳಲಿದೆ. ಮೆಟ್ರೊ ಸಂಚಾರವು ಬೈಯಪ್ಪನಹಳ್ಳಿ ಟರ್ಮಿನಲ್‌ನಿಂದ ಬೆಳಿಗ್ಗೆ 3ಕ್ಕೆ, ಮಾದಾವರ ಟರ್ಮಿನಲ್‌ನಿಂದ 3.20ಕ್ಕೆ, ರೇಷ್ಮೆ ಸಂಸ್ಥೆ ಟರ್ಮಿನಲ್‌ನಿಂದ 3.30ಕ್ಕೆ ಹಾಗೂ ಚಲ್ಲಘಟ್ಟ ಟರ್ಮಿನಲ್‌ನಿಂದ 3.35ಕ್ಕೆ ಆರಂಭಗೊಳ್ಳಲಿದೆ. ಮೊದಲ ಒಂದು ಗಂಟೆ ಪ್ರತಿ 15 ನಿಮಿಷಕ್ಕೊಂದು ಮೆಟ್ರೊ ಸಂಚರಿಸಲಿದೆ. ಆ ನಂತರ ಬೆಳಿಗ್ಗೆ 7ರವರೆಗೆ ಪ್ರತಿ 30 ನಿಮಿಷಕ್ಕೊಂದು ಟ್ರೈನ್ ಇರಲಿದೆ. ಬೆಳಿಗ್ಗೆ 7ರಿಂದ ನಿಯಮಿತ ವೇಳಾಪಟ್ಟಿಯಂತೆ ಸಂಚರಿಸಲಿದೆ. ಪ್ರತಿ ಭಾನುವಾರ ಬೆಳಿಗ್ಗೆ 7ಕ್ಕೆ ಸಂಚಾರ ಆರಂಭವಾಗುತ್ತಿತ್ತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

## ರಣಬಿಸಿಲಿಗೆ ಒಣಗಿದ ಶುಕ್ರವಾರ ಸಂತೆ

• ಉದಯವಾಹಿನಿ, ವಿಜಯಪುರ

ರಣಬಿಸಿಲಿಗೆ ಪಟ್ಟಣದ ಸಂತೆ ವ್ಯಾಪಾರದ ಮೇಲೆ ಹೊಡೆತ ಬಿದ್ದಿದೆ. ಇದರಿಂದ ರೈತರು ಮತ್ತು ಸಣ್ಣ ವ್ಯಾಪಾರಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರಸ್ತುತ ಬಿಸಿಲಿನ ತಾಪಮಾನ 37 ಡಿಗ್ರಿ ಸೆಲ್ಸಿಯಸ್ ದಾಟಿದೆ. ಸದ್ಯ ಸುಡು ಬಿಸಿಲಿಗೆ ಪಟ್ಟಣದಲ್ಲಿ ನಡೆಯುವ ಶುಕ್ರವಾರ ಸಂತೆ ಬಿಕೋ ಎನ್ನಿಸುತ್ತಿದೆ. ಒಂದೆಡೆ ಬಿಸಿಲಿಗೆ ಹಸಿರು ಸೊಪ್ಪು, ತರಕಾರಿಗಳು ತಾಜಾತನ ಕಳೆದುಕೊಂಡರೆ, ಮತ್ತೊಂದೆಡೆ ಗ್ರಾಹಕರಿಲ್ಲದೆ ವ್ಯಾಪಾರ ವಹಿವಾಟು ಕುಸಿತ ಕಂಡಿದೆ.

ಸಂತೆಯಲ್ಲಿ ಸೊಪ್ಪು, ತರಕಾರಿ, ದಿನಸಿ, ಹಣ್ಣುಗಳನ್ನು ಮಾರಾಟ ಮಾಡುವ ಸಣ್ಣ ವ್ಯಾಪಾರಿಗಳು ಬಿಸಿಲಿನ ಝಳಕ್ಕೆ ದೊಡ್ಡ ಛತ್ರಿಗಳ ಆಶ್ರಯದಲ್ಲಿ ಗ್ರಾಹಕರಿಗಾಗಿ ಕಾದು ಕುಳಿತುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಬೆಳಗ್ಗೆಯಿಂದ ಸಂಜೆವರೆಗೂ ವ್ಯಾಪಾರ ನಡೆಸಿದರೂ ಹಾಕಿದ ಬಂಡವಾಳ ಬರುತ್ತಿಲ್ಲ ಎನ್ನುತ್ತಾರೆ ವ್ಯಾಪಾರಸ್ಥರು. ಹಿಂದೆ ಸಂತೆಯಲ್ಲಿ ದಿನವಿಡೀ ವ್ಯಾಪಾರ ನಡೆಯುತ್ತಿತ್ತು. ಜನಜಂಗುಳಿ ಹೆಚ್ಚಾಗಿರುತ್ತಿತ್ತು. ಆದರೆ, ಈಗ ಬಿಸಿಲಿಗೆ ಹೆದರಿ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಸಂತೆಯ ಕಡೆ ಸುಳಿಯುತ್ತಿಲ್ಲ, ಸಣ್ಣ ವ್ಯಾಪಾರಿಗಳು ನಷ್ಟದ ಹಾದಿ ಹಿಡಿದಿದ್ದೇವೆ ಎಂದು ನೊಂದ ವ್ಯಾಪಾರಿ ಪುಷ್ಪ ತಿಳಿಸಿದರು.

ಪ್ರಸ್ತುತ ಬಿಸಿಲಿನ ತಾಪಮಾನ ವಿಪರೀತವಾಗಿದ್ದು, ವಾರದ ಸಂತೆಗೆ ಮೊದಲಿನಷ್ಟು ಗ್ರಾಹಕರು ಬರುತ್ತಿಲ್ಲ. ಬೆಳಗ್ಗೆ ಮತ್ತು ಸಂಜೆ ಮಾತ್ರ ಗ್ರಾಹಕರು ತರಕಾರಿಗಳನ್ನು ಖರೀದಿಸುತ್ತಿದ್ದಾರೆ. ಈಗ ಈರುಳ್ಳಿ, ಆಲೂಗಡ್ಡೆ ಸೇರಿದಂತೆ ಬಹುತೇಕ ತರಕಾರಿಗಳ ಬೆಲೆ ಕುಸಿದಿದೆ. ಬೆಳೆಗೆ ಹಾಕಿದ ಬಂಡವಾಳ ಕೈಗೆ ಬರುತ್ತಿಲ್ಲ, ನಷ್ಟ ಅನುಭವಿಸುವಂತಾಗಿದೆ ಎಂದು ರೈತ ನಾಗರಾಜು ತಿಳಿಸಿದರು.


# ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ಮತ್ತೆ ಜನಿವಾರ ವಿವಾದ

## ಸರ್ಕಾರದ ವಿರುದ್ಧ ಬಿಜೆಪಿ ಕಿಡಿ, ಹಿಂದೂ ವಿರೋಧಿ ನೀತಿ ಎಂದು ವಾಗ್ದಾಳಿ

• ಉದಯವಾಹಿನಿ, ಬೆಂಗಳೂರು

- ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ಮತ್ತೆ ಜನಿವಾರ ವಿವಾದ ಶುರು
- ಪರೀಕ್ಷಾ ಮಂಡಳಿಯ ಕ್ರಮಕ್ಕೆ ಬಿಜೆಪಿ ವಾಗ್ದಾಳಿ
- ಇದು ಹಿಂದೂ ವಿರೋಧಿ ನೀತಿ ಎಂದು ಕಿಡಿಕಾರಿದ ಆರ್ ಅಶೋಕ್

ರಾಜ್ಯದಲ್ಲಿ ಮತ್ತೆ ಜನಿವಾರ ವಿವಾದ ತಲೆದೋರಿದೆ. ಕಳೆದ ವರ್ಷ ಸಿಇಟಿ, ನೀಟ್ ಪರೀಕ್ಷಾ ಕೇಂದ್ರದಲ್ಲಿ ಜನಿವಾರ ಮತ್ತು ಮಾಂಗಲ್ಯ ವಿವಾದ ತಲೆದೋರಿತ್ತು. ಬೆಂಗಳೂರಿನ ಕೋರಮಂಗಲದ ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಯೊಬ್ಬನಿಗೆ ಜನಿವಾರ ತೆಗೆಸಿ ಪರೀಕ್ಷೆ ಬರೆಯುವಂತೆ ಸೂಚನೆ ನೀಡಲಾಗಿದೆ. ಆದರೆ, ಇದಕ್ಕೆ ಬಿಜೆಪಿ ತೀವ್ರ ವಿರೋಧ ವ್ಯಕ್ತಪಡಿಸಿದೆ. ಸರ್ಕಾರದ ನಡೆದ ಹಿಂದೂ ವಿರೋಧಿ ನೀತಿ ಎಂದು ಕಿಡಿಕಾರಿದೆ.



ಈ ಕುರಿತಾಗಿ ವಿಪಕ್ಷ ನಾಯಕ ಆರ್ ಅಶೋಕ್ ಟ್ವೀಟ್ ಮಾಡಿ, ಮಾಂಗಲ್ಯ, ಜನಿವಾರ ತೆಗೆಸುವ ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರದ ಕುಕೃತ್ಯಗಳು ಮುಂದುವರಿಯುತ್ತಲೇ ಇವೆ! ಕಳೆದ ವರ್ಷ ಸಿಇಟಿ, ನೀಟ್ ಪರೀಕ್ಷೆಗಳ ಸಂದರ್ಭದಲ್ಲಿ ಜನಿವಾರ ಕತ್ತರಿಸಿ, ಕೆಪಿಎಸ್ಸಿ ಪರೀಕ್ಷೆಯಲ್ಲಿ ಮಾಂಗಲ್ಯ ತೆಗೆಸಿ ಪರೀಕ್ಷೆ ಬರೆಯುವಂತೆ ಹೇಳಿದ್ದ ಕಾಂಗ್ರೆಸ್ ಸರ್ಕಾರ ಈ ವರ್ಷವೂ ತನ್ನ ಹಳೆ ಚಾಳಿ ಮುಂದುವರಿಸಿದೆ ಎಂದು ಕಿಡಿಕಾರಿದ್ದಾರೆ.

**ಬಿಜೆಪಿ ಆರೋಪ ಏನು?:** ಬೆಂಗಳೂರಿನ ಕೋರಮಂಗಲದ ಸಿಇಟಿ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಯೊಬ್ಬನಿಗೆ ಜನಿವಾರ ತೆಗೆಸಿ ಪರೀಕ್ಷೆ ಬರೆಯುವಂತೆ ಒತ್ತಾಯಿಸುವ ಮೂಲಕ ಮತ್ತೊಮ್ಮೆ ಹಿಂದೂ ಸಮಾಜದ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ತಂದಿದೆ. ಕಾಂಗ್ರೆಸ್ ಆಡಳಿತದಲ್ಲಿ ಒಂದೆಡೆ ಹಿಂದೂಗಳಿಗೆ ರಕ್ಷಣೆಯಿಲ್ಲ, ಇನ್ನೊಂದೆಡೆ ಹೀಗೆ ಹಿಂದೂಗಳ ನಂಬಿಕೆ, ಆಚಾರಗಳ ಮೇಲೆ ದಾಳಿ ಮಾಡುವ ಕೆಟ್ಟ ರಾಜಕಾರಣ ಮಾಡುತ್ತಿದೆ. ಈ ಹಿಂದೆ ಕೆ.ಪಿ.ಎಸ್.ಸಿ ಪರೀಕ್ಷೆ ನಡೆಯುವ ಸಂದರ್ಭದಲ್ಲಿ, ಮಹಿಳೆಯೊಬ್ಬರ ಮಾಂಗಲ್ಯಸರವನ್ನು ತೆಗೆಸಿದ್ದರು, ಈ ಬಗ್ಗೆ ಮಾಧ್ಯಮದವರು ಕಾಂಗ್ರೆಸ್ಸಿಗರನ್ನು ಪ್ರಶ್ನಿಸಿದರೆ, ಏಯ್ ಅದು ರೂಲ್ಸು ಕಣ್ರಿ ಎಂದು ಅಬ್ಬರಿಸಿದ್ದರು. ಆದರೆ ಅದೇ ಮಾಧ್ಯಮದವರು ಹಾಗಾದರೆ ರೂಲ್ಸ್ ಪ್ರಕಾರ ಹಿಜಾಬ್ ಅನ್ನು ಏಕೆ ತೆಗೆಸಲಿಲ್ಲ ಎಂದು ಮರು ಪ್ರಶ್ನೆ ಹಾಕಿದರೆ ಅದಕ್ಕೆ ಕಾಂಗ್ರೆಸ್ಸಿಗರದ್ದು ನೋ ಕಾಮೆಂಟ್ಸ್..ನೋ ಕಾಮೆಂಟ್ಸ್'' ಎಂದು ಕಿಡಿಕಾರಿದ್ದಾರೆ.

ಸಿಇಟಿ ಪರೀಕ್ಷೆಯ ಹಾಲ್ ಟಿಕೆಟ್‌ನಲ್ಲಿ ಆಗಲಿ ಅಥವಾ ಇತರ ಯಾವುದೇ ಮಾರ್ಗಸೂಚಿಯಲ್ಲಿ ಜನಿವಾರ ಧರಿಸಬಾರದು ಎಂದು ಎಲ್ಲಿಯೂ ಸಹ ಉಲ್ಲೇಖವಾಗಿರಲಿಲ್ಲ. ಹಾಗಿದ್ದ ಮೇಲೆ ಜನಿವಾರ ತೆಗೆಯುವಂತೆ ಬಲವಂತ ಮಾಡುವುದು ಯಾಕೆ? ಈ ಅನ್ಯಾಯಕ್ಕೆ, ದೌರ್ಜನ್ಯಕ್ಕೆ ಯಾರು ಹೊಣೆ? ಎಂದು ಅವರು ಪ್ರಶ್ನಿಸಿದ್ದಾರೆ.



ಸಂವಿಧಾನದ ಬಗ್ಗೆ ಮಾರುದ್ದ ಭಾಷಣ ಬಿಗಿಯುವ ಸಿಎಂ ಸಿದ್ದರಾಮಯ್ಯ ಜನಿವಾರ ಧರಿಸಿದ ವಿದ್ಯಾರ್ಥಿಯ ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿರುವುದು ಕಣ್ಣಿಗೆ ಕಾಣಿಸುತ್ತಿಲ್ಲವೇ? ರಾಜ್ಯದಲ್ಲಿರುವ ಕಾಂಗ್ರೆಸ್ ಅಲಿಯಾಸ್ ಆಧುನಿಕ ಮುಸ್ಲಿಂ ಲೀಗ್ ಸರ್ಕಾರ ಷರಿಯಾ ಕಾನೂನನ್ನು ಅನಧಿಕೃತವಾಗಿ ಜಾರಿಗೆ ತಂದಿದೆ. ಹಿಂದೂ ಆಚಾರ-ವಿಚಾರಗಳನ್ನು ಕಾಂಗ್ರೆಸ್ ದ್ವೇಷಿಸುತ್ತಿದೆ. ಒಂದೆಡೆ ರಂಜಾನ್ ತಿಂಗಳಲ್ಲಿ ಉರ್ದು ಮಾಧ್ಯಮ ಶಾಲೆಗಳ ಶಾಲಾ ಸಮಯವನ್ನು ಬದಲಾವಣೆ ಮಾಡುವ ಸರ್ಕಾರ ಮತ್ತೊಂದೆಡೆ ಪರೀಕ್ಷೆಯ ತಪಾಸಣೆ ನೆಪದಲ್ಲಿ ಮಾಂಗಲ್ಯ ತೆಗೆಯಲು, ಜನಿವಾರ ತುಂಡರಿಸಲು ಅವಕಾಶ ನೀಡುತ್ತಿದೆ ಎಂದು ಆರೋಪ ಮಾಡಿದ್ದಾರೆ.

ನ್ಯಾಯಾಲಯ ಸಮಾನ ವಸ್ತ್ರಸಂಹಿತೆಗೆ ಆದೇಶ ನೀಡಿದರೂ ಸಹ ಸಿದ್ದರಾಮಯ್ಯ ಸಾಹೇಬರು ಸೇರಿದಂತೆ ಕಾಂಗ್ರೆಸ್ ನಾಯಕರು ಹಿಜಾಬ್ ಹಕ್ಕುಗಳ ಬಗ್ಗೆ ಮಾತನಾಡಿದರು, ಬೀದಿಗಿಳಿದರು. ಆದರೆ ಶುಕ್ರವಾರ ಜನಿವಾರ ತುಂಡರಿಸಿದಾಗ ಅವರೆಲ್ಲರೂ ಮೌನಕ್ಕೆ ಶರಣಾಗಿದ್ದಾರೆ ಎಂದು ಅವರು ಆರೋಪ ಮಾಡಿದ್ದಾರೆ.

> ಜಾತಿಗಣತಿ ಹೆಸರಿನಲ್ಲಿ ಹಿಂದೂ ಸಮಾಜವನ್ನು ವಿಭಜಿಸುವುದು, ಹಿಂದೂ ಸಂಪ್ರದಾಯವನ್ನು ಮೂಢನಂಬಿಕೆ ಹೆಸರಿನಲ್ಲಿ ಅವಹೇಳನ ಮಾಡುವುದು, ಹಿಂದೂ ಆಚರಣೆ-ಸಂಪ್ರದಾಯಕ್ಕೆ ನಿರ್ಬಂಧ ಹೇರುವುದು, ಹಿಂದೂ ಧರ್ಮದ ಅವಹೇಳನ ಮಾಡುವವರಿಗೆ ಪ್ರಶಸ್ತಿ ನೀಡಿ ಗೌರವಿಸುವುದನ್ನು ಕಾಂಗ್ರೆಸ್ ನಿರಂತರವಾಗಿ ನಡೆಸುತ್ತಾ ಬಂದಿದೆ. ಇದಕ್ಕೆ ಮುಂದಿನ ದಿನಗಳಲ್ಲಿ ಸಂಘಟಿತ ಹಿಂದೂ ಸಮಾಜ ಉತ್ತರ ನೀಡಲಿದೆ. ಚಾಣಕ್ಯನ ಶಿಖೆಗೆ ಕೈಹಾಕಿದ ನಂದರ ಕಥೆಯಂತೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ.
>
> -ಆರ್ ಅಶೋಕ್ ವಿಪಕ್ಷ ನಾಯಕ

# ಬೆಂಗಳೂರಿನಲ್ಲಿ ನೀರಿನ ಸಮಸ್ಯೆ ಆಲಿಸಿದ ಜಲಮಂಡಳಿ ಅಧ್ಯಕ್ಷ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ನಗರದಾದ್ಯಂತ ಪ್ರಸ್ತುತ ಸಮರ್ಪಕವಾಗಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ಎಲ್ಲಾದರೂ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾದರೆ ತಕ್ಷಣವೇ ಸ್ಪಂದಿಸಲು ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಕಳೆದ ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ತೊಂದರೆ ಅನುಭವಿಸಿದ್ದ ಕನಕಪುರ ರಸ್ತೆ ಭಾಗದ ಬನಗಿರಿನಗರ, ಭುವನೇಶ್ವರಿನಗರ ಸೇರಿದಂತೆ ಹಲವು ಪ್ರದೇಶಗಳಿಗೆ ಶುಕ್ರವಾರ ಖುದ್ದು ಭೇಟಿ ನೀಡಿದ ಅವರು, ಪ್ರಸ್ತುತ ನೀರಿನ ಸರಬರಾಜು ಪರಿಸ್ಥಿತಿಯ ಕುರಿತು ಸ್ಥಳೀಯ ನಿವಾಸಿಗಳೊಂದಿಗೆ ಮುಕ್ತವಾಗಿ ಚರ್ಚಿಸಿ ಮಾಹಿತಿ ಪಡೆದುಕೊಂಡರು. ಈ ಬಾರಿಯ ಬೇಸಿಗೆಯಲ್ಲಿ ನೀರಿನ ಪೂರೈಕೆ ಸುಧಾರಿಸಿರುವ ಬಗ್ಗೆ ಸ್ಥಳೀಯರು ಅಧ್ಯಕ್ಷರ ಬಳಿ ಸಂತಸ ಹಂಚಿಕೊಂಡರು. ಬನಗಿರಿ ನಗರದ ನಿವಾಸಿ ಸುಬ್ಬಮ್ಮ ಎಂಬುವವರು ಮಾತನಾಡಿ, ಕಳೆದ ಬೇಸಿಗೆಯಲ್ಲಿ ನೀರಿಗೆ ಸಾಕಷ್ಟು ತೊಂದರೆಯಾಗಿತ್ತು. ಆದರೆ ಈ ಬಾರಿ ಜಲಮಂಡಳಿಯಿಂದ ಮುಂಜಾಗ್ರತಾ ಕ್ರಮವಾಗಿ ಸಾಕಷ್ಟು ಮೂಲಸೌಕರ್ಯಗಳನ್ನು ಒದಗಿಸಿರುವುದರಿಂದ ನಮಗೆ ಯಾವುದೇ ಸಮಸ್ಯೆಯಾಗಿಲ್ಲ, ಎಂದು ಹರ್ಷ ವ್ಯಕ್ತಪಡಿಸಿದರು. ನಿವಾಸಿ ಮಲ್ಲಪ್ಪ ಅವರು ಪ್ರತಿಕ್ರಿಯಿಸಿ, ಮಿನಿ ಟ್ಯಾಂಕ್‌ಗಳ ಅಳವಡಿಕೆ ಹಾಗೂ ಕಾವೇರಿ ನೀರಿನ ಸಂಪರ್ಕ ಕಲ್ಪಿಸಿರುವುದರಿಂದ ನಮಗೆ ಬಹಳ ಅನುಕೂಲವಾಗಿದೆ. ಜಲಮಂಡಳಿ ಅಧಿಕಾರಿಗಳು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಆದರೆ, ನಮ್ಮ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಇನ್ನೂ ಕಲ್ಪಿಸಿಲ್ಲ. ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಅಧ್ಯಕ್ಷರಿಗೆ ಮನವಿ ಮಾಡಿದರು. ಸಂಚಾರಿ ಕಾವೇರಿ ಟ್ಯಾಂಕರ್‌ಗಳು, ಮಿನಿ ಟ್ಯಾಂಕ್‌ಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದೇವೆ ಎಂದು ವಿವರಿಸಿದರು.

# ಘನತ್ಯಾಜ್ಯ ಟೆಂಡರ್: ಕರೀಗೌಡ ವಿರುದ್ಧ ಲಂಚದ ಆರೋಪ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಘನತ್ಯಾಜ್ಯ ಟೆಂಡರ್ ಅಂತಿಮಗೊಳಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಮಂಡಳಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕರೀಗೌಡ ಲಂಚಕ್ಕೆ ಬೇಡಿಕೆ ಇರಿಸಿದ್ದು ಈ ಸಂಬಂಧ ಪ್ರಮಾಣ ಪತ್ರ ಸಲ್ಲಿಸಲು ಸಿದ್ಧ ಎಂದು ಗುತ್ತಿಗೆದಾರ ಎಸ್.ಎನ್.ಬಾಲಸುಬ್ರಮಣ್ಯಂ ಹೈಕೋರ್ಟ್‌ಗೆ ಅರುಹಿದ್ದಾರೆ. ಕರೀಗೌಡ ವಿರುದ್ಧ ಎಫ್‌ಐಆರ್ ದಾಖಲಿಸಿ ಎಸ್‌ಐಟಿ ತನಿಖೆಗೆ ನಿರ್ದೇಶಿಸಬೇಕು ಎಂದು ಕೋರಿ ಬೆಂಗಳೂರು ನಗರ ಸ್ವಚ್ಛತೆ, ಲಾರಿ ಮಾಲೀಕರ ಮತ್ತು ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಬಾಲಸುಬ್ರಮಣ್ಯಂ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಾಲಸುಬ್ರಮಣ್ಯಂ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್, ಸಿ.ವಿ.ರಾಮನ್ ನಗರ ಪ್ಯಾಕೇಜ್-1, ಶಾಂತಿನಗರ ತ್ಯಾಜ್ಯ ವಿಲೇವಾರಿ ಟೆಂಡರ್ ಪ್ಯಾಕೇಜ್-2, ದಾಸರಹಳ್ಳಿ ಪ್ಯಾಕೇಜ್-3ಕ್ಕೆ ಅರ್ಜಿದಾರರು ಸಲ್ಲಿಸಿದ ಎಲ್-1 ಬಿಡ್ ಅಂಗೀಕರಿಸಲಾಗಿತ್ತು. ಆದರೆ, ಕರೀಗೌಡ ಅವರು ಮಾ. 10ರಂದು ಅರ್ಜಿದಾರರನ್ನು ಕರೆಯಿಸಿಕೊಂಡು ಹಣ ನೀಡಬೇಕು. ಇಲ್ಲವಾದರೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ತುಷಾರ್ ಗಿರಿನಾಥ್ ಟೆಂಡರ್ ಅಂತಿಮಗೊಳಿಸುವುದಿಲ್ಲ ಎಂಬುದಾಗಿ ತಿಳಿಸಿದ್ದರು ಎಂದು ಆರೋಪಿಸಿದರು.

ಏಳು ವರ್ಷದ ಗುತ್ತಿಗೆಗೆ ಸರ್ಕಾರ, ನಗರಾಭಿವೃದ್ಧಿ ಇಲಾಖೆಗೆ ಶೇ 15ರಷ್ಟು ಲಂಚ ನೀಡಬೇಕೆಂದು ಕೇಳಿದ್ದಾರೆ. ಲಂಚ ನೀಡದಿದ್ದರೆ ಅರ್ಜಿದಾರರ ಇತರೆ ಗುತ್ತಿಗೆಗಳನ್ನೂ ರದ್ದುಪಡಿಸುತ್ತೇವೆ ಎಂದು ಬೆದರಿಸಿದ್ದಾರೆ. ಈ ಬಗ್ಗೆ ಮಾರ್ಚ್ 11ರಂದು ಮುಖ್ಯ ಕಾರ್ಯದರ್ಶಿಗೆ ದೂರನ್ನೂ ನೀಡಲಾಗಿದೆ. ಅಂತಿಮವಾಗಿ ಲಂಚದ ಬೇಡಿಕೆಗೆ ಒಪ್ಪದೇ ಹೋದ ಕಾರಣಕ್ಕೆ ಜುಲೈ 30ರಂದು ಕರೆಯಲಾಗಿದ್ದ ಟೆಂಡರ್ ಹಿಂಪಡೆದು ಹೊಸ ಟೆಂಡರ್ ಪ್ರಕಟಿಸಿ 2026ರ ಮಾರ್ಚ್ 25ರಂದು ಅಧಿಸೂಚನೆ ಹೊರಡಿಸಲಾಗಿದೆ ಎಂದು ಹೇಳಿದರು. ಈ ಹಿನ್ನೆಲೆಯಲ್ಲಿ ಟೆಂಡರ್ ಅಧಿಸೂಚನೆ ರದ್ದುಪಡಿಸಬೇಕು. ಅಧಿಕಾರ ದುರುಪಯೋಗ ಮಾಡಿಕೊಂಡು, ಟೆಂಡರ್ ಅಧಿಸೂಚನೆ ಹಿಂಪಡೆದ, ಲಂಚಕ್ಕೆ ಬೇಡಿಕೆಯಿಟ್ಟ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆಗೆ ಆದೇಶಿಸಬೇಕು ಎಂದು ಕೋರಿದರು.

ಈ ಮಾತಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು, ಕರೀಗೌಡ ಅವರು ಮಾರ್ಚ್ 10ರಂದು ಬೆಂಗಳೂರಿನಲ್ಲೇ ಇರಲಿಲ್ಲ. ದೆಹಲಿಯಲ್ಲಿದ್ದರು. ಬೆಳಿಗ್ಗೆ ಹೋಗಿ ರಾತ್ರಿ ಬಂದರು. ಆ ದಿನ ದೆಹಲಿಯಲ್ಲಿದ್ದ ಬಗ್ಗೆ ವಿಮಾನ ಪ್ರಯಾಣದ ಬೋರ್ಡಿಂಗ್ ಪಾಸ್ ಇದೆ ಎಂದರು. ಇದನ್ನು ಬಲವಾಗಿ ಅಲ್ಲಗಳೆದ ಪ್ರಸನ್ನ ಕುಮಾರ್, ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟಿರುವ ಬಗ್ಗೆ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಲಾಗುವುದು. ಒಂದು ವೇಳೆ ನಮ್ಮ ಆರೋಪ ಸುಳ್ಳು ಎಂದಾದರೆ ಮುಂದಿನ ಕಾನೂನು ಕ್ರಮಕ್ಕೆ ಸಿದ್ಧ ಎಂದು ಸವಾಲೆಸೆದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ವಿಚಾರಣೆ ಯನ್ನು ಶುಕ್ರವಾರಕ್ಕೆ ಮುಂದೂಡಿತು.

# ಗ್ರೇಟರ್ ಬೆಂಗಳೂರು ಪ್ರಾಧಿಕಾರ: ತ್ವರಿತವಾಗಿ ಚುನಾವಣೆ ನಡೆಸಲು ಜೆಡಿಎಸ್ ಆಗ್ರಹ

• ಉದಯವಾಹಿನಿ, ಬೆಂಗಳೂರು



ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ಪಾಲಿಕೆಗಳು, ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ತ್ವರಿತವಾಗಿ ನಡೆಸುವಂತೆ ರಾಜ್ಯ ಸರ್ಕಾರ ಹಾಗೂ ರಾಜ್ಯ ಚುನಾವಣಾ ಆಯೋಗದ ಮೇಲೆ ಒತ್ತಡ ಹಾಕಲು ಜೆಡಿಎಸ್ ನಿರ್ಧರಿಸಿದೆ.

ಜಿಬಿಎ ವ್ಯಾಪ್ತಿಯ ಪಾಲಿಕೆಗಳಿಗೆ ತಕ್ಷಣವೇ ಚುನಾವಣೆ ನಡೆಸಿದರೆ ಐದರಲ್ಲೂ ಕಾಂಗ್ರೆಸ್ ಸೋಲುವ ಸಾಧ್ಯತೆ ಇದೆ. ಈ ಕುರಿತು ಆತಂಕಗೊಂಡಿರುವ ರಾಜ್ಯ ಸರ್ಕಾರ ಚುನಾವಣೆ ಮುಂದೂಡುವ ನಾಟಕ ಮಾಡುತ್ತಿದೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಜೂನ್ 30ರ ಒಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗವು ತಕ್ಷಣವೇ ನಿರ್ದೇಶನ ನೀಡಬೇಕು. ಇಲ್ಲದಿದ್ದರೆ ನಿರಂತರ ಹೋರಾಟ ಹಮ್ಮಿಕೊಳ್ಳಬೇಕು ಎಂದು ಎಂ.ಕೃಷ್ಣಾರೆಡ್ಡಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಜೆಡಿಎಸ್ ಪ್ರಮುಖರ ಸಮಿತಿ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಪಾಲಿಕೆಗಳ ಚುನಾವಣೆ ಸೆಪ್ಟೆಂಬರ್‌ಗೆ ಮುಂದೂಡುವಂತೆ ಜಿಬಿಎಯು ಸರ್ಕಾರಕ್ಕೆ ಪತ್ರ ಬರೆದಿದೆ. ಜಿಬಿಎ ಮನವಿಯನ್ನು ಆಯೋಗವು ಪರಿಗಣಿಸಬಾರದು.

ಬಿಬಿಎಂಪಿಗೆ ಚುನಾವಣೆ ನಡೆದು 11 ವರ್ಷಗಳಾಗಿವೆ. ಸುಪ್ರೀಂಕೋರ್ಟ್ ನಿರ್ದೇಶನದಂತೆ ಕಾಲಮಿತಿಯ ಒಳಗೆ ಚುನಾವಣೆ ನಡೆಸಬೇಕು. ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳ ಅವಧಿ ಮುಗಿದು ಐದು ವರ್ಷಗಳಾದರೂ ಚುನಾವಣೆ ನಡೆಸಿಲ್ಲ. ವಿಳಂಬ ನೀತಿಯಿಂದ ಎಲ್ಲಾ ಪಕ್ಷದ ಕಾರ್ಯಕರ್ತರಿಗೂ ಅನ್ಯಾಯವಾಗಿದೆ. ಸ್ಥಳೀಯ ಹಂತದಲ್ಲಿ ಪ್ರಜಾಪ್ರಭುತ್ವ ನಾಶ ಮಾಡಲಾಗುತ್ತಿದೆ. ರಾಜ್ಯ ಸರ್ಕಾರದ ಧೋರಣೆ ಖಂಡಿಸಿ ಜಿಲ್ಲಾ ಹಂತದಲ್ಲಿ ಹೋರಾಟ ಹಮ್ಮಿಕೊಳ್ಳಲು ಸಮಿತಿಯಲ್ಲಿ ಚರ್ಚಿಸಲಾಗಿದೆ.

# ಕುತೂಹಲ ಮೂಡಿಸಿದ ಅತ್ಯಾಪ್ತರ ಜೊತೆಗಿನ ಸಿಎಂ ಸಭೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಕಾರಣದಲ್ಲಿ ದಿನಕ್ಕೊಂದು ಬೆಳವಣಿಗೆ ನಡೆಯುತ್ತಿದ್ದು, ಕಾಂಗ್ರೆಸ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರ ಆಪ್ತರೇ ಟಾರ್ಗೆಟ್ ಆಗುತ್ತಿರುವ ಆರೋಪ ಕೇಳಿಬಂದಿದೆ. ಈ ನಡುವೆ ಸಿಎಂ ಹಾಗೂ ಅತ್ಯಾಪ್ತ ಸಚಿವರಿಂದ ಬೆಂಗಳೂರಿನ ಕನ್ನಿಂಗ್ ಹ್ಯಾಮ್ ರಸ್ತೆಯ ಖಾಸಗಿ ಕಟ್ಟಡದಲ್ಲಿ ಪ್ರತ್ಯೇಕ ಸಭೆ ನಡೆದಿರೋದು ಭಾರಿ ಕುತೂಹಲಕ್ಕೆ ಕಾರಣವಾಗಿದೆ. ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಸೇರಿ ಸಚಿವರಾದ ಭೈರತಿ ಸುರೇಶ್, ಡಾ.ಜಿ.ಪರಮೇಶ್ವರ್, ಮಹದೇವಪ್ಪ, ಸತೀಶ್ ಜಾರಕಿಹೊಳಿ, ಜಮೀರ್ ಅಹ್ಮದ್, ದಿನೇಶ್ ಗುಂಡೂರಾವ್ ಭಾಗಿಯಾಗಿದ್ದರು.

**ಸಭೆಯಲ್ಲಿ ಚರ್ಚೆಯಾಗಿದ್ದೇನು?:** ಆಪ್ತರೇ ಟಾರ್ಗೆಟ್ ಆಗುತ್ತಿದ್ದರೂ ಸಿಎಂ ಮೌನವಾಗಿರು ವಿಚಾರದ ಬಗ್ಗೆ ಸಭೆಯಲ್ಲಿ ಸುದೀರ್ಘ ಸಮಾಲೋಚನೆ ನಡೆದಿದೆ.

ಇದು ಹೀಗೆ ಮುಂದುವರಿದರೆ ಪಕ್ಷದ ಹಿರಿಯ ನಾಯಕರ ಅಸ್ತಿತ್ವಕ್ಕೂ ಕುತ್ತು ಬರಬಹುದು ಏಕಪಕ್ಷೀಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿರುವುದು ಸರಿಯಲ್ಲ. ಇದರಿಂದ 2028ರ ಚುನಾವಣೆ ವೇಳೆ ಪಕ್ಷದ ಮೇಲೆ ಮುನಿಸಿಕೊಂಡು ಸಮುದಾಯಗಳು ದೂರ ಸರಿಯುತ್ತವೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ. ಹಿರಿಯ ನಾಯಕರ ಅನುಭವಗಳಿಗೆ ವಿರುದ್ಧವಾಗಿ ಪಕ್ಷದಲ್ಲಿ ಕೆಲವರು ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ಈ ನಡುವೆ ಸಿದ್ದರಾಮಯ್ಯ ಮೌನದಿಂದ ಕಾಂಗ್ರೆಸ್ ಪಕ್ಷಕ್ಕೆ ಡ್ಯಾಮೇಜ್ ಆಗುತ್ತಿದೆ. ಹೀಗಾಗಿ ತಾವು ತಕ್ಷಣ ಮಧ್ಯಪ್ರವೇಶ ಮಾಡಬೇಕೆಂದು ಸಿದ್ದರಾಮಯ್ಯನವರ ಮೇಲೆ ಸಭೆಯಲ್ಲಿ ಒತ್ತಡ ಹೇರಲಾಗಿದೆ ಎನ್ನಲಾಗಿದೆ.

**ಸಿಎಂ ಮತ್ತು ಆಪ್ತರ**



> ರಾಜ್ಯ ಕಾಂಗ್ರೆಸ್‌ನಲ್ಲಿ ಮಹತ್ವದ ಬೆಳವಣಿಗೆಯಾಗಿದ್ದು, ಸಿಎಂ ಸಿದ್ದರಾಮಯ್ಯ ತಮ್ಮ ಆಪ್ತ ಸಚಿವರೊಂದಿಗೆ ಪ್ರತ್ಯೇಕ ಸಭೆ ನಡೆಸಿದ್ದಾರೆ. ಮುಖ್ಯಮಂತ್ರಿಗಳ ಆಪ್ತರೇ ಟಾರ್ಗೆಟ್ ಆಗುತ್ತಿರೋದು ಮತ್ತು ಸಿದ್ದರಾಮಯ್ಯನವರ ಮೌನದ ಬಗ್ಗೆ ಸಭೆಯಲ್ಲಿ ಚರ್ಚೆನಡೆದಿದೆ ಎನ್ನಲಾಗಿದೆ. ಸಿದ್ದರಾಮಯ್ಯನವರ ಮಧ್ಯಪ್ರವೇಶಕ್ಕೆ ಒತ್ತಾಯಿಸಲಾಗಿದ್ದು, ಮತ್ತೊಂದೆಡೆ ಸಿಎಂ ಆಪ್ತ ಸಚಿವರು ನಡೆಸಿದ ಸಭೆಯ ಬಗ್ಗೆ ತನಗೆ ಮಾಹಿತಿ ಇಲ್ಲ.
>
> -ಡಿ.ಕೆ.ಶಿವಕುಮಾರ್ ಡಿಸಿಎಂ

**ಸಭೆ ಬಗ್ಗೆ ಡಿಕೆಶಿ ಹೇಳಿದ್ದೇನು?:** ಈ ನಡುವೆ ದೆಹಲಿಗೆ ಭೇಟಿ ನೀಡಿರುವ ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ರಾಜ್ಯ ರಾಜಕಾರಣದ ಇತ್ತೀಚಿನ ಬೆಳವಣಿಗೆಗಳ ಕುರಿತು ಪ್ರತಿಕ್ರಿಯಿಸಿದ್ದಾರೆ.

ಸಿಎಂ ಆಪ್ತ ಸಚಿವರು ನಡೆಸಿದ ಸಭೆಯ ಬಗ್ಗೆ ತನಗೆ ಮಾಹಿತಿ ಇಲ್ಲ. ಯಾರು ಆಪ್ತರು, ಯಾರು ಆಪ್ತರಲ್ಲ ಎಂಬುದು ತಮಗೆ ತಿಳಿದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಸರ್ಕಾರ ಮೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಚಿವ ಸಂಪುಟ ಪುನಾರಚನೆ ಅಗತ್ಯವಿದೆ. ಹೀಗಾಗಿ ಮೇ 20ರೊಳಗೆ ಏನಾದರೂ ಅನಿರೀಕ್ಷಿತ ಬೆಳವಣಿಗೆಗಳು ನಡೆಯಬಹುದು ಎಂದು ಡಿ.ಕೆ.ಶಿವಕುಮಾರ್ ಸೂಚ್ಯವಾಗಿ ತಿಳಿಸಿದ್ದಾರೆ.

# ಕಲಬುರಗಿ ಮಕ್ಕಳ ಅಪಹಾಸ್ಯವೇಕೆ? ವಿಪಕ್ಷಗಳಿಗೆ ಪ್ರಿಯಾಂಕ್ ಖರ್ಗೆ ತಿರುಗೇಟು

• ಉದಯವಾಹಿನಿ, ಬೆಂಗಳೂರು

### ವಿಪಕ್ಷಗಳ ಟೀಕೆ, ವ್ಯಂಗ್ಯಗಳಿಗೆ ಖರ್ಗೆ ಕೌಂಟರ್

**ಪ್ರಸಕ್ತ ಸಾಲಿನ ಕರ್ನಾಟಕ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, ಕಳೆದ ವರ್ಷಕ್ಕಿಂತ ಈ ಬಾರಿ ಉತ್ತಮ ಫಲಿತಾಂಶ ಬಂದಿದೆ. ಕಳೆದ ವರ್ಷ 80.04ರಷ್ಟು ವಿದ್ಯಾರ್ಥಿಗಳು ಪಾಸ್ ಆಗಿದ್ದರೆ ಈ ವರ್ಷ ಶೇ.94.01ರಷ್ಟು ಫಲಿತಾಂಶದೊಂದಿಗೆ ಶೇ.14ರಷ್ಟು ಫಲಿತಾಂಶ ಪ್ರಮಾಣ ಹೆಚ್ಚಳವಾಗಿದೆ. ಇನ್ನು ಕಲಬುರಗಿ ಕೊನೆ ಸ್ಥಾನದಲ್ಲಿದ್ದು, ಇದು ರಾಜಕೀಯ ವಾಗ್ಯುದ್ಧ ಕಾರಣವಾಗಿದೆ. ವಿಪಕ್ಷಗಳ ಟೀಕೆ, ವ್ಯಂಗ್ಯಗಳಿಗೆ ಖರ್ಗೆ ಕೌಂಟರ್ ಕೊಟ್ಟಿದ್ದಾರೆ.**

ಎಸ್‌ಎಸ್‌ಎಲ್‌ಸಿ ಫಲಿತಾಂಶ ಪ್ರಕಟವಾಗಿದ್ದು, ಕಳೆದ ವರ್ಷ 80.04ರಷ್ಟು ವಿದ್ಯಾರ್ಥಿಗಳು ಪಾಸ್ ಆಗಿದ್ದರೆ ಈ ವರ್ಷ ಶೇ.94.01ರಷ್ಟು ಫಲಿತಾಂಶದೊಂದಿಗೆ ಶೇ.14ರಷ್ಟು ಫಲಿತಾಂಶ ಪ್ರಮಾಣ ಹೆಚ್ಚಳವಾಗಿದೆ. ಇನ್ನು ಕಲಬುರಗಿ ಜಿಲ್ಲೆ ಕೊನೆಯ ಸ್ಥಾನ ಅಂದರೆ 35ನೇ ಸ್ಥಾನದಲ್ಲಿದೆ. ಆದರೂ ಕಳೆದ ವರ್ಷಕ್ಕಿಂತ ಶೇ.28.17ರಷ್ಟು ಫಲಿತಾಂಶದಲ್ಲಿ ಏರಿಕೆ ಕಂಡಿದೆ. ಇನ್ನು ಕಲಬುರಗಿ ಕೊನೆ ಸ್ಥಾನದಲ್ಲಿರುವುದನ್ನೇ ಅಸ್ತ್ರ ಮಾಡಿಕೊಂಡ ವಿಪಕ್ಷ ಬಿಜೆಪಿ ಹಾಗೂ ಜೆಡಿಎಸ್ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಕ್ ಖರ್ಗೆ ವಿರುದ್ಧ ಮುಗಿಬಿದ್ದಿವೆ. ಇನ್ನು ಇದಕ್ಕೆ ಖರ್ಗೆ ಸಹ ತಿರುಗೇಟು ನೀಡಿದ್ದಾರೆ. ಬಿಜೆಪಿ ಕಲಬುರಗಿಯ ವಿದ್ಯಾರ್ಥಿಗಳನ್ನು ಅವಮಾನಿಸುತ್ತಿದೆ. ಕಳೆದ ವರ್ಷಕ್ಕಿಂತ ಈ ಬಾರಿ ಉತ್ತಮ ಫಲಿತಾಂಶ ಬಂದಿದೆ. ನಿಮಗೆ ಸಮಸ್ಯೆ ಇದ್ರೆ ನನ್ನ ನಿಂದಿಸಿ, ಮಕ್ಕಳ ಅಪಹಾಸ್ಯವೇಕೆ? ಎಂದು ಪ್ರಶ್ನಿಸಿದ್ದಾರೆ.

ಕಲಬುರಗಿ ಕೊನೆ ಸ್ಥಾನ

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಕಲಬುರಗಿ ಕೊನೆಯ ಅಂದರೆ 35 ಸ್ಥಾನ ಪಡೆದುಕೊಂಡಿದ್ದಕ್ಕೆ ಬಿಜೆಪಿ ಹಾಗೂ ಜೆಡಿಎಸ್ ವ್ಯಂಗ್ಯ ಮಾಡಿದ್ದು, ಇದಕ್ಕೆ ಪ್ರಿಯಾಂಕ್ ಖರ್ಗೆ ಸಹ ಸಾಮಾಜಿಕ ತಾಲತಾಣಗಳ ಮೂಲಕ ಪ್ರತಿಕ್ರಿಯಿಸಿದ್ದಾರೆ. ಬಿಜೆಪಿ ಕಲಬುರಗಿಯ ವಿದ್ಯಾರ್ಥಿಗಳನ್ನು ಅವಮಾನಿಸ್ತಿದೆ. ಅವರ ಆತ್ಮಸ್ಥೈರ್ಯ, ಆತ್ಮವಿಶ್ವಾಸ ಅಡಗಿಸುವ ಪ್ರಯತ್ನ. ನಿಮಗೆ ಸಮಸ್ಯೆ ಇದ್ರೆ ನನ್ನ ನಿಂದಿಸಿ, ಮಕ್ಕಳ ಅಪಹಾಸ್ಯವೇಕೆ? ಕಲಬುರಗಿಯ ಮಕ್ಕಳನ್ನು ಅಪಹಾಸ್ಯ ಮಾಡ್ತಿರುವುದೇಕೆ? ಎಂದು ಪ್ರಶ್ನಿಸಿದ್ದಾರೆ.



ಕಲಬುರಗಿ ಜಿಲ್ಲೆಯ ಶೇಕಡಾವಾರು ಫಲಿತಾಂಶ 85%ರಷ್ಟಿದೆ. ಕಳೆದ ವರ್ಷಕ್ಕಿಂತ ಈ ಬಾರಿ ಉತ್ತಮ ಫಲಿತಾಂಶ ಬಂದಿದೆ. ಶೈಕ್ಷಣಿಕ ಗುಣಮಟ್ಟದ ಸುಧಾರಿಸಿಕೊಳ್ಳುವ ಶಕ್ತಿ ಮಕ್ಕಳಲ್ಲಿದೆ. ಆದರೆ ಪ್ರತಿ ಬಾರಿಯೂ ಕಲಬುರಗಿ ಜಿಲ್ಲೆಯ ಮಕ್ಕಳನ್ನು ಅವಮಾನಿಸ್ತಿರುವ ಬಿಜೆಪಿ ರಾಜಕೀಯ ದಿವಾಳಿತನದಿಂದ ಕೂಡಿದೆ. ಕಲಬುರಗಿ ಬಿಜೆಪಿಗರ ಮಕ್ಕಳಿಗೂ ದಡ್ಡರು ಎಂಬ ಹಣೆಪಟ್ಟಿಯನ್ನು ಬಿಜೆಪಿ ಕಟ್ಟುತ್ತಿದೆಯೇ? ಎಂದು ತಿರುಗೇಟು ನೀಡಿದ್ದಾರೆ.

**ಕಲಬುರಗಿ ಕೊನೆ ಸ್ಥಾನದಲ್ಲಿದ್ದೂ ಸುಧಾರಣೆ**

ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಕಲಬುರಗಿ ಜಿಲ್ಲೆ ಕೊನೆ ಸ್ಥಾನದಲ್ಲಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಕ್ರಮವಾಗಿ ಮೊದಲ, ಎರಡನೇ ಸ್ಥಾನದಲ್ಲಿವೆ. ಇನ್ನು ದ್ವಿತೀಯ ಪಿಯುಸಿ ಫಲಿತಾಂಶದಲ್ಲಿಯೂ ಕಲಬುರಗಿ 29ನೇ ಸ್ಥಾನದಲ್ಲಿತ್ತು.

ಆದ್ರೆ, ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಸುಧಾರಣೆ ಕಂಡಿದೆ. ಕಲಬುರಗಿ ಜಿಲ್ಲೆ ಕೊನೆಯ ಸ್ಥಾನದಲ್ಲಿದ್ದರೂ ಕಳೆದ ವರ್ಷಕ್ಕಿಂತ ಈ ಬಾರಿ ಶೇ.28.17ರಷ್ಟು ಫಲಿತಾಂಶದಲ್ಲಿ ಏರಿಕೆ ಕಂಡಿದೆ. ಇನ್ನು ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಶಿಕ್ಷಣ ಸಚಿವ ಮಧುಬಂಗಾರಪ್ಪ, ಉತ್ತರ ಕರ್ನಾಟಕ ಭಾಗದಲ್ಲಿ ನಾವು ಹೆಚ್ಚು ಶ್ರಮ ಹಾಕಿದ ಪರಿಣಾಮ ಕಲಬುರಗಿ ಸೇರಿದಂತೆ ವಿವಿಧ ಜಿಲ್ಲೆಗಳ ಫಲಿತಾಂಶದಲ್ಲಿ ಸುಧಾರಣೆಯಾಗಿದೆ. ಜಿಲ್ಲೆಯ ಅಧಿಕಾರಿಗಳು ವಿಶೇಷ ಕ್ಲಾಸ್, ಕೆಲವು ನಿಯಮಗಳನ್ನು ರೂಪಿಸುವ ಮೂಲಕ ಫಲಿತಾಂಶ ಸುಧಾರಣೆಗೆ ಕಾರಣವಾಗಿದ್ದಾರೆ ಎಂದು ಹೇಳಿದ್ದಾರೆ.

# ಲವರ್‌ಗೆ ಮಗುಕೊಟ್ಟ ಬಿಜೆಪಿ ಮುಖಂಡನ ಪುತ್ರ

## ಸಂತ್ರಸ್ತೆಗೆ ಮಾಸಿಕ 75 ಸಾವಿರ ರೂ. ಜೀವನಾಂಶ ನೀಡಲು ಹೈಕೋರ್ಟ್ ಆದೇಶ

• ಉದಯವಾಹಿನಿ, ಬೆಂಗಳೂರು

ಯುವತಿಯನ್ನು ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿ ಆಕೆಯ ಮಗುವಿಗೆ ತಂದೆಯಾದ ಆರೋಪ ಎದುರಿಸುತ್ತಿರುವ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಬಿಜೆಪಿ ಮುಖಂಡ ಪಿ.ಜಿ.ಜಗನ್ನಿವಾಸ ರಾವ್ ಪುತ್ರ ಕೃಷ್ಣ ಜೆ.ರಾವ್ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ಕರ್ನಾಟಕ ಹೈಕೋರ್ಟ್ ತಡೆ ನೀಡಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂಜಿನಿಯರಿಂಗ್ ವಿದ್ಯಾರ್ಥಿ ಕೃಷ್ಣ ಜೆ.ರಾವ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ಆರೋಪಿಯು ಸ್ವತಃ ಅಥವಾ ತನ್ನ ಪೋಷಕರ ಮೂಲಕ ಸಂತ್ರಸ್ತೆ, ಮಗುವಿನ ಅಗತ್ಯತೆಗಳನ್ನು ಪೂರೈಸಲು ಪ್ರತಿ ತಿಂಗಳು 75 ಸಾವಿರ ರೂಪಾಯಿ ಪಾವತಿಸಬೇಕು ಎಂಬ ಷರತ್ತಿಗೆ ಒಳಪಟ್ಟು ಪ್ರಕರಣದ ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ನ್ಯಾಯಾಲಯ ತಡೆ ನೀಡಿದೆ. ಅರ್ಜಿದಾರರು ಮುಂದಿನ ಒಂದು ವಾರದ ಒಳಗೆ ಸಂತ್ರಸ್ತೆಗೆ 75 ಸಾವಿರ ರೂಪಾಯಿಗಳನ್ನು ಪಾವತಿಸಬೇಕು ಅದಾದ ನಂತರ ಪ್ರತಿ ತಿಂಗಳು ಹಣ ಪಾವತಿಸಬೇಕು ಎಂದು ಪೀಠವು ಆದೇಶಿಸಿದ.

ಜೀವನಾಂಶ ಪಾವತಿಸ ಬೇಕು

**ಗುರುವಾರ ಆರೋಪಿಗೆ ತರಾಟೆಗೆ ತೆಗೆದುಕೊಂಡಿದ್ದ ಹೈಕೋರ್ಟ್:** ಮಗುವಿಗೆ ನೀನೇ ತಂದೆ ಎಂಬುದು ದೃಢಪಟ್ಟಿರುವಾಗ ಸಂತ್ರಸ್ತೆಯನ್ನು ಮದುವೆಯಾಗುವುದೇ ಸೂಕ್ತ. ಒಂದು ವೇಳೆ ಯುವತಿಯನ್ನು ಮದುವೆಯಾಗಿ ಬಂದರೆ ಮಾತ್ರ ಕ್ರಿಮಿನಲ್ ಪ್ರಕರಣವನ್ನು ರದ್ದುಪಡಿಸಲಾಗುವುದು. ಮದುವೆಯಾದ ನಂತರ ಯುವತಿಯನ್ನು ತ್ಯಜಿಸಿದರೆ ಮತ್ತೆ ಕೇಸ್ ಮರುಸ್ಥಾಪನೆಯಾಗಲಿದೆ ಎಂದು ನ್ಯಾಯಾಧೀಶರು ಕಠಿಣ ಸಂದೇಶ ನೀಡಿದರು.

ಜೊತೆಗೆ, ಸಂತ್ರಸ್ತೆ ಹಾಗೂ ಆಕೆಯ ಮಗುವಿನ ಜೀವನ ನಿರ್ವಹಣೆಗೆ ಪ್ರತಿ ತಿಂಗಳು ಹಣ ನೀಡುವ ಬಗ್ಗೆ ನಿಮ್ಮ ನಿಲುವೇನು? ಎಂದು ಅರ್ಜಿದಾರರ ಪರ ವಕೀಲರಿಗೆ ಪ್ರಶ್ನಿಸಿ, ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಿತ್ತು.

**ವಕೀಲರ ವಾದ ಏನಾಗಿತ್ತು?:** ಆರೋಪಿ ಕೃಷ್ಣ ಜೆ.ರಾವ್ ಪರ ವಾದ ಮಂಡಿಸಿದ ಹಿರಿಯ ವಕೀಲ ಪಿ.ಪಿ.ಹೆಗ್ಡೆ, ಅರ್ಜಿದಾರ ಮತ್ತು ಸಂತ್ರಸ್ತೆ ಕಳೆದ 7 ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಇಬ್ಬರೂ ವಯಸ್ಕರಾದ ಬಳಿಕವೇ ಅವರ ನಡುವೆ ದೈಹಿಕ ಸಂಬಂಧ ಏರ್ಪಟ್ಟಿದೆ. ಈ ಪ್ರಕರಣವನ್ನು ರಾಜಕೀಯ ಕಾರಣಗಳಿಗಾಗಿ ಆರೋಪಿಯ ತಂದೆಯ ತೇಜೋವಧೆ ಮಾಡಲು ಬಳಸಿಕೊಳ್ಳಲಾಗುತ್ತಿದೆ.

ಸಂಧಾನದ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ಪ್ರಕರಣಕ್ಕೆ ತಡೆ ನೀಡಬೇಕು ಎಂದು ಕೋರಿದರು. ಆದರೆ, ಕೋರ್ಟ್ ಈ ವಾದವನ್ನು ಸದ್ಯಕ್ಕೆ ಪುರಸ್ಕರಿಸದೆ, ಸಂತ್ರಸ್ತೆಯ ಭವಿಷ್ಯ ಮತ್ತು ಮಗುವಿನ ಹಿತದೃಷ್ಟಿಯಿಂದ ಮದುವೆಯಾಗುವಂತೆ ಸೂಚನೆ ನೀಡಿದೆ.

**ಪ್ರಕರಣದ ಹಿನ್ನೆಲೆ ಏನು?:** ಪುತ್ತೂರಿನ ಬಿಜೆಪಿ ಮುಖಂಡರ ಪುತ್ರ ಕೃಷ್ಣ ಜೆ.ರಾವ್ ವಿರುದ್ಧ ಯುವತಿಯೊಬ್ಬಳು ದೂರು ನೀಡಿದ್ದು, ಮದುವೆಯ ಭರವಸೆ ನೀಡಿ ತನ್ನನ್ನು ಗರ್ಭಿಣಿಯನ್ನಾಗಿಸಿ ಈಗ ಮದುವೆಯಾಗಲು ನಿರಾಕರಿಸುತ್ತಿದ್ದಾರೆ ಎಂದು ಆರೋಪಿಸಿದ್ದರು.

ಈ ಕುರಿತು ದಾಖಲಾಗಿರುವ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ಕೃಷ್ಣ ಹೈಕೋರ್ಟ್ ಮೆಟ್ಟಿಲೇರಿದ್ದರು.



- ಯುವತಿಯನ್ನು ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿ ಆಕೆಗೆ ಮಗು ಕೊಟ್ಟ ಬಿಜೆಪಿ ಮುಖಂಡನ ಪುತ್ರ ಕೃಷ್ಣ ಜೆ.ರಾವ್.
- ಕೃಷ್ಣ ಜೆ.ರಾವ್ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ಕರ್ನಾಟಕ ಹೈಕೋರ್ಟ್ ತಡೆ.
- ಸಂತ್ರಸ್ತೆ ಹಾಗೂ ಮಗುವಿನ ಅಗತ್ಯತೆಗಳನ್ನು ಪೂರೈಸಲು ಪ್ರತಿ ತಿಂಗಳು 75 ಸಾವಿರ ರೂಪಾಯಿ ಜೀವನಾಂಶ ಪಾವತಿಸಬೇಕು ಎಂಬ ಷರತ್ತು.

### ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ

ಯುವತಿಯನ್ನು ಮದುವೆಯಾಗುವುದಾಗಿ ನಂಬಿಸಿ ಮಗುವಿಗೆ ತಂದೆಯಾದ ಆರೋಪ ಎದುರಿಸುತ್ತಿರುವ ಪುತ್ತೂರು ಬಿಜೆಪಿ ಮುಖಂಡನ ಪುತ್ರ ಕೃಷ್ಣ ಜೆ. ರಾವ್ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ. ಆದರೆ, ಸಂತ್ರಸ್ತೆ ಹಾಗೂ ಮಗುವಿನ ನಿರ್ವಹಣೆಗಾಗಿ ಪ್ರತಿ ತಿಂಗಳು 75 ಸಾವಿರ ರೂ. ಪಾವತಿಸುವಂತೆ ಷರತ್ತು ವಿಧಿಸಿದೆ. ಸಂತ್ರಸ್ತೆಯನ್ನು ಮದುವೆಯಾದರೆ ಮಾತ್ರ ಪ್ರಕರಣ ಪೂರ್ಣ ರದ್ದುಪಡಿಸುವುದಾಗಿ ನ್ಯಾಯಾಲಯವು ಈ ಹಿಂದೆ ಸ್ಪಷ್ಟಪಡಿಸಿದೆ.

ಶ್ರೀಲಂಕಾದ ಪರಿಸ್ಥಿತಿ ಕರ್ನಾಟಕಕ್ಕೂ ಬರಲಿದೆ! ಗ್ಯಾರಂಟಿ ಟೀಕಿಸುತ್ತಾ ಭವಿಷ್ಯ ನುಡಿದ ಎಚ್‌ಡಿಕೆ

# ರಾಜ್ಯ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಎಚ್‌ಡಿಕೆ ತೀವ್ರ ವಾಗ್ದಾಳಿ

• ಉದಯವಾಹಿನಿ, ಮೈಸೂರು

ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳಿಂದ ಅಭಿವೃದ್ಧಿಶೀಲ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಆರ್ಥಿಕ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಇದು ಹೀಗೆ ಮುಂದುವರಿದರೆ ಶ್ರೀಲಂಕಾದ ಪರಿಸ್ಥಿತಿ ಕರ್ನಾಟಕಕ್ಕೂ ಬರಲಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕಳವಳ ವ್ಯಕ್ತಪಡಿಸಿದ್ದಾರೆ. ಕೆ.ಆರ್. ನಗರ ವಿಧಾನಸಭಾ ಕ್ಷೇತ್ರದ ಬಸವನಪುರದ ಗೇರದಡ ಹಾಗೂ ಕಂಚನಹಳ್ಳಿ ಗ್ರಾಮಗಳ ಶ್ರೀ ಮೇಲನಕಟ್ಟೆ ಗಣಪತಿ ದೇವಾಲಯ ಲೋಕಾರ್ಪಣೆ ಹಾಗೂ ಹೊಸ ಅಗ್ರಹಾರ ಗ್ರಾಮದಲ್ಲಿನ ಶ್ರೀ ಬಸವೇಶ್ವರ ಸ್ವಾಮಿ ದೇವಾಲಯದ ಗೋಪುರ ಲೋಕಾರ್ಪಣೆ ಹಾಗೂ ಶ್ರೀ ಬಸವೇಶ್ವರ ದೇವರ ಪ್ರಾಣಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಚಿವರು ಭಾಷಣ ಮಾಡಿದರು.



ಮಹಿಳೆಯರಿಗೆ 2000 ಕೊಡುತ್ತಿದ್ದಾರೆ ಎಂಬುದೇನು ಸರಿ. ಆದರೆ, ಆ ಮೊತ್ತವನ್ನು ರಾಜ್ಯ ಸರ್ಕಾರ ಹೇಗೆ ಕೊಡುತ್ತಿದೆ ಎಂಬುದನ್ನು ಜನರು ಗಮನವಿಟ್ಟು ನೋಡಬೇಕು. ಸಾಲ ಮಾಡಿ ತುಪ್ಪ ತಿನ್ನು ಎನ್ನುವ ಹಾಗೆ ಸರಕಾರ ಲಕ್ಷಾಂತರ ಕೋಟಿ ಸಾಲ ಮಾಡಿ ಗ್ಯಾರಂಟಿ ನೀಡುತ್ತಿದೆ. ಈಗಾಗಲೇ ಈ ಸರ್ಕಾರ 7 ಲಕ್ಷದ 26,000 ಕೋಟಿ ರೂಪಾಯಿ ಸಾಲ ಮಾಡಿದೆ. ಈ ಮೂಲಕ ರಾಜ್ಯದ 6:30 ಕೋಟಿ ಕನ್ನಡಿಗರ ಮೇಲೆ ಪ್ರತಿಯೊಬ್ಬರ ಮೇಲೆಯೂ ಕನಿಷ್ಠ ಒಂದು ಲಕ್ಷ ರೂಪಾಯಿ ಸಾಲವನ್ನು ವಿಧಿಸಿದೆ ಎಂದು ಕೇಂದ್ರ ಸಚಿವರು ಆರೋಪಿಸಿದರು.

**ರಾಜ್ಯದ ಖಜಾನೆ ಖಾಲಿ:** ಗ್ಯಾರಂಟಿಗಳ ಪರಿಣಾಮದಿಂದ ರಾಜ್ಯದ ಖಜಾನೆ ಖಾಲಿಯಾಗಿದೆ. ಸರಕಾರಕ್ಕೆ ಸರ್ಕಾರಿ ನೌಕರರಿಗೆ ಸಂಬಳ ಕೊಡುವ ಶಕ್ತಿಯನ್ನು ಸರ್ಕಾರ ಕಳೆದುಕೊಂಡಿದೆ. ಹಾಗೆಯೇ ಗ್ಯಾರಂಟಿಗಳ ಆಮಿಷವೊಡ್ಡಿ ಹಿಮಾಚಲ ಪ್ರದೇಶದಲ್ಲಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಪಕ್ಷವು ಆ ರಾಜ್ಯವನ್ನು ಆರ್ಥಿಕವಾಗಿ ಹಾಳು ಮಾಡಿದೆ. ಅಧಿಕಾರಿಗಳ ವೇತನದಲ್ಲಿ ಕಡಿತ ಮಾಡುತ್ತಿದೆ. ಸ್ವತಃ ರಾಜ್ಯದ ಅಧಿಕಾರಿ ವರ್ಗದ ಮುಖ್ಯಸ್ಥರಾಗಿರುವ ಮುಖ್ಯ ಕಾರ್ಯದರ್ಶಿ ವೇತನದಲ್ಲಿ ಕಡಿತ ಮಾಡಲಾಗಿದೆ ಎಂಬ ವರದಿಗಳು ಮಾಧ್ಯಮದಲ್ಲಿ ಬಂದಿದೆ. ಹಿಮಾಚಲ ಪ್ರದೇಶದ ಪರಿಸ್ಥಿತಿಯು ಕರ್ನಾಟಕಕ್ಕೆ ಬರಲಿದೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಕೆಲವು ವರ್ಷಗಳ ಹಿಂದೆ ಶ್ರೀಲಂಕಾ ಪರಿಸ್ಥಿತಿ ಏನಾಗಿತ್ತು ಎಂಬುದನ್ನು ಎಲ್ಲರೂ ಗಮನಿಸಿದ್ದೇವೆ. ಇವರು ಇದೇ ರೀತಿಯಾಗಿ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಕಳಪೆಯಾಗಿ ನಿರ್ವಹಣೆ ಮಾಡಿದರೆ ಶ್ರೀಲಂಕಾದ ಪರಿಸ್ಥಿತಿಯೇ ಕರ್ನಾಟಕಕ್ಕೂ ಬರಲಿದೆ ಎಂದು ಕೇಂದ್ರ ಸಚಿವರು ಎಚ್ಚರಿಕೆ ನೀಡಿದರು.

ಮಹಿಳೆಯರು 2000 ಹಣ ಪಡೆದು ಸಂಸಾರ ನಿರ್ವಹಣೆ ಮಾಡಲು ಸಾಧ್ಯವೇ? ನಿಮಗೆ ಇಲ್ಲಿ ಗೃಹಲಕ್ಷ್ಮಿ ಎಂದು ಹಣ ಕೊಡುತ್ತಾರೆ. ಬೆಲೆ ಏರಿಕೆ ಮತ್ತು ತೆರಿಗೆ ಹೇರಿಕೆಯಿಂದ ನಿಮ್ಮ ಪತಿಗಳ ಜೇಬಿಗೆ ಕತ್ತರಿ ಹಾಕುತ್ತಿದ್ದಾರೆ. ಅಲ್ಲದೆ ಮನಸೋಇಚ್ಛೆ ಸಾಲ ಮಾಡಿ ನಿಮ್ಮ ಮಕ್ಕಳ ಮೇಲೆಯೂ ಸಾಲ ಹೊರಿಸುತ್ತಿದ್ದಾರೆ ಎಂದು ಕುಮಾರಸ್ವಾಮಿ ಅವರು ಹೇಳಿದರು.

**ದೇವಾಲಯಗಳ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಕೇಂದ್ರ ಸಚಿವರು:** ಕೆ.ಆರ್. ನಗರ ಕ್ಷೇತ್ರದ ಬಸವನಪುರ, ಗೇರದಡ ಹಾಗೂ ಕಂಚನಹಳ್ಳಿ ಗ್ರಾಮಗಳ ಶ್ರೀ ಮೇಲನಕಟ್ಟೆ ಗಣಪತಿ ದೇವಾಲಯ ಲೋಕಾರ್ಪಣೆ, ಹೊಸ ಅಗ್ರಹಾರ ಗ್ರಾಮದಲ್ಲಿನ ಶ್ರೀ ಬಸವೇಶ್ವರ ಸ್ವಾಮಿ ದೇವಾಲಯದ ಗೋಪುರ ಲೋಕಾರ್ಪಣೆ, ಶ್ರೀ ಬಸವೇಶ್ವರ ದೇವರ ಪ್ರಾಣಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಚಿವರು, ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಮೇಲನಕಟ್ಟೆ ಗಣಪತಿ ದೇವಾಲಯ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು; ಬಸವನಪುರ, ಗೇರದಡ ಹಾಗೂ ಕಂಚನಹಳ್ಳಿ ಗ್ರಾಮಗಳ ಶ್ರೀ ಮೇಲನಕಟ್ಟೆ ಗಣಪತಿ ದೇವಾಲಯವನ್ನು ಲೋಕಾರ್ಪಣೆ ಮಾಡಿದ ಭಾಗ್ಯ ನನ್ನದಾಯಿತು. ಮಾಜಿ ಮಂತ್ರಿಗಳಾದ ಸಾ.ರಾ. ಮಹೇಶ್ ಅವರೊಂದಿಗೆ ಭಕ್ತಿ ಶ್ರದ್ಧೆಯಿಂದ ಪಾಲ್ಗೊಂಡ ಈ ಕಾರ್ಯಕ್ರಮವು ಬಹಳ ವಿಶೇಷವಾಗಿತ್ತು. ಪ್ರಕೃತಿಯ ನಡುವೆ ನಿರ್ಮಾಣಗೊಂಡಿರುವ ಈ ಪುಟ್ಟ ದೇವಾಲಯವು ಮನಸ್ಸಿಗೆ ಬಹಳಷ್ಟು ನೆಮ್ಮದಿಯನ್ನು ನೀಡುವ ಪುಣ್ಯಸ್ಥಳವಾಗಿದೆ ಎಂದು ಹೇಳಿದರು.

**ರಾಜ್ಯದ ಪ್ರತಿ ಪ್ರಜೆಯ ಮೇಲೆ ಕನಿಷ್ಠ ಒಂದು ಲಕ್ಷ ರೂಪಾಯಿ ಸಾಲ ಹೊರಿಸಿದೆ ಎಂಬುದನ್ನು ನಾನು ಎಲ್ಲಿ ಬೇಕಾದರೂ ಹೇಳುತ್ತೇನೆ. ಯಾವ ವೇದಿಕೆಯಲ್ಲಿ ಬೇಕಾದರೂ ಚರ್ಚೆಗೆ ತಯಾರಿದ್ದೇನೆ. ಅವರಿಗೆ ಧೈರ್ಯವಿದ್ದರೆ ಚರ್ಚೆಗೆ ಬರಲಿ ಎಂದು ರಾಜ್ಯ ಸರ್ಕಾರಕ್ಕೆ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಸವಾಲು ಹಾಕಿದರು. ರಾಜ್ಯದ ಆರ್ಥಿಕ ಸ್ಥಿತಿ ಸಂಪೂರ್ಣ ಹದಗೆಟ್ಟಿದೆ. ಇದು ಹೀಗೆ ಮುಂದುವರಿದರೆ ಶ್ರೀಲಂಕಾದ ಪರಿಸ್ಥಿತಿ ಕರ್ನಾಟಕಕ್ಕೂ ಬರಲಿದೆ ಎಂದು ಭವಿಷ್ಯ ನುಡಿದರು. ಅಲ್ಲದೆ, ಪಂಚ ಗ್ಯಾರಂಟಿ ಯೋಜನೆಗಳಿಂದ ಈ ಸಮಸ್ಯೆ ಉದ್ಭವಿಸಿದೆ.**
**- ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ**

### ಸಾಲಿಗ್ರಾಮ ಯೋಗ ನರಸಿಂಹ ಸ್ವಾಮಿ ದರ್ಶನ ಪಡೆದ ಎಚ್‌ಡಿಕೆ

**ಇವೆರಡು ಕಾರ್ಯಕ್ರಮಗಳ ನಂತರ ಸಾಲಿಗ್ರಾಮದ ಶ್ರೀ ಯೋಗ ನರಸಿಂಹಸ್ವಾಮಿ ದೇವಾಲಯಕ್ಕೆ ಆಗಮಿಸಿ ಪೂಜೆ ಸಲ್ಲಿಸಿದರು. ಮುಖಂಡರ ಜೊತೆ ದೇಗುಲಕ್ಕೆ ಬಂದ ಸಚಿವರ ಕೆಲಕಾಲ ಭಗವಂತನ ಸನ್ನಿಧಿಯಲ್ಲಿ ಇದ್ದರು.**

## ಜಿಟಿಟಿಸಿಯಿಂದ ಉದ್ಯೋಗಾವಕಾಶ : ಗಣೇಶ್ ಪ್ರಸಾದ್

• ಉದಯವಾಹಿನಿ, ಗುಂಡ್ಲುಪೇಟೆ



ಉದಯವಾಹಿನಿ ಚಿತ್ರ

ಉದ್ಯೋಗಾವಕಾಶ ನೀಡುವ ಅವಕಾಶ ಇರುವ ಜಿಟಿಟಿಸಿ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು ಎಂದು ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್ ಸಲಹೆ ನೀಡಿದರು. ಪಟ್ಟಣದ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ನಲ್-ಜಲ್ ಮಿತ್ರ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭ ಮತ್ತು ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ, 2026-27ನೇ ಸಾಲಿನ ಜಿಟಿಟಿಸಿ ತರಬೇತಿ ಕೋರ್ಸ್‌ಗಳ ಪ್ರವೇಶಾತಿ ಆಂದೋಲನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ತಾಲ್ಲೂಕಿನ ಯುವ ಜನತೆ ಜಿಟಿಟಿಸಿ ಯಂತಹ ಉತ್ತಮ ಸಂಸ್ಥೆಯ ಸದುಪಯೋಗ ಪಡೆಯುವಲ್ಲಿ ಹಿಂದೆ ಬಿದ್ದಿದ್ದಾರೆ. ಶಾಸಕನಾದ ಮೂರು ವರ್ಷದಲ್ಲಿ ಉದ್ಯೋಗಕ್ಕಾಗಿ ಜೆಎಸ್‌ಎಸ್ ಸೇರಿ ಹಲವು ಸಂಸ್ಥೆಗಳಿಗೆ ನೂರಾರು ಶಿಫಾರಸ್ಸು ಪತ್ರ ಕೊಟ್ಟಿದ್ದೇನೆ, ನಮ್ಮ ತಂದೆ ಎಚ್.ಎಸ್. ಮಹದೇವಪ್ರಸಾದ್ ಜಿಟಿಟಿಸಿ ಸಿದ್ಧ್ಯಾ ರಿಗೆ ಒತ್ತಡ ತಂದು 2007 ರಲ್ಲೇ ಜಿಟಿಟಿಸಿಯನ್ನು ಗುಂಡ್ಲುಪೇಟೆಯಲ್ಲಿ ಮಾಡಿಸಿದ್ದರು. ಈಗ ರಾಜ್ಯದಲ್ಲಿ 35 ಜಿಟಿಟಿಸಿ ಸೆಂಟರ್‌ಗಳವೆ ಎಂದು ತಿಳಿಸಿದರು.

ತೆರಿಗೆ ಪದ್ಧತಿ ಸರಿಯಿಲ್ಲದ ಕಾರಣ ಇತರೆ ಕಾರಣಗಳಿಗೆ ತಾಲ್ಲೂಕಿನಲ್ಲಿ ಟೆಕ್ಸ್ ಟೈಲ್ಸ್ ಇಂಡಸ್ಟ್ರಿ ಮಾಡುವ ಉದ್ದೇಶ ಈಡೇರಿಲ್ಲ. ಸಾಗಣೆ ವೆಚ್ಚ ಹೆಚ್ಚಾಗುವ ಕಾರಣ ಇತರೆ ಉದ್ಯಮಗಳ ಸ್ಥಾಪನೆಗೂ ಕೈಗಾರಿಕೋದ್ಯಮಿಗಳು ಬರುತ್ತಿಲ್ಲ. ನಲ್ ಜಲ್ ತರಬೇತಿಯಿಂದ ಆರಂಭಿಕ ಹಂತದ ಸಮಸ್ಯೆ ನಿವಾರಣೆ ಜತೆಗೆ ಮಹಿಳೆಯರಿಗೆ ಉದ್ಯೋಗ ಸೃಷ್ಟಿಗೆ ಸರ್ಕಾರ ಅವಕಾಶ ಮಾಡಿದೆ.

ಒಂದೊಂದು ತರಬೇತಿ ಪಡೆದವರು ಗ್ರಾಮ ಪಂಚಾಯತಿ ಮಟ್ಟದಲ್ಲಿ ಉತ್ತಮ ಕೆಲಸ ಮಾಡುವ ಮೂಲಕ ಯಶಸ್ವಿಯಾಗಿ ಎಂದು ಹಾರೈಸಿದರು. ನಂತರ ನಲ್ ಜಲ್ ತರಬೇತಿ ಪ್ರಮಾಣ ಪತ್ರ ವಿತರಿಸಿದರು.

ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಅಧಿಕಾರಿ ವಿಜಯ್ ಮಾತನಾಡಿ, ಹಿಂದೆ ಗಂಧದ ಕಡ್ಡಿ, ಮೇಣದ ಬತ್ತಿ ತಯಾರಿಕೆಗೆ ತರಬೇತಿಗಳು ಸೀಮಿತವಾಗಿದ್ದ ಕಾರಣ ಉದ್ಯೋಗ ಕೊಡುವ ಅವಕಾಶ ಆಗಲಿಲ್ಲ. ಈಗ ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ, ಜೀವನೋಪಾಯ ಇಲಾಖೆಯಿಂದ ಸಾಕಷ್ಟು ಅನುಕೂಲ ಆಗುತ್ತಿದೆ. ಇದು ಸಾಧ್ಯವಾಗಲು ಎಚ್.ಎಸ್.ಮಹದೇವಪ್ರಸಾದ್ ದೂರದೃಷ್ಟಿ ಕಾರಣ ಎಂದು ಸ್ಮರಿಸಿದರು.


## ಕೇಂದ್ರದ ಯೋಜನೆ ಅರ್ಹ ಫಲಾನುಭವಿಗಳಿಗೆ ತಲುಪಿಸಲು ಎಚ್‌ಡಿಕೆ ಸೂಚನೆ

• ಉದಯವಾಹಿನಿ, ಕೆ.ಆರ್. ನಗರ

ಕೇಂದ್ರ ಸರ್ಕಾರದ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಮುಟ್ಟಿಸಲು ಅಧಿಕಾರಿಗಳು ಅತ್ಯಂತ ದಕ್ಷತೆ ಮತ್ತು ಕ್ಷಮತೆಯಿಂದ ಕೆಲಸ ಮಾಡಬೇಕು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಸೂಚಿಸಿದರು ಮಂಡ್ಯ ಲೋಕಸಭಾ ಕ್ಷೇತ್ರದ ಕೆ.ಆರ್. ನಗರದಲ್ಲಿ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಆಶ್ರಯದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಅಂಗವಿಕಲರಿಗೆ ತ್ರಿಚಕ್ರವಾಹನಗಳನ್ನು ವಿತರಿಸಿ ಅವರು ಮಾತನಾಡಿದರು.

ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಂಗವಿಕಲರಿಗೆ ಅನೇಕ ಉಪಯುಕ್ತ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದೆ. ಅಂಗವಿಕಲರಿಗೆ ಅನುಕಂಪ ಅಗತ್ಯವಿಲ್ಲ. ಅವರನ್ನು ಸಬಲೀಕರಣ ಮಾಡುವ ಅಗತ್ಯ ಬಹಳಷ್ಟಿದೆ. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಅನೇಕ ಉಪಕ್ರಮಗಳನ್ನು ಕೈಗೊಂಡಿದೆ. ಈ ಕಾರ್ಯಕ್ರಮಗಳನ್ನು ಪ್ರತಿಯೊಬ್ಬ ಫಲಾನುಭವಿಗೂ ಮುಟ್ಟಿಸಬೇಕಾದ ಕರ್ತವ್ಯ ಅಧಿಕಾರಿಗಳದ್ದು ಎಂದರು.

'ಈಗಾಗಲೇ ಮಂಡ್ಯದಲ್ಲಿ ಅನೇಕ ಅಂಗವಿಕಲರಿಗೆ ಸೌಲಭ್ಯಗಳನ್ನು ವಿತರಿಸಲಾಗಿದೆ. ಸುಮಾರು 60 ಲಕ್ಷ ವೆಚ್ಚದಲ್ಲಿ 40 ಫಲಾನುಭವಿಗಳಿಗೆ ಬ್ಯಾಟರಿಚಾಲಿತ ತ್ರಿಚಕ್ರ ವಾಹನಗಳನ್ನು ವಿತರಣೆ ಮಾಡಲಾಗಿದೆ. ಹಾಗೆಯೇ ವಿವಿಧ ಸಿಎಸ್‌ಆರ್ ನಿಧಿಯ ನೆರವಿನಿಂದ 365 ಹೆಚ್ಚು ಅಂಗವಿಕಲರಿಗೆ ಬ್ಯಾಟರಿಚಾಲಿತ ತ್ರಿಚಕ್ರವಾಹನಗಳನ್ನು ನೀಡಲಾಗಿದೆ' ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

'ಕೆ.ಆರ್. ನಗರವೂ ಒಳಗೊಂಡಂತೆ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿಪರ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಸಿಎಸ್‌ಆರ್ ನಿಧಿ ಅನುದಾನ ಅಡಿಯಲ್ಲಿ ಅನೇಕ ಶಾಲೆಗಳಿಗೆ ನೂತನ ಕಟ್ಟಡಗಳ ನಿರ್ಮಾಣ ಸೇರಿದಂತೆ ವಿವಿಧ ಬಗೆಯ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿದೆ' ಎಂದರು.

ಕಾರ್ಯಕ್ರಮವನ್ನು ಕೃತಕ ಅಂಗಾಂಗ ತಯಾರಿಕಾ ಕಾರ್ಪೊರೇಷನ್ ಆಫ್ ಇಂಡಿಯಾ (ಅಲಿಂಕೋ) ಏರ್ಪಡಿಸಿತ್ತು. ಮಾಜಿ ಸಚಿವ ಸಾ.ರಾ. ಮಹೇಶ್, ವಿಧಾನಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ಕೆ. ವಿವೇಕಾನಂದ ಪಾಲ್ಗೊಂಡಿದ್ದರು.

## ಮಿನಿ ನ್ಯೂಸ್

### ರೈತನ ಮೇಲೆ ಚಿರತೆ ದಾಳಿ

• ಉದಯವಾಹಿನಿ, ಚನ್ನಪಟ್ಟಣ

ತಾಲ್ಲೂಕಿನ ಮೆಣಸಿಗನಹಳ್ಳಿಯಲ್ಲಿ ಗುರುವಾರ ಮುಂಜಾನೆ ಚಿರತೆ ದಾಳಿಯಲ್ಲಿ ರೈತರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ನೀರು ಹಾಯಿಸಲು ಬೆಳಗಿನ ಜಾವ ಜಮೀನಿಗೆ ಹೊರಟಿದ್ದ ಮೆಣಸಿಗನಹಳ್ಳಿಯ ರೈತ ಸಣ್ಣಪ್ಪ (73) ಅವರ ಮೇಲೆ ಪೊದೆಯಲ್ಲಿ ಅವಿತಿದ್ದ ಚಿರತೆ ದಾಳಿ ನಡೆಸಿದೆ.

ಹಠಾತ್ ದಾಳಿಯಿಂದ ಭೀತಗೊಂಡ ರೈತ ಕೂಗಿಕೊಂಡಾಗ ಅಕ್ಕಪಕ್ಕದ ಜಮೀನಿನಲ್ಲಿದ್ದ ರೈತರು ಆಗಮಿಸಿ ಕಿರುಚಿದಾಗ ಚಿರತೆ ಪರಾರಿಯಾಗಿದೆ. ಘಟನೆಯಲ್ಲಿ ಸಣ್ಣಪ್ಪ ಅವರ ಎಡತೋಳು, ಬಲಗಣ್ಣು, ಮುಖದ ಭಾಗದಲ್ಲಿ ಗಾಯಗಳಾಗಿವೆ. ಗ್ರಾಮಸ್ಥರಿಂದ ವಿಷಯ ತಿಳಿದು ತಕ್ಷಣ ಸ್ಥಳಕ್ಕೆ ಆಗಮಿಸಿದ ವಲಯ ಅರಣ್ಯಾಧಿಕಾರಿ ಮಲ್ಲೇಶ್ ಹಾಗೂ ಸಿಬ್ಬಂದಿ ಗಾಯಗೊಂಡ ರೈತನನ್ನು ತಕ್ಷಣ ನಗರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರು.

ನಂತರ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಮಲ್ಲೇಶ್ ತಿಳಿಸಿದ್ದಾರೆ. ತಾಲ್ಲೂಕಿನ ಬೈರಶೆಟ್ಟಿಹಳ್ಳಿ ಗ್ರಾಮದ ರೈತನ ಮೇಲೆ ಮಾರ್ಚ್ 28 ರಂದು ಕರಡಿ ದಾಳಿ ನಡೆಸಿತ್ತು. ಆನಂತರ ಏ.1 ರಂದು ಲಂಬಾಣಿ ತಾಂಡ್ಯದಲ್ಲಿ ರೈತನ ಮೇಲೆ ಜೋಡಿ ಕರಡಿ ದಾಳಿ ನಡೆಸಿದ್ದವು. ಏ.19ರ ರಾತ್ರಿ ಮಂಗಾಡಹಳ್ಳಿ ಗ್ರಾಮದ ರೈತನ ಮೇಲೆ ಕಾಡಾನೆ ದಾಳಿ ನಡೆಸಿತ್ತು. ಈಗ ಮೆಣಸಿಗನಹಳ್ಳಿ ಗ್ರಾಮದಲ್ಲಿ ರೈತನ ಮೇಲೆ ಚಿರತೆ ದಾಳಿ ನಡೆಸಿರುವುದು ರೈತರನ್ನು ಆತಂಕಕ್ಕೆ ದೂಡಿದೆ. ರೈತರು ರಾತ್ರಿಯ ವೇಳೆ ಹೊಲಗದ್ದೆಗಳ ಬಳಿ ತೆರಳಲು ಆತಂಕ ಪಡುವ ವಾತಾವರಣ ಸೃಷ್ಟಿಯಾಗಿದೆ.

### ಸ್ವದೇಶಿ ಉತ್ಪನ್ನಗಳಿಗೆ ಪ್ರೋತ್ಸಾಹಿಸಿ ಸಂತೋಷ್ ನಾಗವಾರ




ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ

ದೇಶದ ಅಭಿವೃದ್ಧಿಗೆ ಸ್ವದೇಶಿ ಉತ್ಪನ್ನಗಳನ್ನು ಬಳಕೆ ಮಾಡುವ ಮೂಲಕ ಸಾರ್ವಜನಿಕರು ಸಹಕರಿಸಬೇಕು ಎಂದು ಡ್ರೀಮ್ ಡೀಲ್ ಗ್ರೂಪ್ ಜಿಲ್ಲಾ ಶಾಖಾ ನಿರ್ದೇಶಕ ಸಂತೋಷ್ ನಾಗವಾರ ಮನವಿ ಮಾಡಿದರು. ನಗರದ ರಾಯರ ದೊಡ್ಡಿ ವೃತ್ತದಲ್ಲಿ ಸಂಸ್ಥೆಯ ಕಚೇರಿಯಲ್ಲಿ ಶುಕ್ರವಾರ ಸಂಸ್ಥೆ ಮಾಲಿಕ ಮಹಮದ್ ಸುಹೇಲ್ ಅವರ ಜನ್ಮ ದಿನದ ಅಂಗವಾಗಿ ಜೀವಾಮೃತ ರಕ್ತನಿಧಿ ಚನ್ನಪಟ್ಟಣ ವತಿಂದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಉದ್ಘಾಟನೆ ಹಾಗೂ ಮಡಿಲು ಚಾರಿಟಬಲ್ ಟ್ರಸ್ಟಿನ ಆಸರೆ ವೃದ್ಧಾಶ್ರಮದಲ್ಲಿ ಆಸರೆ ಪಡೆದಿರುವ ನಿರಾಶ್ರಿತರಿಗೆ ಆಹಾರ ಪದಾರ್ಥಗಳನ್ನು ವಿತರಿಸಿ ಮಾತನಾಡಿದ ಅವರು, ಸಂಸ್ಥೆಯು ರಾಮನಗರ, ಮಂಡ್ಯ ವ್ಯಾಪ್ತಿಯಲ್ಲಿ 50 ಸಾವಿರಕ್ಕೂ ಅಧಿಕ ಗ್ರಾಹಕರಿಗೆ ಸ್ವದೇಶಿ ಉತ್ಪನ್ನಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ವಿತರಣೆ ಮಾಡಿದೆ ಎಂದರು. ಗ್ರಾಮೀಣ ಭಾಗದ ಜನರು ಒಂದೇ ಬಾರಿಗೆ ಹೆಚ್ಚು ಹಣವನ್ನು ಹೂಡಿಕೆ ಮಾಡಿ ಮನೆಗೆ ಬೇಕಾದ ಎಲೆಕ್ಟ್ರಾನಿಕ್ ಉಪಕರಣ ಮತ್ತಿತರ ವಸ್ತುಗಳನ್ನು ಖರೀದಿ ಮಾಡಲು ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ತಿಂಗಳ ಕಂತಿನಲ್ಲಿ ಹಣ ಕಟ್ಟಿಸಿಕೊಂಡು ಸ್ವದೇಶಿ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ ಈಗಾಗಲೇ ಡ್ರೀಮ್ ಡೀಲ್ ಉತ್ಪನ್ನಗಳಿಗೆ ಗ್ರಾಹಕರು ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

### ಬಿಸಿಲಿನ ತಾಪಕ್ಕೆ ಜಾನುವಾರುಗಳ ಸಾವು: ದೇಪಾಪುರದಲ್ಲಿ ಘಟನೆ

• ಉದಯವಾಹಿನಿ, ಗುಂಡ್ಲುಪೇಟೆ

ಬಿಸಿಲಿನ ತಾಪಕ್ಕೆ ಹಸು ಹಾಗೂ ಎತ್ತು ಸಾವನ್ನಪ್ಪಿರುವ ಘಟನೆ ತಾಲ್ಲೂಕಿನ ದೇಪಾಪುರ ಗ್ರಾಮದಲ್ಲಿ ನಡೆದಿದೆ. ಗುರುವಾರ ಸಂಜೆ ಜಮೀನಿನಲ್ಲಿ ಮೇಯ್ದು ವಾಪಾಸ್ ಮನೆಗೆ ಬಂದಿದ್ದ ಎರಡೂ ಶುಕ್ರವಾರ ನಸುಕಿನ ಜಾವ ಅಸುನೀಗಿವೆ. ಬೆಳಗ್ಗೆ ಮೇವು ಹಾಕಲು ಕೊಟ್ಟಿಗೆಗೆ ತೆರಳಿದ ವೇಳೆ ಸಾವನ್ನಪ್ಪಿರುವುದು ಖಾತ್ರಿಯಾಗಿದೆ. ಜೀವನೋಪಾಯಕ್ಕೆ ಆಧಾರವಾಗಿದ್ದ ಹಸು ಸಾವಿನಿಂದ ರೈತ ಮಹದೇವಯ್ಯ ಅವರಿಗೆ ಲಕ್ಷಾಂತರ ರೂ ನಷ್ಟವುಂಟಾಗಿದ್ದು ರೈತ ಕುಟುಂಬಕ್ಕೆ ಸರ್ಕಾರ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮದ ಮುಖಂಡ ಗುರುಸ್ವಾಮಿ ಒತ್ತಾಯಿಸಿದ್ದಾರೆ.

**ಮುನ್ನೆಚ್ಚರಿಕೆ ಕ್ರಮಕ್ಕೆ ಪಶುವೈದ್ಯರ ಸಲಹೆ:** ಇತ್ತೀಚಿನ ದಿನಗಳಲ್ಲಿ ತಾಪಮಾನ ಹೆಚ್ಚಳವಾಗುತ್ತಿದ್ದು ಜಾನುವಾರುಗಳನ್ನ ಜಾಗ್ರತೆಯಿಂದ ನೋಡಿಕೊಳ್ಳಬೇಕು ಎಂದು ಪಶು ಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಡಾ.ಮಹದೇಶ್ ಸಲಹೆ ನೀಡಿದ್ದಾರೆ.

**ಬಿಸಿಲಿನ ತಾಪ ತಡೆಯದ ಎಚ್‌ಎಫ್ ತಳಿಗಳು :** ವಿದೇಶಗಳಲ್ಲಿ ಅತಿ ಹೆಚ್ಚಾಗಿ ಸಾಕಣೆಯಲ್ಲಿರುವ ಎಚ್ ಎಫ್ ತಳಿಯ ಹಸುಗಳು ತಣ್ಣನೆ ವಾತಾವರಣಕ್ಕೆ ಹೊಂದಿಕೊಂಡಿರುತ್ತವೆ ಹಾಗಾಗಿ ಬಿಸಿಲಿನ ತಾಪಮಾನವನ್ನ ತಡೆಯಲಾಗದೆ ಬಾಯಿಯ ಮೂಲಕ ಉಸಿರಾಡುವುದರಿಂದ ನಿರ್ಜಲೀಕರಣಕ್ಕೆ ಒಳಗಾಗುತ್ತವೆ. ಮಾಲೀಕರು ಜಾನುವಾರುಗಳಿಗೆ ಸುಲಭವಾಗಿ ನೀರು ಸಿಗುವ ಸ್ಥಳದಲ್ಲಿ ಮೇಯಲು ಬಿಡಬೇಕು, ಬಿರುಬಿಸಿಲ ವೇಳೆ ಹೊರಗೆ ಬಿಡದೆ ತಂಪಾದ ಸ್ಥಳದಲ್ಲಿರಿಸಿದರೆ ಅನಾಹುತಗಳಿಂದ ಪಾರು ಮಾಡಬಹುದು ಎಂದು ತಿಳಿಸಿದ್ದಾರೆ.

## ಅವಧಿ ಮೀರಿದ ಬೀಜ ವಿತರಣೆ; ಆರೋಪ

• ಉದಯವಾಹಿನಿ, ಮಂಡ್ಯ

ರೈತರಿಗೆ ಅವಧಿ ಮೀರಿದ ಬಿತ್ತನೆ ಬೀಜ ವಿತರಿಸುತ್ತಿದ್ದಾರೆ ಎಂದು ಆರೋಪಿಸಿ ಕರವೇ ಕಾರ್ಯಕರ್ತರು ವಿತರಣೆಗೆ ತಡೆಯೊಡ್ಡಿದ್ದಾರೆ. ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರದಲ್ಲಿ ಮಳೆಯಾಶ್ರಿತ ಪ್ರದೇಶಗಳ ರೈತರಿಗೆ ಬಿತ್ತನೆ ಬೀಜ ವಿತರಣೆ ಮಾಡಲಾಗುತ್ತಿತ್ತು. ಬಿತ್ತನೆ ಬೀಜ ಒಂದು ವರ್ಷಕ್ಕೂ ಹಿಂದೆಯೇ ಅವಧಿ ಮೀರಿರುವುದು ರೈತರ ಗಮನಕ್ಕೆ ಬಂದಿದೆ. ಈ ಬಗ್ಗೆ ರೈತರು ಆಕ್ಷೇಪ ವ್ಯಕ್ತಪಡಿಸಿ ಅವಧಿ ಮೀರಿದ ಬಿತ್ತನೆ ಬೀಜ ಪಡೆಯಲು ನಿರಾಕರಿಸಿದ್ದಾರೆ.

ಮಾಹಿತಿ ತಿಳಿದ ಕರವೇ ಕಾರ್ಯಕರ್ತರು ಅವಧಿ ಮೀರಿದ ಬಿತ್ತನೆ ಬೀಜ ವಿತರಣೆಗೆ ತಡೆಯೊಡ್ಡಿದ್ದಾರೆ. ಅಧಿಕಾರಿಗಳು ಬಿತ್ತನೆ ಬೀಜ ವಿತರಣೆ ಸ್ಥಗಿತಗೊಳಿಸಿದ್ದಾರೆ. ಕರವೇ ಮುಖಂಡ ಎಚ್.ಡಿ. ಜಯರಾಂ ಮಾತನಾಡಿ, ಸುಮಾರು 240 ಕೆ.ಜಿ.ಯಷ್ಟು ಬಿತ್ತನೆ ಬೀಜ ವಿತರಣೆಗೆ ಕೃಷಿ ಇಲಾಖೆ ಸಿದ್ಧ ಮಾಡಿಕೊಂಡಿತ್ತು. ಅವಧಿ ಮೀರಿದ ಬೀಜ ವಿತರಣೆಯಾಗಿದ್ದರೆ ನೂರಾರು ಎಕರೆ ಫಸಲು ನಷ್ಟದ ಜತೆಗೆ ರೈತರ ಶ್ರಮ ಬಂಡವಾಳ ಎಲ್ಲವೂ ನಷ್ಟವಾಗುತಿತ್ತು ಎಂದರು. ಈ ಸಂಬಂಧ ಕೃಷಿ ಇಲಾಖೆಯ ಅಧಿಕಾರಿಗಳ ವಿರುದ್ಧ ಅಗತ್ಯ ತನಿಖೆ ನಡೆಸುವಂತೆ ಕೃಷಿ ಸಚಿವ ಎನ್ ಚಲುವರಾಯಸ್ವಾಮಿ ಅವರನ್ನು ಆಗ್ರಹಿಸಿದ್ದಾರೆ.




ಉದಯವಾಹಿನಿ ಚಿತ್ರ

## ಉಪ್ಪಾರರ ರಾಜಕೀಯ ಪ್ರಾತಿನಿಧ್ಯ ಹೆಚ್ಚಲಿ

• ಉದಯವಾಹಿನಿ, ಯಳಂದೂರು

ಉಪ್ಪಾರ ಸಮುದಾಯದ ಶೈಕ್ಷಣಿಕ ಮತ್ತು ರಾಜಕೀಯ ಪ್ರಾತಿನಿಧ್ಯ ಹೆಚ್ಚಾಗಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಹೇಳಿದರು. ಪಟ್ಟಣದಲ್ಲಿ ಗುರುವಾರ ಆಯೋಜಿಸಿದ್ದ ಭಗೀರಥ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲಾ ಸಮುದಾಯಗಳಲ್ಲೂ ದಾರ್ಶನಿಕರು ಜನ್ಮತಾಳಿದ್ದಾರೆ. ಸದ್ಗುಣ, ಸಮಾನತೆ. ಶಿಕ್ಷಣದ ಮಹತ್ವ ಸಾರಿದ್ದಾರೆ. ಭಗೀರಥರು ಈ ದೆಸೆಯಲ್ಲಿ ಉಪ್ಪಾರರ ಸ್ಫೂರ್ತಿಗೆ ಬೆಳಕಾಗಿದ್ದಾರೆ. ಸಮುದಾಯ ಪೋಷಕರು ಮಕ್ಕಳನ್ನು ಉನ್ನತ ಕಲಿಕೆಯಲ್ಲಿ ತೊಡಗಿಸಬೇಕು. ಈ ದೆಸೆಯಲ್ಲಿ ಸರ್ಕಾರದ ನೆರವು ಪಡೆಯಬೇಕು. ಈ ದೆಸೆಯಲ್ಲಿ ಉಪ್ಪಾರ ಪರಂಪರೆ ಮತ್ತು ಸಂಸ್ಕೃತಿ ಉಳಿಸುವ ದೆಸೆಯಲ್ಲಿ ಸಮುದಾಯ ಭವನಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು ಎಂದರು.



ಉದಯವಾಹಿನಿ ಚಿತ್ರ

ಮುಖ್ಯ ಭಾಷಣಕಾರ ಶಿಕ್ಷಕ ಗೋವಿಂದರಾಜು ಮಾತನಾಡಿ, ಭಗೀರಥ ಮನುಕುಲದ ಉದ್ಧಾರಕ್ಕೆ ಗಂಗೆಯನ್ನು ಸ್ವರ್ಗದಿಂದ ಭೂಮಿಗೆ ಇಳಿಸಿದರು. ಮಹರ್ಷಿಯ ಹಠ ಮತ್ತು ನೇಮ ನಿಷ್ಠೆಗೆ ಒಲಿದ ಶಿವನು ಗಂಗೆಯನ್ನು ಜನ ಕಲ್ಯಾಣಕ್ಕೆ ಬಳಸುವಂತೆ ವರ ನೀಡಿದನು.

ಹೀಗೆ, ಜೀವ ಜಗತ್ತಿನ ಉದ್ಧಾರಕ್ಕೆ ತನುಮನವನ್ನು ಮುಡಿಪಾಗಿಟ್ಟ ಭಗೀರಥರ ಪ್ರಯತ್ನಗಳನ್ನು ಇಂದಿನ ಸಮಾಜದ ಸದಸ್ಯರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಾಮಾಜಿಕ ಬದುಕಿನಲ್ಲಿ ಸಮುದಾಯದ ಜನರು ದೈವತ್ವಕ್ಕೆ ಏರುವ ಅವಕಾಶ ಸೃಷ್ಟಿಸಿಕೊಳ್ಳಬೇಕು.

ಕಂದಾಚಾರ, ಅರ್ಥರಹಿತ ಆಚರಣೆಗಳನ್ನು ತೊರೆದು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವ ದೆಸೆಯಲ್ಲಿ ಸಮಾಜ ಚಿಂತಸಬೇಕು ಎಂದು ಹೇಳಿದರು. ಸಾವಿರಾರು ಸಂಘ-ಸಂಸ್ಥೆಗಳ ಸದಸ್ಯರು ಕಲಾ ತಂಡಗಳ ನಡುವೆ ಸತ್ತಿಗೆ ಸೂರಿಪಾನಿ ಹೊತ್ತು ಭಗೀರಥರ ಭಾವಚಿತ್ರವನ್ನು ಅಲಂಕೃತ ಸರೋಟಿನಲ್ಲಿ ಮೆರವಣಿಗೆ ಮಾಡಿ ಸಂಭ್ರಮಿಸಿದರು.

## ಗಂಗೆಯನ್ನೇ ಧರೆಗಿಳಿಸಿದ ಛಲ ಪ್ರೇರಣೆ

• ಉದಯವಾಹಿನಿ, ಚಾಮರಾಜನಗರ

ಪೂರ್ವಜರ ಮೋಕ್ಷ ಪ್ರಾಪ್ತಿಗಾಗಿ ಸಾಕ್ಷಾತ್‌ಗಂಗೆಯನ್ನೇ ಧರೆಗಿಳಿಸಿದ ಮಹಾನ್ ಪುರುಷ ಭಗೀರಥ ಮಹರ್ಷಿ ಎಂದು ಎಂ.ಎಸ್.ಐ.ಎಲ್ ಅಧ್ಯಕ್ಷ, ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ಭಗೀರಥ ಜಯಂತಿ ಕಾರ್ಯಕ್ರಮದಲ್ಲಿ ಭಗೀರಥರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ಪೂರ್ವಜರ ಬಗ್ಗೆ ಅಪಾರ ಗೌರವ ಹೊಂದಿದ್ದ ಮಹರ್ಷಿ ಭಗೀರಥರು ಕಠಿಣ ತಪಸ್ಸು ಮಾಡುವ ಮೂಲಕ ದೇವಾನುದೇವತೆಗಳನ್ನು ಸಂತೃಪ್ತಪಡಿಸಿದರು. ಭಗೀರಥರ ಕಠಿಣ ತಪಸ್ಸು ಇಂದಿಗೂ ಭಗೀರಥರ ಪ್ರಯತ್ನ ಎಂದೇ ಆಡುಭಾಷೆಯಲ್ಲಿ ಚಾಲ್ತಿಯಲ್ಲಿದೆ. ಭಗೀರಥರು ಪುರಾಣ ಕಾಲಘಟ್ಟದ ವ್ಯಕ್ತಿಯಾಗಿದ್ದು ಅವರ ಆದರ್ಶ ಮೌಲ್ಯಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.



ಉದಯವಾಹಿನಿ ಚಿತ್ರ

ಭಗೀರಥರು, ಅವರ ವಂಶಸ್ಥರು ಉಪ್ಪು ತಯಾರಿಸುವ ವೃತ್ತಿ ಮಾಡುತ್ತಿದ್ದರು. ಬ್ರಿಟಿಷರ ವ್ಯತಿರಿಕ್ತ ನೀತಿಗಳಿಂದ ಉಪ್ಪಾರ ಸಮುದಾಯ ಬೇರೆ ವೃತ್ತಿಗಳತ್ತ ಹೊರಳಿತು ಎಂದರು. ಭಗೀರಥರ ಜಯಂತಿಯನ್ನು ಸರಳವಾಗಿ ಆಚರಿಸಲಾಗಿದ್ದು ಶೀಘ್ರ ಪ್ರತ್ಯೇಕ ದಿನಾಂಕ ನಿಗದಿಗೊಳಿಸಿ ಚಾಮರಾಜನಗರದಲ್ಲಿ ರಾಜ್ಯಮಟ್ಟದ ಭಗೀರಥ ಜಯಂತಿ ಆಯೋಜಿಸಲಾಗುವುದು ಸಮುದಾಯದ ಸಮಸ್ಯೆಗಳನ್ನು ಸಮಾವೇಶದಲ್ಲಿ ಚರ್ಚಿಸಲಾಗುವುದು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹರ್ಷಿ ಭಗೀರಥರ ಕುರಿತು ಉಪನ್ಯಾಸ ನೀಡಿದ ನಾಗವಳ್ಳಿಯ ಸೋಮಣ್ಣ ಭಗೀರಥರ ಜಯಂತಿ ಭೂಮಿಗೆ ಗಂಗಾವಾತರಣೆಯಾದ ಪುಣ್ಯದಿನವಾಗಿದೆ. ಸಾವಿರ ವರ್ಷಗಳ ಕಾಲ ತಪಗೈದು ಗಂಗೆಯನ್ನು ಭೂಮಿಗೆ ಕರೆತಂದ ಮಹಾನ್‌ಸಿದ್ಧಿಪುರುಷರಾದ ಭಗೀರಥರು ಎಲ್ಲರಿಗೂ ಆದರ್ಶ, ಪ್ರೇರಣೆಯಾಗಲಿ ಎಂದರು. ಉಪ್ಪಾರ ಸಮುದಾಯ ಶೈಕ್ಷಣಿಕವಾಗಿ ಅಭಿವೃದ್ಧಿ ಆಗಬೇಕಿದೆ. ಸಮುದಾಯದ ಪೋಷಕರು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಬೇಕು, ಸಾಮಾಜಿಕ, ಶೈಕ್ಷಣಿಕ, ರಾಜಕೀಯವಾಗಿ ಅಭಿವೃದ್ಧಿ ಹೊಂದಬೇಕು, ಸಂವಿಧಾನಶಿಲ್ಪಿ ಡಾ. ಬಿ. ಆರ್.ಅಂಬೇಡ್ಕರ್ ಅವರ ಆಶಯದಂತೆ ಸಮಾಜ ಮುಂದುವರಿಯಬೇಕು ಎಂದರು.

## ಗ್ರಾ.ಪಂ ಚುನಾಯಿತ ಸದಸ್ಯರ ಸಂಖ್ಯೆ ನಿಗದಿಗೆ ಆಕ್ಷೇಪ ಆಹ್ವಾನ

• ಉದಯವಾಹಿನಿ, ಚಿಂತಾಮಣಿ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ್ 1993ರಡಿ ರಚಿತವಾದ ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ ತಾಲ್ಲೂಕಿನ ಗ್ರಾಮ ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿಪಡಿಸಿ ರಾಜ್ಯಪತ್ರದಲ್ಲಿ ಪ್ರಕಟಿಸಿದೆ. ಈ ಸದಸ್ಯತ್ವ ಸಂಖ್ಯೆ ಬಗ್ಗೆ ಆಕ್ಷೇಪಣೆ ಏಪ್ರಿಲ್ 24, ಸಂಜೆ 5ರೊಳಗೆ ಸಲ್ಲಿಸಬಹುದು ಎಂದು ಆಯೋಗ ತಿಳಿಸಿದೆ. ಆಕ್ಷೇಪಣೆ ಆನ್‌ಲೈನ್, ಅಂಚೆ ಅಥವಾ ಖುದ್ದಾಗಿ ಸಲ್ಲಿಸಬಹುದು.

**ಅಂಚೆ/ಖುದ್ದು ಸಲ್ಲಿಕೆ:** ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ, 3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ 222/ಎ, ಬಹುಮಹಡಿ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು-560001. ಗ್ರಾಮ ಪಂಚಾಯಿತಿಗಳ ಸದಸ್ಯ ಸಂಖ್ಯೆ (ನಿಗದಿತ): ಕಡದನಮರಿ-15, ಬಟ್ಲಹಳ್ಳಿ-17, ಕೋರ್ಲಪರ್ತಿ-16, ಮಿಟ್ಟಹಳ್ಳಿ-15, ರಾಗುಟ್ಟಹಳ್ಳಿ-15, ಕೆಂಚಾರ್ಲಹಳ್ಳಿ-13, ಇರಗಂಪಲ್ಲಿ-12, ಎಂ.ಗೊಲ್ಲಹಳ್ಳಿ-19, ಶೆಟ್ಟಹಳ್ಳಿ-16, ಕೋಟಗಲ್-17, ಭೂಮಿಶೆಟ್ಟಹಳ್ಳಿ-13, ಯಗವಕೋಟೆ-12, ನಿಗದಿತ ದಿನಾಂಕ ನಂತರ ಬರುವ ಆಕ್ಷೇಪ ಪರಿಗಣಿಸಲಾಗುವುದಿಲ್ಲ. ಅಂಚೆ ಇಲಾಖೆ ವಿಳಂಬಕ್ಕೆ ಆಯೋಗ ಜವಾಬ್ದಾರಿ ಅಲ್ಲ. ಎಡಭಾಗದಲ್ಲಿರುವ 'ಸಾರ್ವಜನಿಕ ಸಲಹೆ' ಶೀರ್ಷಿಕೆಯಡಿ ಆಕ್ಷೇಪಣೆ ಸಲ್ಲಿಸಬಹುದು.

# ತಾರಕಕ್ಕೇರಿದ ಶಾಸಕ-ಸಚಿವರ ಬಣಗಳ ತಿಕ್ಕಾಟ

**ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಮತ್ತು ಶಾಸಕ ಪ್ರದೀಪ್ ಈಶ್ವರ್ ಬೆಂಬಲಿತ ಕಾಂಗ್ರೆಸ್ ಮುಖಂಡರು ನಡುವೆ ವೈಮನಸ್ಸು**

• ಉದಯವಾಹಿನಿ, ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದೊಳಗಿನ ಬಣಗಳ ತಿಕ್ಕಾಟ ಮತ್ತೆ ಬೀದಿಗೆ ಬಂದಿದೆ. ಒಂದೂವರೆ ವರ್ಷಗಳಿಂದ ಬೂದಿ ಮುಚ್ಚಿದ ಕೆಂಡದಂತಿದ್ದ ಬೇಗುದಿ ಈಗ ಮತ್ತೆ ಸ್ಫೋಟವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಮತ್ತು ಶಾಸಕ ಪ್ರದೀಪ್ ಈಶ್ವರ್ ಬೆಂಬಲಿತ ಕಾಂಗ್ರೆಸ್ ಮುಖಂಡರು ನಡುವೆ ವೈಮನಸ್ಸು ತಾರಕಕ್ಕೇರಿದೆ. ಎರಡೂ ಬಣಗಳ ಮುಖಂಡರನ್ನು ಕೂರಿಸಿ ಒಮ್ಮತ ಮೂಡಿಸಬೇಕಾದ ಪಕ್ಷದ ರಾಜ್ಯ ನಾಯಕರು ಮಾತ್ರ ಮೌನಕ್ಕೆ ಜಾರಿದ್ದಾರೆ. ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ಈಚೆಗೆ ಮಾಧ್ಯಮಗೋಷ್ಠಿ ನಡೆಸಿ ಅಸಮಾಧಾನ ಹೊರ ಹಾಕಿದ್ದ ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ನಿರ್ದೇಶಕರಾದ ಎನ್.ಸಿ.ವೆಂಕಟೇಶ್, ಕೆ.ಆರ್.ರಾಜಣ್ಣ ಮತ್ತು ನಗರಸಭೆ ಮಾಜಿ ಸದಸ್ಯ ಮಿಲ್ಟನ್ ವೆಂಕಟೇಶ್‌ಗೆ ಕಾರಣ ಕೇಳಿ ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್ ನೋಟಿಸ್ ನೀಡಿದ್ದಾರೆ. ಶಾಸಕ ಪ್ರದೀಪ್ ಈಶ್ವರ್ ಬಗ್ಗೆ ಹಾಗೂ ಅವರು ಮಾಡುತ್ತಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ನಕಾರಾತ್ಮಕವಾಗಿ ಮಾತನಾಡುವುದು, ಟೀಕಿಸುವುದು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಆಗುತ್ತಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ವ್ಯತಿರಿಕ್ತವಾಗಿ ಹೇಳಿಕೆಗಳನ್ನು ನೀಡುತ್ತಿರುವುದಾಗಿ ಶಾಸಕರು, ಚಿಕ್ಕಬಳ್ಳಾಪುರ ಬ್ಲಾಕ್ ಕಾಂಗ್ರೆಸ್ ಸಮಿತಿ ಮತ್ತು ಮಂಡಿಕಲ್ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ನಿಮ್ಮ ವಿರುದ್ಧ ದೂರು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆಗಳ ಆರೋಪದ ಮೇರೆಗೆ ತಮಗೆ ನೋಟಿಸ್ ನೀಡಲಾಗಿದೆ. ಈ ನೋಟಿಸ್ ತಲುಪಿದ ಒಂದು ವಾರದ ಒಳಗೆ ಕೆಪಿಸಿಸಿಗೆ ಲಿಖಿತವಾಗಿ ಸ್ಪಷ್ಟೀಕರಣ ನೀಡಬೇಕು. ಸಮಂಜಸವಾದ ಸ್ಪಷ್ಟೀಕರಣ ನೀಡಲು ವಿಫಲರಾದಲ್ಲಿ ತಮ್ಮ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ನೋಟಿಸ್‌ನಲ್ಲಿ ತಿಳಿಸಿದ್ದಾರೆ.

ಈ ಹಿಂದಿನಿಂದಲೂ ಚಿಕ್ಕಬಳ್ಳಾಪುರ ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಜೋರಾಗಿಯೇ ಇದೆ. ಒಂದು ಕಡೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಮತ್ತೊಂದು ಕಡೆ ಶಾಸಕ ಪ್ರದೀಪ್ ಈಶ್ವರ್ 'ನಮ್ಮ ನಾಯಕ' ಎಂದು ಬಹಿರಂಗವಾಗಿಯೇ ಕಾರ್ಯಕರ್ತರು, ಮುಖಂಡರು ಘೋಷಿಸಿಕೊಂಡಿದ್ದಾರೆ.

ಆಗಲೇ ಈ ಅಸಮಾಧಾನಕ್ಕೆ ಸರಿಪಡಿಸಬೇಕಾಗಿದ್ದ ರಾಜ್ಯ ನಾಯಕರು ಸಹ ಮೌನವಾಗಿದ್ದಾರೆ. ಶಾಸಕ ಪ್ರದೀಪ್ ಈಶ್ವರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್ ಅವರ ನಡುವಿನ ಸಂಬಂಧ ಉತ್ತಮವಾಗಿಲ್ಲ ಎಂದು ಕಾಂಗ್ರೆಸ್ ಮುಖಂಡರು ಆಂತರಿಕವಾಗಿ ಹೇಳುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಬಣಗಳ ಬಡಿದಾಟ ಬಹಿರಂಗವಾಗಿದೆ. ಸಚಿವರು ಮತ್ತು ಶಾಸಕರ ಬಣ ಎಂದು ಕಾಂಗ್ರೆಸ್‌ನಲ್ಲಿ ಒಡಕು ಮೂಡಿರುವುದು ಎದ್ದು ಕಾಣುತ್ತಿದೆ. ಶಾಸಕರು ಚಿಕ್ಕಬಳ್ಳಾಪುರಕ್ಕೆ ಭೇಟಿ ನೀಡಿದ ವೇಳೆ ಒಂದು ಗುಂಪು ಅವರ ಜೊತೆ ಕಾಣಿಸಿಕೊಂಡರೆ ಸಚಿವರು ಚಿಕ್ಕಬಳ್ಳಾಪುರಕ್ಕೆ ಬಂದಾಗ ಮತ್ತೊಂದು ಗುಂಪು ಅವರ ಜೊತೆಯಲ್ಲಿರುತ್ತದೆ. ಹೀಗೆ ಬಣ ರಾಜಕೀಯ ತಾರಕ್ಕೇರಿದೆ. ಜಿಲ್ಲಾ ಉಸ್ತುವಾರಿ ಸಚಿವರು ನಡೆಸುವ ಕೆಡಿಪಿ ಸಭೆಗಳಲ್ಲಿ ವಿರೋಧ ಪಕ್ಷದ ಶಾಸಕರೇ ಭಾಗಿಯಾಗುತ್ತಿದ್ದಾರೆ. ಆದರೆ ಸಚಿವರು ಪಾಲ್ಗೊಳ್ಳುವ ಸಮಾರಂಭಗಳು, ಕೆಡಿಪಿ ಸಭೆಗಳಿಗೆ ಪ್ರದೀಪ್ ಈಶ್ವರ್‌ಗೈರಾಗುತ್ತಿದ್ದಾರೆ. ಈ ಶೀಲತ ಸಮರ ಬಹಿರಂಗ ಸಮರವಾಗಿದೆ.ಚಿಂತಾಮಣಿ ಶಾಸಕರೂ ಆದ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್ ಅವರ ನೇತೃತ್ವದಲ್ಲಿಯೇ ಜಿಲ್ಲೆಯಲ್ಲಿ ಕಾಂಗ್ರೆಸ್ ಹೆಜ್ಜೆ ಇಡುತ್ತಿದೆ. ಸಚಿವರು ಗೌರಿಬಿದನೂರು ಮತ್ತು ಬಾಗೇಪಲ್ಲಿ ಹೊರತುಪಡಿಸಿ ಚಿಕ್ಕಬಳ್ಳಾಪುರ, ಶಿಡ್ಲಘಟ್ಟ ಕ್ಷೇತ್ರಗಳ ಕಾಂಗ್ರೆಸ್ ಪಾಳಯದಲ್ಲಿ ಹಿಡಿತ ಮತ್ತು ಬೆಂಬಲಿಗರನ್ನು ಹೊಂದಿದ್ದಾರೆ.



ಈ ಭಿನ್ನಾಭಿಪ್ರಾಯ ಮತ್ತಷ್ಟು ದೊಡ್ಡದಾಗುತ್ತದೆಯೇ? ರಾಜ್ಯ ನಾಯಕರು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಸಭೆ ನಡೆಸಿ ಸಮಸ್ಯೆಗಳನ್ನು ಪರಿಹರಿಸುವರೇ ಉಚ್ಚಾಟನೆ, ಆರೋಪ, ಪ್ರತ್ಯಾರೋಪಗಳ ಸಮರ ಮುಂದುವರಿಯುತ್ತದೆಯೇ ಎನ್ನುವ ಚರ್ಚೆ ಕಾಂಗ್ರೆಸ್‌ನಲ್ಲಿ ಜೋರಾಗಿದೆ. ವೆಂಕಟೇಶ್ ಗೆಲುವು ಸಾಧಿಸಿದರೆ ರಾಜಣ್ಣ ಸೋಲು ಅನುಭವಿಸಿದರು.

ಸೋಲು ಅನುಭವಿಸಿದ ಬಲಿಜ ಸಮುದಾಯದ ರಾಜಣ್ಣ ಅವರನ್ನು ಸಚಿವರು ಚಿಮುಲ್ ನಿರ್ದೇಶಕರಾಗಿ ನಾಮನಿರ್ದೇಶನ ಮಾಡಿದರು.

### ಚಂದ್ರಶೇಖರ್‌ಗೆ ಈ ಹಿಂದೆಯೂ ದೂರು

**ಈಗ ನೋಟಿಸ್ ಪಡೆದಿರುವ ಮುಖಂಡರೇ 2025ರ ಜೂನ್‌ನಲ್ಲಿ ಇದೇ ಜಿ.ಸಿ ಚಂದ್ರಶೇಖರ್ ಅವರಿಗೆ ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ದೂರು ನೀಡಿದ್ದರು. ಕೆಪಿಸಿಸಿಯಿಂದ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರಕ್ಕೆ ಒಬ್ಬ ವೀಕ್ಷಕರನ್ನು ನೇಮಿಸಿ, ಹಿರಿಯ ಮುಖಂಡರ ಸಮಿತಿ ರಚಿಸಬೇಕು. ಹಳೆ ನೇಮಕಾತಿ ರದ್ದುಪಡಿಸಬೇಕು. ಸರ್ಕಾರಿ ನಾಮನಿರ್ದೇಶನ, ಬ್ಲಾಕ್ ಕಾಂಗ್ರೆಸ್ ಹುದ್ದೆಗಳಿಗೆ ಹೊಸದಾಗಿ ನೇಮಕ ಮಾಡಿ ಪಕ್ಷ ಉಳಿಸಿ ಎಂದು ಮೂರು ಪುಟಗಳ ಪತ್ರವನ್ನು ಚಂದ್ರಶೇಖರ್ ಅವರಿಗೆ ನೀಡಿದ್ದರು.**


### ಬಣ ರಾಜಕೀಯ ಮತ್ತಷ್ಟು ಹೆಚ್ಚು

**ಚಿಮುಲ್ ಚುನಾವಣೆ ಹೆಚ್ಚಿದ ಒಡಕು ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ಚುನಾವಣೆಯ ನಂತರ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಮತ್ತಷ್ಟು ಹೆಚ್ಚಾಗಿದೆ. 'ನಾನು ಸಚಿವರ ಅಭ್ಯರ್ಥಿ' ಎಂದೇ ಚಿಮುಲ್ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆ ಎದುರಿಸಿದ್ದರು. ಪೆರೇಸಂದ್ರ ಕ್ಷೇತ್ರದಿಂದ ಕೆ.ಆರ್. ರಾಜಣ್ಣ ಮತ್ತು ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ವೆಂಕಟೇಶ್ 'ನಾವು ಡಾ.ಎಂ.ಸಿ.ಸುಧಾಕರ್ ಬೆಂಬಲಿತ ಅಭ್ಯರ್ಥಿಗಳು' ಎಂದು ಬಹಿರಂಗವಾಗಿ ಘೋಷಿಸಿಕೊಂಡಿದ್ದರು.**

ಅಂತರಾಳದಿಂದ...
EDITORIAL

# ಎಸ್‌ಎಸ್‌ಎಲ್‌ಸಿ ದಾಖಲೆ ಫಲಿತಾಂಶ ಗೊಂದಲಗಳ ಮೀರಿ ಉತ್ತಮ ಸಾಧನೆ

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ದಾಖಲೆ ಪ್ರಮಾಣದಲ್ಲಿ ಉತ್ತೀರ್ಣರಾಗಿರುವುದು, ಶಿಕ್ಷಣ ಇಲಾಖೆ ಕೈಗೊಂಡ ಸುಧಾರಣಾ ಕ್ರಮಗಳು ಫಲಪ್ರದ ಆಗಿರುವುದರ ಸಂಕೇತವಾಗಿದೆ. ದ್ವಿತೀಯ ಪಿಯು ಪರೀಕ್ಷೆಯಲ್ಲಿನ ದಾಖಲೆ ಫಲಿತಾಂಶದ ಯಶಸ್ಸಿನ ಲಹರಿಯನ್ನು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳೂ ಮುಂದುವರಿಸಿದ್ದಾರೆ. ಇದು, ರಾಜ್ಯದಲ್ಲಿನ ಪದವಿ ಪೂರ್ವ ಶಿಕ್ಷಣ ವ್ಯವಸ್ಥೆಯು ಮಗ್ಗುಲು ಬದಲಿಸಿರುವುದರ ಸೂಚನೆಯಂತಿದೆ. ಮೊದಲ ಬಾರಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದ 7.70 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಲ್ಲಿ 7.24 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ, ಶೇ94.1ರಷ್ಟು ಫಲಿತಾಂಶ ಬಂದಿದೆ. ಕಳೆದ ವರ್ಷದ ಶೇ 80ರಷ್ಟು ಫಲಿತಾಂಶಕ್ಕೆ ಹೋಲಿಸಿದರೆ, ಈ ಬಾರಿ ಶೇ 14ರಷ್ಟು ಹೆಚ್ಚು ಫಲಿತಾಂಶ ದಾಖಲಾಗಿದೆ. ಪುನರಾವರ್ತಿತ ವಿದ್ಯಾರ್ಥಿಗಳೂ ಸೇರಿದಂತೆ 8.56 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಶೇ88.73ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ದಾಖಲೆ ಫಲಿತಾಂಶವು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಕೈಗೊಂಡಿದ್ದ ಕ್ರಮಗಳು ಯಶಸ್ವಿಯಾಗಿರುವುದನ್ನು ಸೂಚಿಸುವಂತಿದೆ. ಶೈಕ್ಷಣಿಕ ವರ್ಷದ ಆರಂಭದಿಂದಲೇ ಅತಿಥಿ ಶಿಕ್ಷಕರು ಲಭ್ಯವಿರುವಂತೆ ನೋಡಿಕೊಂಡಿದ್ದರಿಂದ ಬೋಧನೆ ಸಕಾಲದಲ್ಲಿ ಪೂರ್ಣಗೊಳ್ಳಲು ಕಾರಣವಾಗಿದೆ. ಫಲಿತಾಂಶ ಸುಧಾರಣೆಗಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಮಂಡಳಿ ಹೊರಡಿಸಿದ 29 ಅಂಶಗಳ ಸಮಗ್ರ ಸುತ್ತೋಲೆಯೂ ಫಲ ಕೊಟ್ಟಂತಿದೆ. ನಿರಂತರ ಕಲಿಕೆಯೊಂದಿಗೆ ಪಾಠವಾರು ಮೌಲ್ಯಮಾಪನ ಕ್ರಮವು ವಿದ್ಯಾರ್ಥಿಗಳು 'ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಲು ಕಾರಣವಾಗಿದೆ.



ಫಲಿತಾಂಶದಲ್ಲಿ ಬಾಲಕರಿಗಿಂತಲೂ (ಶೇ 91.94) ಬಾಲಕಿಯರು (ಶೇ 96.18) ಮುಂದಿರುವುದು ಹಾಗೂ ನಗರ ಪ್ರದೇಶದ ಸಹವರ್ತಿಗಳನ್ನು (ಶೇ 93.2) ಗ್ರಾಮೀಣ ವಿದ್ಯಾರ್ಥಿಗಳು (ಶೇ 94.8) ಹಿಂದಿಕ್ಕಿರುವುದು ಹಿಂದಿನ ವರ್ಷಗಳ ಫಲಿತಾಂಶಗಳನ್ನು ನೆನಪಿಸುವಂತಿದೆಯಾದರೂ, ಅಂತರದ ಪ್ರಮಾಣ ಕಡಿಮೆ ಆಗಿರುವುದು ಗಮನಾರ್ಹ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸ್ಪರ್ಧಾತ್ಮಕ ಶಿಕ್ಷಣದ ಸ್ವರೂಪದಲ್ಲಿ ಹೆಚ್ಚಿನ ವ್ಯತ್ಯಾಸ ಇಲ್ಲದಿರುವುದನ್ನು ಈ ಅಂಕಿಅಂಶಗಳು ಸೂಚಿಸುವಂತಿವೆ. 625ಕ್ಕೆ ಅಷ್ಟೂ ಅಂಕಗಳನ್ನು ಪಡೆದಿರುವ ಏಳು ವಿದ್ಯಾರ್ಥಿಗಳಲ್ಲಿ ಚಿಕ್ಕೋಡಿ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯೂ ಇರುವುದು ವಿಶೇಷ. ಶೇ 92.44ರಷ್ಟು ಫಲಿತಾಂಶ ಪಡೆದಿರುವ ಅನುದಾನಿತ ಶಾಲೆಗಳು ಹಾಗೂ ಶೇ 95.4 ಫಲಿತಾಂಶ ದಾಖಲಿಸಿರುವ ಅನುದಾನರಹಿತ ಶಾಲೆಗಳಿಗೆ ಹೋಲಿಸಿದಲ್ಲಿ, ಶೇ 93.97ರಷ್ಟು ಫಲಿತಾಂಶ ದಾಖಲಿಸಿರುವ ಸರ್ಕಾರಿ ಶಾಲೆಗಳ ಸಾಧನೆಯೂ ಗಮನಸೆಳೆಯುವಂತಿದೆ. ಕಳೆದ ವರ್ಷ 766 ಸರ್ಕಾರಿ ಶಾಲೆಗಳು ನೂರಕ್ಕೆ ನೂರರಷ್ಟು ಫಲಿತಾಂಶ ಸಾಧಿಸಿದ್ದವು; ಈ ಬಾರಿ ಆ ಶ್ರೇಯ 2,393 ಸರ್ಕಾರಿ ಶಾಲೆಗಳಿಗೆ ಸಂದಿದೆ. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗಿಂತಲೂ (ಶೇ 92.6) ಇಂಗ್ಲಿಷ್ ಮಾಧ್ಯಮದವರು (ಶೇ 96.16) ಮುಂದಿದ್ದಾರೆ. ಜಿಲ್ಲಾವಾರು ಫಲಿತಾಂಶದಲ್ಲಿ ಗಮನಾರ್ಹ ಸ್ಥಾನಪಲ್ಲಟ ಇಲ್ಲದಿದ್ದರೂ, ಕೊನೆಯ ಸ್ಥಾನದಲ್ಲಿರುವ ಕಲಬುರಗಿಯಲ್ಲಿ ಶೇ 85ರಷ್ಟು ಫಲಿತಾಂಶ ದಾಖಲಾಗಿರುವುದು ಗಮನಾರ್ಹ ಸಾಧನೆಯೇ ಆಗಿದೆ. ದಕ್ಷಿಣ ಕನ್ನಡ (98.4), ಉಡುಪಿ (98.18) ಜಿಲ್ಲೆಗಳು ಮುಂಚೂಣಿಯಲ್ಲಿದ್ದರೆ, ಚಿಕ್ಕಬಳ್ಳಾಪುರ (ಶೇ 90.88) ಹಾಗೂ ಮಧುಗಿರಿ (ಶೇ 90.24) ಪಟ್ಟಿಯಲ್ಲಿ ಕೆಳಗಿವೆ. ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹಾಗೂ ಫಲಿತಾಂಶ, ತೃತೀಯ ಭಾಷೆಗೆ ಸಂಬಂಧಿಸಿದ ಗೊಂದಲದೊಂದಿಗೆ ತಳಕು ಹಾಕಿಕೊಂಡಿತ್ತು. ತೃತೀಯ ಭಾಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ನಿರ್ಧಾರವನ್ನು ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಸರ್ಕಾರ ಪ್ರಕಟಿಸಿತು. ವಿದ್ಯಾರ್ಥಿಗಳ ಮೇಲಿನ ಹೊರೆಯನ್ನು ಹಗುರಗೊಳಿಸುವ ಸರ್ಕಾರದ ಕಾಳಜಿ ಸರಿಯಾದುದೇ ಆಗಿದ್ದರೂ, ಮಹತ್ವದ ತೀರ್ಮಾನವನ್ನು ಪರೀಕ್ಷೆಯ ಸಂದರ್ಭದಲ್ಲಿ ತೆಗೆದುಕೊಂಡದ್ದು ವಿದ್ಯಾರ್ಥಿಗಳನ್ನು ಅನಗತ್ಯ ಗೊಂದಲಕ್ಕೆ ದೂಡುವಂತಹದ್ದಾಗಿತ್ತು. ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್, ಹಿಂದಿ ಸೇರಿದಂತೆ ತೃತೀಯ ಭಾಷೆಯ ವಿಷಯಗಳಿಗೆ ಈ ಬಾರಿ ಗ್ರೇಡ್ ಬದಲು ಅಂಕಗಳನ್ನೇ ನೀಡುವಂತೆ ಆದೇಶಿಸಿದ್ದು ಕೂಡ ಸರ್ಕಾರದ ತೀರ್ಮಾನ ಅಕಾಲಿಕ ಆಗಿರುವುದನ್ನು ಎತ್ತಿತೋರಿಸುವಂತಿತ್ತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಅಧಿಸೂಚನೆ ಹೊರಡಿಸಿದಾಗಲೇ ಅಂಕದ ಬದಲು ಗ್ರೇಡ್ ನೀಡಲಾಗುವುದು ಎಂದು ಸ್ಪಷ್ಟಪಡಿಸಬೇಕಿತ್ತು; ಅಧಿಸೂಚನೆಯಲ್ಲಿ ಇಲ್ಲದ ಗ್ರೇಡ್ ಪದ್ಧತಿಯನ್ನು ಈಗ ಅನುಷ್ಠಾನಕ್ಕೆ ತರುವುದು ಸರಿಯಲ್ಲ ಎಂದು ಹೈಕೋರ್ಟ್ ಹೇಳಿದ್ದು ಸರಿಯಾಗಿಯೇ ಇದೆ. ಅಂಕಗಳ ಬದಲು ಗ್ರೇಡ್ ನೀಡುವುದಾಗಿ ಹಾಗೂ ತೃತೀಯ ಭಾಷೆ ವಿಷಯಗಳ ಫಲಿತಾಂಶವನ್ನು ಸರಾಸರಿಗೆ ಪರಿಗಣಿಸುವುದಿಲ್ಲ ಎನ್ನುವ ಸರ್ಕಾರದ ನಿರ್ಧಾರದಿಂದ ಕೆಲವು ವಿದ್ಯಾರ್ಥಿಗಳಿಗೆ ತೊಂದರೆ ಆಗಿರುವ ಸಾಧ್ಯತೆ ಇದೆ. ಗ್ರೇಡ್ ಕಾರಣದಿಂದಾಗಿ ತೃತೀಯ ಭಾಷೆ ವಿಷಯವನ್ನು ಗಂಭೀರವಾಗಿ ಪರಿಗಣಿಸದವರ ಸರಾಸರಿಯ ಮೇಲೆ ಅಂಕ ನೀಡುವ ಪದ್ಧತಿ ಮುಂದುವರಿದಿರುವುದು ಪರಿಣಾಮ ಬೀರಿರುವ ಸಾಧ್ಯತೆಯಿದೆ. ಈ ಬೆಳವಣಿಗೆಯಿಂದ ಸರ್ಕಾರ ಪಾಠ ಕಲಿತು, ಹೊಸ ಶೈಕ್ಷಣಿಕ ವರ್ಷದ ಆರಂಭದಲ್ಲೇ ತೃತೀಯ ಭಾಷೆಗೆ ಸಂಬಂಧಿಸಿದಂತೆ ಸ್ಪಷ್ಟನೀತಿ ಪ್ರಕಟಿಸಬೇಕು. ಶೈಕ್ಷಣಿಕ ನೀತಿಗಳು ವಿದ್ಯಾರ್ಥಿಗಳಿಗೆ ಸ್ಪಷ್ಟತೆ ನೀಡುವಂತೆ ಇರಬೇಕು, ಗೊಂದಲ ಮೂಡಿಸಬಾರದು.

# ಪೈಲ್ವಾನರ ಬದುಕಿನಲ್ಲಿ ಈಜಿನ ಮಹತ್ವ



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಭಾರತೀಯ ಕ್ರೀಡಾ ಪರಂಪರೆಯಲ್ಲಿ ಕುಸ್ತಿ ಮತ್ತು ಈಜು ಕೇವಲ ಕ್ರೀಡೆಗಳಲ್ಲ; ಅವು ಶಿಸ್ತುಬದ್ಧ ಜೀವನಶೈಲಿಯ ಅವಿಭಾಜ್ಯ ಅಂಗಗಳು. ಕೆಂಪು ಮಣ್ಣಿನ ಅಖಾಡದಲ್ಲಿ ಸೆಣಸಾಡಿ, ಬೆವರಿನಿಂದ ಮಿಂದು ಹಸನಾದ ಪೈಲ್ವಾನನ ಶರೀರಕ್ಕೆ ಈಜು ಎಂಬುದು ಕೇವಲ ಸ್ನಾನವಲ್ಲ, ಅದೊಂದು ದೈಹಿಕ, ಮಾನಸಿಕ ಪುನಶ್ಚೇತನದ ವೈಜ್ಞಾನಿಕ ತಂತ್ರ.

ಪ್ರಾಚೀನ ಗರಡಿ ಮನೆಗಳ ಪಕ್ಕದಲ್ಲೇ ಕೆರೆ ಅಥವಾ ಬಾವಿಗಳಿರುತ್ತಿದ್ದವು. ಹರಿಯುವ ನೀರಿನ ವಿರುದ್ಧ ಈಜುವುದು ಪೈಲ್ವಾನರ ತೋಳುಗಳಿಗೆ ಅಪ್ರತಿಮ ಬಲ ನೀಡುತ್ತಿತ್ತು. ಬಾವಿಯ ಆಳಕ್ಕೆ ಮುಳುಗಿ ಏಳುವುದು ಶ್ವಾಸಕೋಶದ ಸಾಮರ್ಥ್ಯವನ್ನು ವೃದ್ಧಿಸುತ್ತಿತ್ತು. ಇದು ಕೃತಕ ಜಿಮ್‌ಗಳ ಅಬ್ಬರವಿಲ್ಲದ ಕಾಲದಲ್ಲಿ ಪ್ರಕೃತಿಯೇ ನೀಡಿದ ಅತ್ಯುತ್ತಮ ರೆಸಿಸ್ಟೆನ್ಸ್ ಟ್ರೈನಿಂಗ್ ಆಗಿತ್ತು.

ಕುಸ್ತಿಯ ಅಖಾಡದಲ್ಲಿ ಸ್ನಾಯುಗಳು ತೀವ್ರವಾದ ಆಯಾಸಕ್ಕೆ ಒಳಗಾದಾಗ ಅವುಗಳಲ್ಲಿ ಲ್ಯಾಕ್ಟಿಕ್ ಆಸಿಡ್ ಶೇಖರಣೆಯಾಗುತ್ತದೆ. ಈ ಹಂತದಲ್ಲಿ ನೀರಿನಲ್ಲಿ ಈಜುವುದರಿಂದ ಸ್ನಾಯುಗಳಿಗೆ ನೈಸರ್ಗಿಕ ಮಸಾಜ್ ದೊರೆಯುತ್ತದೆ. ಇಂದಿನ ವೈದ್ಯಕೀಯ ಲೋಕ ಇದನ್ನು ಹೈಡ್ರೋಥೆರಪಿ ಎಂದು ಕರೆಯುತ್ತದೆ. ನೀರಿನ ಸಾಂದ್ರತೆಯು ರಕ್ತ ಪರಿಚಲನೆಯನ್ನು ಚುರುಕುಗೊಳಿಸಿ, ಕೀಲುಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ. ಜಲದೊಳಗೆ ಉಸಿರನ್ನು ನಿಯಂತ್ರಿಸುವ ಕಲೆ ಪೈಲ್ವಾನನಿಗೆ ದೀರ್ಘಕಾಲದ ಪಂದ್ಯಗಳಲ್ಲಿ ಹೋರಾಡಲು ಬೇಕಾದ ಸ್ಟ್ಯಾಮಿನಾ ನೀಡುತ್ತದೆ. ಈಜುವಾಗ ಉಸಿರಾಟದ ಲಯಬದ್ಧತೆಯು ಶ್ವಾಸಕೋಶದ ಗಾಳಿಯ ವಿನಿಮಯ ಸಾಮರ್ಥ್ಯ ಅನ್ನು ಹೆಚ್ಚಿಸುತ್ತದೆ. ಇದು ಕೇವಲ ದೈಹಿಕವಲ್ಲ, ಬದಲಿಗೆ ಮನಸ್ಸನ್ನು ಶಾಂತಗೊಳಿಸುವ ಧ್ಯಾನದಂತೆಯೇ ಕಾರ್ಯನಿರ್ವಹಿಸುತ್ತದೆ. ಕುಸ್ತಿಪಟುಗಳು ಬಾದಾಮಿ, ತುಪ್ಪದಂತಹ ಉಷ್ಣದಾಯಕ ಆಹಾರ ಸೇವಿಸುವುದರಿಂದ, ಅತಿ ಕಠಿಣ ವ್ಯಾಯಾಮದಿಂದ ದೇಹದ ಉಷ್ಣತೆ ಹೆಚ್ಚಿರುತ್ತದೆ. ತಂಪಾದ ಕೆರೆ-ಬಾವಿಯ ನೀರು ಈ ಶಾಖವನ್ನು ಹೀರಿಕೊಂಡು ದೇಹದ ಆಂತರಿಕ ಉಷ್ಣತೆಯನ್ನು ಸಮತೋಲನಕ್ಕೆ ತರುತ್ತದೆ. ಇದು ನರಮಂಡಲಕ್ಕೆ ಮುದ ನೀಡಿ, ಅಖಾಡದ ಜಿದ್ದಾಜಿದ್ದಿನ ನಂತರ ಪೈಲ್ವಾನನಿಗೆ ಸುಖನಿದ್ರೆ ಹಾಗೂ ಮಾನಸಿಕ ಸ್ಥಿರತೆಯನ್ನು ಒದಗಿಸುತ್ತದೆ. ಭಾರ ಎತ್ತುವಿಕೆ ಮತ್ತು ಸತತ ದಂಡ-ಬೈಠಕ್‌ಗಳಿಂದ ಕೀಲುಗಳ ಮೇಲೆ ಬೀರುವ ಭಾರವನ್ನು ಈಜು ತಗ್ಗಿಸುತ್ತದೆ. ನೀರಿನಲ್ಲಿ ದೇಹದ ತೂಕ ಕಡಿಮೆಯಾಗುವುದರಿಂದ, ಕೀಲುಗಳಿಗೆ ಯಾವುದೇ ಹಾನಿಯಾಗದಂತೆ ಸ್ನಾಯುಗಳ ನಮ್ಯತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ.

ನಮ್ಮ ಹಿರಿಯರು ರೂಪಿಸಿದ ಈ ಕೆರೆ-ಬಾವಿಗಳ ಈಜಿನ ಸಂಪ್ರದಾಯವು ವೈಜ್ಞಾನಿಕವಾಗಿ ಅತ್ಯಂತ ಶ್ರೇಷ್ಠವಾದುದು. ಅಖಾಡದ ವೀರನೊಬ್ಬ ಮಣ್ಣಿನಲ್ಲಿ ಪಳಗಿ, ನೀರಿನಲ್ಲಿ ಮಾಗಿ ಪೂರ್ಣಪ್ರಮಾಣದ ಅಜೇಯ ಪೈಲ್ವಾನನಾಗುವ ಈ ಪ್ರಕ್ರಿಯೆ ಇಂದಿನ ಆಧುನಿಕ ಕ್ರೀಡಾಪಟುಗಳಿಗೂ ದಾರಿದೀಪವಾಗಿದೆ.




# ಮೌನದಲ್ಲೇ ಮಹತ್ವ: ಡಾ. ರಾಜಕುಮಾರ್ ಅವರ ಅಪರೂಪದ ಮಾನವೀಯ ಗುಣ




ನಾ ಕಂಡಂತೆ
ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಕನ್ನಡ ಚಿತ್ರರಂಗದ ದಿಗ್ಗಜ, ಅಭಿಮಾನಿಗಳ ಹೃದಯಸಿಂಹಾಸನದಲ್ಲಿರುವ ಡಾ. ರಾಜಕುಮಾರ್ ಅವರು ಕೇವಲ ಒಬ್ಬ ನಟನಷ್ಟೇ ಅಲ್ಲ, ಮೌಲ್ಯಗಳ ಪ್ರತಿರೂಪವಾಗಿದ್ದರು. ಅವರ ಅಭಿನಯ, ಗಾಯನ, ಶಿಸ್ತು ಇವುಗಳ ಬಗ್ಗೆ ಎಲ್ಲರಿಗೂ ತಿಳಿದಿದೆ. ಆದರೆ, ಅವರಲ್ಲಿ ಅಡಗಿದ್ದ ಒಂದು ಅಪರೂಪದ ಗುಣ ಮೌನದಲ್ಲಿ ಮಾಡಿದ ಸಹಾಯ ಮತ್ತು ವಿನಮ್ರತೆ ಬಹುತೇಕ ಜನರಿಗೆ ತಿಳಿದಿಲ್ಲ. ಡಾ. ರಾಜಕುಮಾರ್ ಅವರು ''ಮಾಡಿದ ಒಳ್ಳೆಯದನ್ನು ಪ್ರಚಾರಕ್ಕೆ ತರುವುದು ಬೇಡ'' ಎಂಬ ಜೀವನ ತತ್ವವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಇದಕ್ಕೆ ಉದಾಹರಣೆಯಾಗಿ ಅವರ ಜೀವನದಲ್ಲಿ ನಡೆದ ಒಂದು ಮನಮುಟ್ಟುವ ಘಟನೆ ಹೇಳಬಹುದು. ಒಂದು ದಿನ, ಅವರ ಬಳಿ ಒಂದು ಬಡ ಕುಟುಂಬ ಸಹಾಯಕ್ಕಾಗಿ ಬಂದಿತ್ತು.

ಆ ಕುಟುಂಬದ ಮಗನಿಗೆ ತುರ್ತು ಶಸ್ತ್ರಚಿಕಿತ್ಸೆ ಅಗತ್ಯವಾಗಿತ್ತು. ಹಣದ ಕೊರತೆಯಿಂದ ಅವರು ಸಂಪೂರ್ಣವಾಗಿ ನಿರಾಶರಾಗಿದ್ದರು.

ಈ ವಿಚಾರ ತಿಳಿದ ಕೂಡಲೇ, ರಾಜಕುಮಾರ್ ಅವರು ಯಾವುದೇ ಹಂಗಿಲ್ಲದೆ, ಯಾವುದೇ ಪ್ರಚಾರವಿಲ್ಲದೆ ಆ ಮಗುವಿನ ಚಿಕಿತ್ಸೆಗಾಗಿ ಬೇಕಾದ ಎಲ್ಲಾ ವೆಚ್ಚವನ್ನು ಹೊತ್ತುಕೊಂಡರು. ಆದರೆ ಅವರು ತಮ್ಮ ಹೆಸರನ್ನು ಎಲ್ಲಿಯೂ ಬಳಸಲು ಬಿಡಲಿಲ್ಲ. ಅವರ ಸಹಾಯವನ್ನು ಮತ್ತೊಬ್ಬರ ಮೂಲಕ ಗುಪ್ತವಾಗಿ ಮಾಡಿಸಿದರು. ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆಯಿತು, ಮತ್ತು ಆ ಮಗು ಹೊಸ ಜೀವನವನ್ನು ಕಂಡಿತು. ಇಲ್ಲಿ ವಿಶೇಷವೆಂದರೆ ಆ ಕುಟುಂಬಕ್ಕೆ ಸಹಾಯ ಮಾಡಿದವರು ಡಾ. ರಾಜಕುಮಾರ್ ಎಂಬುದು ಅವರಿಗೆ ಬಹುಕಾಲ ತಿಳಿದಿರಲಿಲ್ಲ. ವರ್ಷಗಳ ನಂತರ ಈ ಸತ್ಯ ಹೊರಬಂದಾಗ, ಅವರ ಕೃತಜ್ಞತೆಯ ಭಾವನೆಗಳನ್ನು ಹೇಳಲು ಪದಗಳೇ ಸಾಲಲಿಲ್ಲ. ಈ ಘಟನೆ ಅವರ ಮೌನದ ಮಾನವೀಯತೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ.


ಇಂತಹ ಘಟನೆ ಒಂದೇ ಅಲ್ಲ. ಅನೇಕ ಕಲಾವಿದರು, ವಿದ್ಯಾರ್ಥಿಗಳು, ರೈತರು ಮತ್ತು ಸಂಕಷ್ಟದಲ್ಲಿದ್ದ ಸಾಮಾನ್ಯ ಜನರಿಗೆ ಅವರು ನೆರವಾಗಿದ್ದರು. ಆದರೆ ಎಲ್ಲಿಯೂ ಅವರು ತಮ್ಮ ಸಹಾಯವನ್ನು ಹೊರಗೆ ತರುವುದಿಲ್ಲ. ''ಒಳ್ಳೆಯದನ್ನು ಮಾಡಿ ಮೌನವಾಗಿರಿ'' ಎಂಬುದೇ ಅವರ ನಿಲುವಾಗಿತ್ತು. ಅವರ ಜೀವನಶೈಲಿಯೂ ಕೂಡ ಅಷ್ಟೇ ಪ್ರೇರಣಾದಾಯಕವಾಗಿತ್ತು.




ಶಿಸ್ತು, ಸಮಯಪಾಲನೆ ಮತ್ತು ಸರಳತೆ ಇವುಗಳು ಅವರ ದಿನನಿತ್ಯದ ಭಾಗವಾಗಿದ್ದವು. ಅವರು ಯೋಗ, ಪ್ರಾಣಾಯಾಮವನ್ನು ನಿಯಮಿತವಾಗಿ ಮಾಡುತ್ತಿದ್ದರು. ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಜೊತೆಗೆ, ಮನಸ್ಸಿನ ಶಾಂತಿಯನ್ನೂ ಉಳಿಸಿಕೊಂಡಿದ್ದರು.

ಚಿತ್ರರಂಗದಲ್ಲಿ ಅಪಾರ ಯಶಸ್ಸು ಗಳಿಸಿದ್ದರೂ, ಅವರು ಎಂದಿಗೂ ಅಹಂಕಾರಕ್ಕೆ ಜಾಗ ನೀಡಲಿಲ್ಲ. ಇಂದಿನ ಕಾಲದಲ್ಲಿ ಸಣ್ಣ ಸಹಾಯವನ್ನೂ ದೊಡ್ಡದಾಗಿ ಪ್ರಚಾರ ಮಾಡುವವರ ನಡುವೆ, ರಾಜಕುಮಾರ್ ಅವರಂತಹ ಮೌನದ ದಾನಶೀಲತೆ ಅಪರೂಪವಾಗಿದೆ. ಅವರ ಜೀವನ ನಮಗೆ ಹೇಳುವ ಮಹತ್ವದ ಪಾಠವೇನೆಂದರೆ? ಒಳ್ಳೆಯದನ್ನು ಮಾಡುವುದೇ ಮುಖ್ಯ, ಅದನ್ನು ಹೇಳಿಕೊಳ್ಳುವುದು ಅಲ್ಲ.

ಶುಕ್ರವಾರ ಅವರ ಜನ್ಮದಿನದ ಸಂದರ್ಭದಲ್ಲಿ, ನಾವು ಅವರ ಚಿತ್ರಗಳನ್ನು ಮಾತ್ರ ನೆನಪಿಸಿಕೊಳ್ಳದೆ, ಅವರ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಮೌನದಲ್ಲಿ ಸಹಾಯ ಮಾಡುವುದು, ವಿನಮ್ರತೆಯಿಂದ ಬದುಕುವುದು, ಸಮಾಜಕ್ಕೆ ಕೊಡುಗೆ ನೀಡುವುದು ಇವೇ ಅವರಿಂದ ಕಲಿಯಬೇಕಾದ ಪಾಠಗಳು. ಡಾ. ರಾಜಕುಮಾರ್ ಅವರು ದೇಹದಿಂದ ಇಲ್ಲದಿದ್ದರೂ, ಅವರ ಮೌಲ್ಯಗಳು ಮತ್ತು ಮಾನವೀಯತೆ ಸದಾಕಾಲ ಜೀವಂತವಾಗಿರುತ್ತವೆ. ಅಣ್ಣಾವ್ರು ಎಂದರೆ ಕೇವಲ ನಟನಲ್ಲ ಒಂದು ಆದರ್ಶ ಜೀವನದ ಪ್ರತಿರೂಪ.



ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ ಹಾಸನ್
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

## ಬಂಧು ದ್ರೋಹಿ

ಸ್ನೇಹವೆನುತ ನಂಬಿಕೆ ದ್ರೋಹವ ಮಾಡುವರು
ಬದುಕ ಅರಿಯದೆ ಜೀವನದಿ ಎಲ್ಲೆಡೆ ಸಾಗುವರು
ಮಾತು ಮರೆಯುತ ಸ್ವಾರ್ಥದಿ ಬದುಕುವರು
ಬಾಳಿನ ದಾರಿಯಲಿ ನಂಬಿಕೆ ದ್ರೋಹದಲ್ಲಿರುವರು....
ಬದುಕೆಂಬ ಅಂಕು ಡೊಂಕಿನ ದಾರಿ
ಎಲ್ಲವ ಮರೆತು ಸಾಗಬೇಕಿದೆ ಮಾರಿ
ಸೋಲುವ ಕ್ಷಣದಿ ದುಃಖ ಸಹಜವೇ
ಎಲ್ಲವೂ ಪಾಠವಾಗುವುದು ಆಗ ಜಗವೇ....
ಬಾಳಿನ ಯಾನ ಸಾಗಲಿ ಸಮಾಧಾನವಾಗಿ
ಕೆಲವೊಮ್ಮೆ ಒಳ್ಳೆ ಕಾರ್ಯಕೆ ಅಡೆ -ತಡೆ ಒಳಿತಿಗಾಗಿ
ಒಮ್ಮೆ ಬೇಕು ಒಮ್ಮೆ ಬೇಡ ಅರಿಯದ ಮನವೋ
ಕೈಗೆಲ್ಲ ಸಿಕ್ಕರೆ ಬೆಲೆಯೂ ಯಾವುದಕ್ಕೂ ಇಲ್ಲವೋ....
ಕಷ್ಟ-ನಷ್ಟವು ಸಹಜ ಬಾಳಬೇಕು ಮನುಜ
ಅರಿತರೆ ಯೋಗಿ ಇಲ್ಲದಿರೆ ಆಗುವನು ಜೋಗಿ
ಮನುಜನಿಗೆ ಕರ್ಮ ಕಳೆಯಲು ಬೇಕು ಮುಕ್ತಿ
ಅದಕ್ಕೆ ಶಾಂತಿಯಿಂದ ಬಳಸಬೇಕು ಯುಕ್ತಿ....





# ರಾಮಾಯಣ

ಸೂರ್ಯಾಸ್ತಸಮಯದಲ್ಲಿ ಮಾರುತಿಯು ಸೂಕ್ಷ್ಮದೇಹಿಯಾಗಿ ಲಂಕೆಯನ್ನು ಹೊಕ್ಕುದು

• ಹಿಂದಿನ ಸಂಚಿಕೆಯಿಂದ

## ಸುಂದರಕಾಂಡ

ಸುಗ್ರೀವ ಅಂಗದವಿರುವ ಜಾಗಕ್ಕೆ ಬರಲೂ ಅಶಕ್ಯವೆಂದು ತೋರುತ್ತದೆ, ಕಷ್ಟಪಟ್ಟು ಶರಧಿಯನ್ನು ದಾಟಿ ಬಂದರೂ ಈ ಬೆಟ್ಟವನ್ನು ಎದುರಿಸುವುದು ಯಾರಿಂದಲಾದೀತು! ಇದೆಲ್ಲ ಗೊತ್ತಾಗದೆ ಪ್ರತಿಜ್ಞೆ ಮಾಡಿದ್ದು ನಿಷ್ಪದವೇನೋ, ಯಾವ ಉಪಾಯವೂ ಫಲಿಸದೇನೋ ಎನ್ನಿಸುತ್ತಿದೆ, ಇಂತಹ ನಗರವನ್ನು ಹೊಕ್ಕು ಸೀತಾಮಾತೆಯನ್ನು ಹುಡುಕುವುದು ಹೇಗೆ ಎಂಬ ಯೋಚನೆಯಲ್ಲಿ ಮಾರುತಿಯು ಮುಳುಗಿದ. ನಾನು ಈ ರೂಪದಿಂದಿದ್ದರೆ ರಕ್ಕಸರು ದೂರು ಹೇಳುತ್ತಾರೆ, ಅದನ್ನು ಕೇಳಿದ ಅಸುರಪತಿಯು ಕುತೂಹಲದಿಂದ ನನ್ನನ್ನು ಹಿಡಿತರಲು ಹೇಳುತ್ತಾನೆ, ಅಂತಹ ಅಸುರರ ಒಡನಾಟದಿಂದ ಸೀತೆಯನ್ನು ಹುಡುಕುವುದು ಅಸಾಧ್ಯ, ಯಾರಾದರೂ ರಘುಪತಿಗೆ ವಿಷಯವನ್ನು ತಿಳಿಸದಿದ್ದರೆ ಅಂದುಕೊಂಡ ಕಾರ್ಯ ನೆರವೇರುವುದು ಹೇಗೆ - ಎಂದು ಪವನಸುತನು ಚಿಂತೆಯಲ್ಲಿ ಸೇರಿಹೋದ. ಈಗಾಗಲೇ ಸೂರ್ಯಾಸ್ತ ಸಮಯ, ಇಂತಹ ಕಷ್ಟಕಾರ್ಯದ ಬಗ್ಗೆ ದಟ್ಟವಾಗುತ್ತಿರುವ ಈ ಕತ್ತಲೆಯಲ್ಲಿ ಚಿಂತಿಸಿದಷ್ಟೂ ಧೈರ್ಯ ಕಡಿಮೆಯಾಗುತ್ತದೆ, ಬೆಳಗಾದ ಮೇಲೆ ಮನಸ್ಸಿಗೆ ಲವಲವಿಕೆ ಮೂಡೀತು ಎಂದುಕೊಂಡ. ಆನಂತರ ತನ್ನ ದೇಹದ ಗಾತ್ರವನ್ನು ಕುಗ್ಗಿಸಿಕೊಂಡು ಪರ್ಯಾಯ ಉಪಾಯಗಳ ಬಗ್ಗೆ ಆಲೋಚಿಸುತ್ತ ಜಲಜಬಾಂಧವನು ಪಡುಗಿರಿಯಲ್ಲಿ ಇಳಿಯುವುದನ್ನೇ ನೋಡುತ್ತ ಕುಳಿತುಕೊಂಡ. ಹುಟ್ಟಿದ ತಕ್ಷಣವೇ ಹಸಿವನ್ನು ನೀಗಿಸುವ ಹಣ್ಣು ಎಂದು ಭಾವಿಸಿದ ಈ ಹನುಮಂತನು ನನ್ನನ್ನು ತಿನ್ನಲು ಆಕಾಶಕ್ಕೆ ನೆಗೆದನಲ್ಲ, ಆಗ ದೇವೇಂದ್ರನಿಂದಾಗಿ ಉಳಿದೆ; ಅಂತಹವನು ಈಗ ಯೌವನಾವಸ್ಥೆಯಲ್ಲಿ ನನ್ನನ್ನು ಕಂಡು ಏನು ಮಾಡುವನೋ!' ಎಂದು ಬೆದರಿದ ಕಮಲಾಪ್ತನು ಪಶ್ಚಿಮಗಿರಿಯ ಹಿಂದೆ. ಆತುರದಿಂದ ಅವಿತುಕೊಂಡ! ದ್ವಿಜರ ಸರ್ವಸ್ವವನ್ನು ಕಿತ್ತುಕೊಂಡ, ಋತುಮತಿಯರನ್ನು ಸಂಭೋಗಿಸಿದ, ಗೋತ್ರದವರಿಗೆ ಉದ್ವೇಗವನ್ನುಂಟುಮಾಡಿದ, ಒಳ್ಳೆಯ ವಂಶದವರನ್ನು. ಸತತವಾಗಿ ಹಿಂಸಿಸಿದ ಪಾತಕದಿಂದ ಅಧೋಗತಿಯನ್ನು ಸೇರಿದ ಸೂರ್ಯನು ಆಕಾಶವನ್ನು ಬಿಟ್ಟು ವಿರಕ್ತಿಯಿಂದ ಪಶ್ಚಿಮಗಿರಿಯಲ್ಲಿ ದೇವಯಜ್ಞ ಮಾಡಿ ಪಾಪವನ್ನು ಕಳೆದುಕೊಂಡು ಪುನೀತನಾಗಲು ಹೋಗುತ್ತಿರುವನೋ ಎಂಬಂತೆ ಜಾರಿದ. ದೇಹದಲ್ಲಿ ಬಲವಿದ್ದು ಗಳಿಕೆಯು ಯಥೇಚ್ಛವಾಗಿದ್ದಾಗ ಉಪಾಯವಾಗಿ ಸವಿಮಾತುಗಳನ್ನಾಡುತ್ತ ಲಲ್ಲೆಗರೆಯುತ್ತ ಎಲ್ಲವನ್ನೂ ಕಿತ್ತುಕೊಂಡು ಸುಖವಾಗಿದ್ದು, ಶಕ್ತಿಸಾಮರ್ಥ್ಯಗಳು ಕಡಿಮೆಯಾಗಿ ಕೊಡಲು ಹಣವಿಲ್ಲದಾಗ ಆಕಾಶವೆಂಬ ಗಣಿಕೆಯು ಕಂಡರೆ ಅಪಾಯವೆಂದು ಭಾವಿಸಿ ನಾಚಿಕೆಯಿಂದ ಬೇಗ ಬೇಗ ಸಾಗಿ. ಮಹಾ ತಪಸ್ಸನ್ನು ಮಾಡಬಯಸಿದನೋ ಎಂಬಂತೆ ಸೂರ್ಯನು ಆಗಸದಿಂದ ಇಳಿದ. ಗಗನದಲ್ಲಿ ಅಲೆದಾಟವು ಪ್ರತಿನಿತ್ಯವೂ ಇದ್ದದ್ದೇ; ಅಲ್ಲಿಯೋ ಆಧಾರವೂ ಇಲ್ಲ, ನೀರುನೆರಳುಗಳೂ ಇಲ್ಲ, ದೇಹಕ್ಕಾಗುವ ಆಯಾಸವೋ ಸಹಿಸಲಸಾಧ್ಯ; ಹೀಗಾಗಿ ನೀರಡಿಕೆಯಿಂದ ನೀರಿಗಾಗಿ ಸಮುದ್ರದ ದಡಕ್ಕೆ ಹೋಗಲು ರವಿಯು ವೇಗದಿಂದ ಸಾಗಿ ಪಶ್ಚಿಮಗಿರಿಯ ಅಂಚನ್ನು ಸೇರಿದ. ಚರಮಗಿರಿಯಲ್ಲಿ ಮುಳುಗುವ ಸೂರ್ಯಬಿಂಬವು ವರುಣನ ರಾಣಿಯ ರನ್ನಗನ್ನಡಿಯೋ, ಸಿಂಧೂರವನ್ನು ಅರೆಯುವ ಸಾಣೆಗಲ್ಲೋ, ಆಗಸವೆಂಬ ಆನೆಯ ಮಾಣಿಕ್ಯ ಖಚಿತವಾದ ಅರಳೆಲೆಯೋ, ತಾಂಡವವನ್ನೆಸಗುವ ರುದ್ರನ ಹಣೆಗಣ್ಣೋ, ನಾಗರಾಜನ ಹೆಡೆಯ ರನ್ನವಣಿಯೋ ಎನ್ನುವಂತೆ ರಂಜಿಸಿತು. ಬ್ರಹ್ಮನಂತೆ ಹುಟ್ಟುತ್ತೇನೆ, ಮಹೇಶ್ವರನಂತೆ ಬೆಳಗುತ್ತೇನೆ, ಶ್ರೀವಿಷ್ಣುವಿನಂತೆ ಕಾಣಿಸುತ್ತೇನೆ; ಆದರೆ ಕಾಲವಶನಾಗಿ ಜನಿಸಿದವನಿಗೆ ಹುಟ್ಟುಸಾವುಗಳು ತಪ್ಪವು ಎಂಬುದಕ್ಕೆ ನಾನೇ ಸಾಕ್ಷಿ ಎಂದು ತೋರಿಸಿಕೊಳ್ಳುವಂತೆ ಮಿತ್ರನು ಪಶ್ಚಿಮಸಮುದ್ರದಲ್ಲಿ ಮುಳುಗಲು, ತಾವರೆಗಳು ಗೋಳಾಡಿದವು. ಲೋಕಬಾಂಧವ, ದಿವಸದ ರತ್ನಮಿತ್ರ, ದ್ವಿಜಸಮೂಹದ ಪೋಷಕ, ಧರ್ಮಸಾಕ್ಷಿ ಹಂಸ, ಲೋಕದ ಕಣ್ಣು, ಸನ್ಮಾರ್ಗಿಯಾದ ಸೂರ್ಯನು ಕಾಲಕ್ಕನುಗುಣವಾಗಿ ಬರಲು ಚರಮಗಿರಿಯು ತನ್ನ ಪ್ರೀತಿಯನ್ನು ತೋರ್ಪಡಿಸಿ ಸಿಂಹಾಸನದಲ್ಲಿ ಕುಳ್ಳಿರಿಸಿ ಸತ್ಕರಿಸಿದ; ಈ ಲೋಕದಲ್ಲಿ ಸಜ್ಜನರನ್ನು ಗೌರವಿಸದಿರುವವರಿದ್ದಾರೆಯೇ!


ಮುಂದುವರಿಯುವುದು...

# ನೃತ್ಯದ ನಾದದಲ್ಲಿ ಹೊಸ ಹೆಜ್ಜೆ ಶ್ರಾವಣಿ ಪ್ರಕಾಶ ವೇದಿಕೆ ಪ್ರವೇಶ

ನಗರದ ಪ್ರತಿಭಾವಂತ ಯುವ ನೃತ್ಯಾಂಗನೆ ಕುಮಾರಿ ಶ್ರಾವಣಿ ಪ್ರಕಾಶ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮವು ಅವರ ನೃತ್ಯಯಾತ್ರೆಯ ಮಹತ್ವದ ಘಟ್ಟವಾಗಿ ಮೂಡಿಬರುತ್ತಿದೆ. ಹಲವು ವರ್ಷಗಳ ನಿರಂತರ ಅಭ್ಯಾಸ, ಶ್ರದ್ಧೆ ಮತ್ತು ಪರಿಶ್ರಮದ ಫಲವಾಗಿ ಈ ವೇದಿಕೆ ಪ್ರವೇಶ ಸಿದ್ಧಗೊಂಡಿದೆ. ಬಾಲ್ಯದಿಂದಲೇ ನೃತ್ಯಸಾಧನೆಯಲ್ಲಿ ತೊಡಗಿಕೊಂಡಿರುವ ಶ್ರಾವಣಿ, ಇಂಜಿನಿಯರಿಂಗ್ ಹಾಗೂ ವಿನ್ಯಾಸ ಕ್ಷೇತ್ರಗಳಲ್ಲಿಯೂ ಸಾಧನೆ ಮಾಡಿ, ಶಿಕ್ಷಣ, ಕಲೆಯ ನಡುವೆ ಸಮತೋಲನ ಸಾಧಿಸಿರುವುದು ವಿಶೇಷ. ಅವರ ಈ ಸಾಧನೆ ಯುವಜನತೆಗೆ ಪ್ರೇರಣೆಯಾಗಿದೆ.

ಈ ರಂಗಪ್ರವೇಶಕ್ಕೆ ಮಾರ್ಗದರ್ಶನ ನೀಡಿರುವ ಕಲಾನಿಧಿ ಸ್ಕೂಲ್ ಆಫ್ ಡಾನ್ಸ್‌ನ ವಿದುಷಿ ವೀಣಾ ನಿಧಿರವರು, ಶ್ರಾವಣಿಯ ಶಿಸ್ತಿನ ಅಭ್ಯಾಸ, ನೃತ್ಯಪಟುತ್ವ ಮತ್ತು ಕಲಾನಿಷ್ಠೆಯನ್ನು ಪ್ರಶಂಸಿಸಿದ್ದಾರೆ. ತನ್ನೊಳಗಿನ ಕಲಾಸೌಂದರ್ಯವನ್ನು ಅರಳಿಸಿಕೊಂಡಿರುವ ಈ ಯುವ ನೃತ್ಯಾಂಗನೆಯ ಮೊದಲ ವೇದಿಕೆ ಪ್ರವೇಶ, ಅವಳ ಪರಿಶ್ರಮದ ಪುಷ್ಪಫಲವಾಗಿದೆ.

ಈ ಕಾರ್ಯಕ್ರಮವು ಏಪ್ರಿಲ್ 26ರಂದು (ಭಾನುವಾರ) ಬೆಳಗ್ಗೆ 10.00 ಗಂಟೆಗೆ ನಗರದ ಟೌನ್ ಹಾಲ್ ಸಮೀಪದ





ಜೆ.ಸಿ. ರಸ್ತೆಯ ಎಡಿಎ ರಂಗ ಮಂದಿರದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಕೇಶವ ನೃತ್ಯ ಶಾಲೆಯ ನಿರ್ದೇಶಕ ಕಲಾಯೋಗಿ ಗುರು ವಿದ್ವಾನ್ ರಘುನಂದನ್ ಎಸ್, ದೇವಗಿರಿ ವೆಂಕಟೇಶ್ವರ ದೇವಾಲಯದ ಕಾರ್ಯದರ್ಶಿ ಮದನ್ ಜಿ.ಹೆಚ್., ಸಂತ ಜೋಸೆಫ್ ವಾಣಿಜ್ಯ ಕಾಲೇಜಿನ ಇಂಗ್ಲಿಷ್ ವಿಭಾಗದ ನಿಕಟಪೂರ್ವ ಮುಖ್ಯಸ್ಥ ಡಾ. ಆರ್. ರಾಜಾರಾಮ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕಾರ್ಯಕ್ರಮವು ಪುಷ್ಪಾಂಜಲಿ ಮೂಲಕ ಪ್ರಾರಂಭವಾಗಿ, ಅಲಾರಿಪ್ಪು, ಜತಿಸ್ವರಂ, ಶಬ್ದಂ, ವರ್ಣಂ, ಪದಂ, ತಿಲ್ಲಾನಾ ಹಾಗೂ ಮಂಗಳಂ ಎಂಬ ಪರಂಪರೆಯ ನೃತ್ಯ ಅಂಗಗಳನ್ನು ಒಳಗೊಂಡಿರುತ್ತದೆ. ಈ ಮೂಲಕ ಭರತನಾಟ್ಯದ ಭಾವ, ಲಯ, ತಾಳಗಳ ವೈವಿಧ್ಯತೆಯನ್ನು ಅನಾವರಣಗೊಳಿಸಲಾಗುತ್ತದೆ.

ನಟುವಾಂಗದಲ್ಲಿ ವಿದುಷಿ ವೀಣಾ ನಿಧಿ, ಗಾಯನದಲ್ಲಿ ವಿದುಷಿ ವಸುಧಾ ಬಾಲಕೃಷ್ಣ, ಮೃದಂಗದಲ್ಲಿ ವಿದ್ವಾನ್ ಶ್ರೀಹರಿ ರಂಗಸ್ವಾಮಿ, ಕೊಳಲಿನಲ್ಲಿ ವಿದ್ವಾನ್ ವಿವೇಕ್ ವಿ. ಕೃಷ್ಣ, ಘಟಂನಲ್ಲಿ ವಿದ್ವಾನ್ ತುಮಕೂರು ಬಿ. ಶಶಿಶಂಕರ್ ಸಾಥ್ ನೀಡಲಿದ್ದಾರೆ.

ವಿದುಷಿ ರೂಪಶ್ರೀ ಮಧುಸೂದನ್ ಅವರ ಮನೋಜ್ಞ ನಿರೂಪಣೆ ಕಾರ್ಯಕ್ರಮಕ್ಕೆ ಇನ್ನಷ್ಟು ಮೆರುಗು ನೀಡಲಿದೆ. ಕಾರ್ಯಕ್ರಮದ ಆಯೋಜಕರಾದ ಮಂಜುಳಾ, ಎಸ್. ಕೆ. ಪ್ರಕಾಶ್ ಅವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕೋರಿದ್ದಾರೆ.



# ಸಿಎಂಆರ್ ವಿಶ್ವವಿದ್ಯಾಲಯದಲ್ಲಿ ಕಾಸ್ - 2026 ಎರಡು ದಿನಗಳ ಯಶಸ್ವಿ ವಿನ್ಯಾಸ ಚಿಂತನಾ ದಿನ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ದಿ ಫ್ಯೂಚರ್ ಇಸ್ ಲೋಕಲ್ ಎಂಬ ವಿಷಯಾಧಾರಿತ ಎರಡು ದಿನಗಳ ಜಾಗತಿಕ ನಾವೀನ್ಯತೆ ಸವಾಲು ಚಿಂತನಾ ದಿನ ಕಾರ್ಯಕ್ರಮವನ್ನು ಸಿಎಂಆರ್ ವಿಶ್ವವಿದ್ಯಾಲಯ ಯಶಸ್ವಿಯಾಗಿ ಆಯೋಜಿಸಿತು. ನಗರದ ಬಾಗಲೂರಿನಲ್ಲಿರುವ ಲೇಕ್ ಸೈಡ್ ಕ್ಯಾಂಪಸ್ ನಲ್ಲಿ ದಿನಾಂಕ:-23.04.2026 ಮತ್ತು 24.04.2026 ರಂದು ಎರಡು ದಿನಗಳ ವರೆಗೆ ಆಯೋಜಿಸಿದ್ದ ವಿನ್ಯಾಸ ಚಿಂತನಾ ದಿನ ಕಾರ್ಯಕ್ರಮದಲ್ಲಿ ನಾವಿನ್ಯತೆ, ಸೃಜನಾತ್ಮಕ ಚಿಂತನೆಗಳೊಂದಿಗೆ ಯುವ ಸಮುದಾಯವನ್ನು ರೂಪಿಸುವ ನಿಟ್ಟಿನಲ್ಲಿ ವಿನ್ಯಾಸ ಚಿಂತನಾ ಕಾರ್ಯಕ್ರಮ ಯಶಸ್ವಿಯಾಯಿತು. ಸಿಎಂಆರ್ ಕಾಸ್-2026: ವಿನ್ಯಾಸ ಚಿಂತನಾ ದಿನ ( ಗ್ಲೋಬಲ್ ಓಪನ್ ಇನ್ನೋವೇಷನ್ ಚಾಲೆಂಜ್) ಕಾರ್ಯಕ್ರಮದಲ್ಲಿ 10 ದೇಶಗಳು ಮತ್ತು 127 ನಗರಗಳಾದ್ಯಂತ 120 ಸಂಸ್ಥೆಗಳಿಂದ 893ಕ್ಕೂ ಹೆಚ್ಚು ತಂಡಗಳಿಂದ 3500 ವಿದ್ಯಾರ್ಥಿಗಳು ಭಾಗವಹಿಸಿದ್ದರು.


ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ.ಕೆ.ಸಿ.ರಾಮಮೂರ್ತಿ, (ಐಪಿಎಸ್ ನಿವೃತ್ತ), ಮಾಜಿ ರಾಜ್ಯಸಭಾ ಸದಸ್ಯರು, ಅಧ್ಯಕ್ಷರು, ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು, ಸಿಎಂಆರ್ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಪ್ರಸ್ತುತಪಡಿಸುತ್ತಿರುವ ನವೀನ ವಿಚಾರಗಳು, ತಾಂತ್ರಿಕ ಆವಿಷ್ಕಾರಗಳು ಹೆಮ್ಮೆತರುವಂತಹವು. ಕೌಶಲ್ಯಗಳೇ ಯಶಸ್ಸಿನ ಗುಟ್ಟು ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಸಮಾಜದ ವಿವಿಧ ಸಮಸ್ಯೆಗಳಿಗೆ ಇಂದು ವಿಭಿನ್ನ ಪರಿಹಾರಗಳನ್ನು, ನವೀನ ಮಾದರಿಗಳನ್ನು ಕಂಡುಕೊಳ್ಳುತ್ತಿದ್ದಾರೆ.

ವಿದ್ಯಾರ್ಥಿಗಳಲ್ಲಿ ಬಲವಾದ ಸಾಮಾನ್ಯ ಜ್ಞಾನ ಮತ್ತು ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸುವ ಕೌಶಲ್ಯವಿದ್ದರೆ ಅಂತಹ ನವೀನ ವಿಚಾರಗಳಿಗೆ ಜೀವ ತುಂಬಲು ಸಾಧ್ಯ, ಎಂದು ಅಭಿಪ್ರಾಯಪಟ್ಟರು. ಈ ಕಾರ್ಯಕ್ರಮವು ಸಮುದಾಯದ ಅಗತ್ಯತೆಗಳನ್ನು ಅರ್ಥೈಸಿ, ದೈನಂದಿನ ಅನುಭವಗಳ ಆಧಾರದ ಮೇಲೆ ಸ್ಥಳೀಯ ಸಮಸ್ಯೆಗಳಿಗೆ ಹೊಸತನದ ಪರಿಹಾರಗಳನ್ನು ಕಂಡುಕೊಳ್ಳಲು ಯುವ ಮನಸ್ಸುಗಳನ್ನು ಪ್ರೇರೇಪಿಸಿತು. ಈ ಪ್ರದರ್ಶನದಲ್ಲಿ ಒಟ್ಟು 100ಕ್ಕೂ ಹೆಚ್ಚು ನವೀನ ಯೋಜನೆಗಳನ್ನು ಪ್ರದರ್ಶಿಸಲಾಯಿತು. ಇವುಗಳಲ್ಲಿ ಮುಖ್ಯವಾಗಿ ಅಂಗವಿಕಲರಿಗೆ ಪೂರಕವಾದ ಎಐ ವೇದಿಕೆ, ವಿಪತ್ತು ರಕ್ಷಣಾ ತಂತ್ರಜ್ಞಾನ ಮತ್ತು ಕಾನೂನು ಬಾಹಿರವಾಗಿ ಬೇಟೆಯಾಡುವುದನ್ನು ತಡೆಗಟ್ಟುವ ಎಐ ಮೇಲ್ವಿಚಾರಣಾ ವ್ಯವಸ್ಥೆಗಳು ಗಮನ ಸೆಳೆದವು.

ಜೀವ ತುಂಬಲು ಸಾಧ್ಯ

ಇವುಗಳ ಜೊತೆಗೆ ರಸ್ತೆ ಸುರಕ್ಷತೆಗಾಗಿ ಅಪಘಾತ ಎಚ್ಚರಿಕೆ ಸಾಧನಗಳು, ಮೀನುಗಾರರ ರಕ್ಷಣೆಗಾಗಿ ಸ್ಮಾರ್ಟ್ ಗಡಿ ಗುರುತಿಸುವಿಕೆ ಹಾಗೂ ನೀರು ಅಥವಾ ಅನಿಲ ಸೋರಿಕೆ ತಡೆಗಟ್ಟುವ ಸ್ಮಾರ್ಟ್ ಪೈಪ್‌ಲೈನ್ ಮತ್ತು ಜಿಐಎಸ್ ತಂತ್ರಜ್ಞಾನ ಆಧಾರಿತ ವಿತರಣಾ ಮಾದರಿಗಳು ಪ್ರದರ್ಶನಗೊಂಡವು. ವಿಜೇತ ತಂಡಗಳಿಗೆ ಟ್ರೋಫಿ, ನಗದು ಬಹುಮಾನದೊಂದಿಗೆ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕ್ಯಾಪ್ಜೆಮಿನಿಯ ಹಿರಿಯ ನಿರ್ದೇಶಕ ಮತ್ತು ಮುಖ್ಯ ವಾಸ್ತುಶಿಲ್ಪಿ ಶ್ರೀ ಅನ್ವರ್ ಖಾನ್, ಶ್ರೀ ಜಯ ಚಂದ್ರನ್, ಪ್ರಾದೇಶಿಕ ಮುಖ್ಯಸ್ಥರು - ದಕ್ಷಿಣ ಭಾರತ, ಯುಎನ್‌ಡಿಪಿ, ಸಿಎಂಆರ್ ವಿಶ್ವವಿದ್ಯಾಲಯದ ಕುಲಪತಿ ಡಾ. ಎಚ್. ಬಿ. ರಾಘವೇಂದ್ರ, ಸಹ-ಕುಲಪತಿ ಹಾಗೂ ಕುಲಸಚಿವ ಡಾ. ಪ್ರವೀಣ್ ಆರ್. ವಿಶ್ವವಿದ್ಯಾಲಯದ ಡೀನ್‌ಗಳು ಮತ್ತು ನಿರ್ದೇಶಕರು ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.



ರಾಜ್ಯದಲ್ಲಿ ಕಳೆದ ಬಾರಿ ಪ್ರಥಮ ಸ್ಥಾನ ಪಡೆದ ದಕ್ಷಿಣ ಕನ್ನಡ ಜಿಲ್ಲೆ ಈ ಬಾರಿಯೂ ಅಗ್ರ ಸ್ಥಾನ ಉಳಿಸಿಕೊಳ್ಳುವಲ್ಲಿ ಸಫಲ

# ಎಸ್‌ಎಸ್‌ಎಲ್‌ಸಿ ಫಲಿತಾಂಶ: ದ.ಕನ್ನಡದ ಸಾಧನೆಗೆ ಗೆಲುವಿನ ಹೆಜ್ಜೆ

• ಉದಯವಾಹಿನಿ, ಮಂಗಳೂರು

ರಾಜ್ಯದಲ್ಲಿ ಕಳೆದ ಬಾರಿ ಪ್ರಥಮ ಸ್ಥಾನ ಪಡೆದ ದಕ್ಷಿಣ ಕನ್ನಡ ಜಿಲ್ಲೆ ಈ ಬಾರಿಯೂ ಅಗ್ರ ಸ್ಥಾನ ಉಳಿಸಿಕೊಳ್ಳುವಲ್ಲಿ ಸಫಲವಾಗಿದೆ. ಶೇಕಡವಾರಿನಲ್ಲೂ ದೊಡ್ಡದಾದ ಬದಲಾವಣೆ ದಾಖಲಾಗಿದ್ದು, ಇದರ ಹಿಂದೆ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಸಿಇಒ ಮಾರ್ಗದರ್ಶನ ಜತೆಗೆ ಗೆಲುವಿನ ಹೆಜ್ಜೆ ಪಾಸಿಂಗ್ ಪ್ಯಾಕೇಜ್ ನಿಜಕ್ಕೂ ಫಲಿತಾಂಶದಲ್ಲಿ ವರ್ಕ್ ಔಟ್ ಆಗಿದೆ.

ಕಳೆದ ಬಾರಿಯ ಸ್ಥಾನವನ್ನು ಉಳಿಸುವುದು ಸಾಮಾನ್ಯವಾದ ಮಾತಲ್ಲ. ಆದರೆ ಈ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಮಾಡಿದ ಐದು ಮ್ಯಾಜಿಕ್‌ಗಳು ಫಲಿತಾಂಶದಲ್ಲಿ ದಾಖಲಾಗಿದೆ.

**1) ಪಾಸಿಂಗ್ ಪ್ಯಾಕೇಜ್ ವರ್ಕ್‌ಔಟ್:** ಬಹುಮುಖ್ಯವಾಗಿ 20 ರಿಂದ 30 ಅಂಕಗಳನ್ನು ತರಿಸುವ ಗೆಲುವಿನ ಹೆಜ್ಜೆ ವಿದ್ಯಾರ್ಥಿಗಳ ಕೈ ಹಿಡಿಯುವಲ್ಲಿ ಸಫಲವಾಗಿದೆ. ಮೂರು ಪೂರ್ವ ಸಿದ್ಧತಾ ಪರೀಕ್ಷೆ, ನಾಲ್ಕು ಮಾದರಿ ಪ್ರಶ್ನೆ ಪತ್ರಿಕೆಗಳು ಇವುಗಳ ಮಿಶ್ರಣದಲ್ಲಿ ಸಿದ್ಧವಾದ ಪಾಸಿಂಗ್ ಪ್ಯಾಕೇಜ್ ಗೆಲುವಿನ ಹೆಜ್ಜೆಯಲ್ಲಿ ಪ್ರತಿಯೊಂದು ವಿಚಾರದಲ್ಲೂ ಪ್ರಶ್ನೆಗಳ ಜತೆಗೆ ಉತ್ತರವನ್ನು ನೀಡುವ ಮಾದರಿ ಪುಸ್ತಕವನ್ನು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಕೈಗೆ ನೀಡುವ ಕೆಲಸದ ಜತೆಗೆ ಅದರ ಮೇಲೆ ತಯಾರಿ ಕೂಡ ಮಾಡಿದ್ದು, ಫಲಿತಾಂಶದಲ್ಲಿ ಬಹಳಷ್ಟು ದೊಡ್ಡ ಬದಲಾವಣೆಗೆ ಕಾರಣವಾಯಿತು.

**2)ಗೆಲ್ಲಿಸಿದ 20 ಅಂಶಗಳ ಕಾರ್ಯಕ್ರಮಗಳು:** ಬಹುಮುಖ್ಯವಾಗಿ 20 ವಿಶೇಷ ಕಾರ್ಯಕ್ರಮಗಳು ಗೆಲುವಿನ ಹಾದಿಗೆ ಪೂರಕವಾದ ಸ್ಥಿತಿಯನ್ನು ನಿರ್ಮಾಣ ಮಾಡಿತ್ತು. ಡಿಸೆಂಬರ್‌ರೊಳಗೆ ಪಠ್ಯಕ್ರಮ ಮುಗಿಸುವುದು, ಸ್ಲೋಲರ್ನ್ಸ್‌ಗೆ ವಿಶೇಷ ತರಗತಿಗಳು, ಘಟಕ ಪರೀಕ್ಷೆಯಲ್ಲಿ ಫಲಿತಾಂಶದ ವಿಶ್ಲೇಷಣೆ, ಪ್ರಶ್ನೋತ್ತರ ಕೋಠಿಯ ಅಭಿವೃದ್ಧಿ, ಬರವಣಿಗೆ ಕೌಶಲ್ಯ ವೃದ್ಧಿಯ ಯೋಜನೆಗಳು ಇತರ ವಿಚಾರಗಳು ಕೆಲಸ ಮಾಡಿದೆ.

**3)ರಜೆಯಲ್ಲೂ ತರಗತಿ:** ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ತರಗತಿಯ ಮೊದಲು ಒಂದು ಗಂಟೆಯ ವಿಶೇಷ ತರಗತಿ ಈ ಬಳಿಕ ಸಂಜೆ ಶಾಲೆ ಬಿಟ್ಟ ನಂತರ ಒಂದು ಗಂಟೆಯ ವಿಶೇಷ ತರಗತಿ ಕೆಲಸ ಮಾಡಿದೆ. ರಜಾದಿನಗಳಲ್ಲಿಯೂ ಕೂಡ ವಿಶೇಷ ತರಗತಿ, ಪರೀಕ್ಷಾ ಅವಧಿಯಲ್ಲಿ ಸಿಕ್ಕಿದ ರಜಾ ದಿನಗಳಲ್ಲಿಯೂ ಕೂಡ ವಿಶೇಷ ತರಗತಿಗಳು ಬಹಳಷ್ಟು ಕೆಲಸ ಮಾಡಿದೆ. ಇದೇ ಕಾರಣದಿಂದ ದಕದಲ್ಲಿ 27,207 ವಿದ್ಯಾರ್ಥಿಗಳಲ್ಲಿ 26,771 ಉತ್ತೀರ್ಣರಾಗಿ ಬರೀ 436 ಮಂದಿ ಮಾತ್ರ ಅನುತ್ತೀರ್ಣರಾಗಿದ್ದಾರೆ. ಕಳೆದ ಬಾರಿ 2,341 ಮಂದಿ ಅನುತ್ತೀರ್ಣರಾಗಿದ್ದರು.

**ಶೇಕಡವಾರು ಸಾಧನೆಯಲ್ಲಿ ಏರಿಕೆ :** 349 ಪ್ರೌಢಶಾಲೆ ಶೇ.100 ದಕ್ಷಿಣ ಕನ್ನಡ ಜಿಲ್ಲೆ ರಾಜ್ಯದ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಅಗ್ರಸ್ಥಾನವನ್ನು ಮುಂದುವರಿಸುವಲ್ಲಿ ಸಫಲವಾಗಿದೆ. ಶೇಕಡವಾರಿನಲ್ಲೂ ಮಹತ್ತರ ಏರಿಕೆ ಕಂಡಿದ್ದು 349 ಪ್ರೌಢಶಾಲೆ ನೂರಕ್ಕೆ ನೂರು ಫಲಿತಾಂಶ ಗಿಟ್ಟಿಸಿಕೊಂಡಿದೆ. ಉಳಿದಂತೆ ಉಡುಪಿ ಜಿಲ್ಲೆ ದ್ವಿತೀಯ ಸ್ಥಾನ ಪಡೆದಿದೆ. 620 ಕ್ಕಿಂತ ಹೆಚ್ಚಿನ ಅಂಕ ಪಡೆದವರು 21 ಮಂದಿ ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಈ ಬಾರಿ 27,207 ಮಂದಿಯಲ್ಲಿ 26,771 ಮಂದಿ ಉತ್ತೀರ್ಣರಾಗಿದ್ದಾರೆ. 436 ಮಂದಿ ಅನುತ್ತೀರ್ಣರಾಗಿದ್ದಾರೆ. ಕಳೆದ ಬಾರಿ ಅನುತ್ತೀರ್ಣರಾದವರು 2341 ಮಂದಿ. ಒಟ್ಟಾರೆಯಾಗಿ ಶೇ.98.40 ಫಲಿತಾಂಶದ ಮೂಲಕ ದಕ ಮಹತ್ತರ ಸಾಧನೆ ಮಾಡಿದೆ. ಉಡುಪಿಯಲ್ಲಿ 13,373 ಮಂದಿ ಪರೀಕ್ಷೆ ಬರೆದಿದ್ದು, 13,129 ಮಂದಿ ಉತ್ತೀರ್ಣರಾಗಿದ್ದಾರೆ. ಶೇ.98.18 ಫಲಿತಾಂಶ ಪಡೆದುಕೊಂಡಿದೆ. ಈ ಮೂಲಕ ಅವಿಭಜಿತ ಕರಾವಳಿ ಜಿಲ್ಲೆಯ ಎರಡು ಜಿಲ್ಲೆಗಳು ಕೂಡ ಪ್ರಥಮ ಹಾಗೂ ದ್ವಿತೀಯ ಸ್ಥಾನ ದಕ್ಕಿರೋದು ಕರಾವಳಿಯ ಶಿಕ್ಷಣ ಕ್ಷೇತ್ರಕ್ಕೆ ಮತ್ತೊಂದು ಖ್ಯಾತಿ ತಂದುಕೊಟ್ಟಿದೆ.

ದ.ಕನ್ನಡ ಜಿಲ್ಲೆಗೆ ಅತ್ಯುತ್ತಮವಾದ ಫಲಿತಾಂಶ ದೊರೆತಿದೆ. ಶಾಲಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸಾಕಷ್ಟು ಶ್ರಮವಹಿಸಿ ಇದನ್ನು ಸಂಪಾದಿಸಿದ್ದಾರೆ. ಶಾಲೆಗಳ ಆಡಳಿತ ಮಂಡಳಿಗಳು, ಪೋಷಕರು ಮತ್ತು ಸರಕಾರೇತರ ಸಂಘ ಸಂಸ್ಥೆಗಳು ನಮ್ಮ ಈ ಸಾಧನೆಗೆ ಬೆಂಬಲಿಸಿದ್ದಾರೆ. ಜಿಲ್ಲಾಧಿಕಾರಿಗಳು, ಜಿ.ಪಂ.ಸಿಇಒ,.

- ಈ 3 ಕ್ರಮಗಳಿಂದ ಸತತ 2ನೇ ಬಾರಿಗೆ ರಾಜ್ಯದಲ್ಲೇ ಪ್ರಥಮ ಸ್ಥಾನ
- ದಕದಲ್ಲಿ 27,207 ವಿದ್ಯಾರ್ಥಿಗಳಲ್ಲಿ 26,771 ಉತ್ತೀರ್ಣರಾಗಿ ಬರೀ 436 ಮಂದಿ ಮಾತ್ರ ಅನುತ್ತೀರ್ಣರಾಗಿದ್ದಾರೆ. ಕಳೆದ ಬಾರಿ 2,341 ಮಂದಿ ಅನುತ್ತೀರ್ಣರಾಗಿದ್ದರು.
- ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಸಿಇಒ ಮಾರ್ಗದರ್ಶನ ಜತೆಗೆ ಗೆಲುವಿನ ಹೆಜ್ಜೆ ಪಾಸಿಂಗ್ ಪ್ಯಾಕೇಜ್ ನಿಜಕ್ಕೂ ಫಲಿತಾಂಶದಲ್ಲಿ ವರ್ಕ್ ಔಟ್ ಆಗಿದೆ.
- ರಜಾದಿನಗಳಲ್ಲಿಯೂ ಕೂಡ ವಿಶೇಷ ತರಗತಿ, ಪರೀಕ್ಷಾ ಅವಧಿಯಲ್ಲಿ ಸಿಕ್ಕಿದ ರಜಾ ದಿನಗಳಲ್ಲಿಯೂ ಕೂಡ ವಿಶೇಷ ತರಗತಿಗಳು ಬಹಳಷ್ಟು ಕೆಲಸ ಮಾಡಿದೆ.


ಉದಯವಾಹಿನಿ ಚಿತ್ರ

### ಶೇ.100 ಫಲಿತಾಂಶದ ಖ್ಯಾತಿ

ದಕ್ಷಿಣ ಕನ್ನಡ ಜಿಲ್ಲೆಯನ್ನು 7 ವಲಯಗಳಾಗಿ ಪರಿಗಣಿಸಿದರೆ ಒಟ್ಟು 349 ಪ್ರೌಢ ಶಾಲೆ ಶೇ.100 ಫಲಿತಾಂಶ ದಾಖಲಿಸಿದೆ. ಇದರಲ್ಲಿ 110 ಸರಕಾರಿ, 50 ಅನುದಾನಿತ ಹಾಗೂ 189 ಅನುದಾನರಹಿತ ಶಾಲೆಗಳು ಸೇರಿವೆ. ಬಂಟ್ವಾಳದಲ್ಲಿ 55 ಶಾಲೆಗಳು, ಬೆಳ್ತಂಗಡಿಯಲ್ಲಿ 53 ಶಾಲೆಗಳು, ಮಂಗಳೂರು ಉತ್ತರದಲ್ಲಿ 65, ಮಂಗಳೂರು ದಕ್ಷಿಣದಲ್ಲಿ 67, ಮೂಡುಬಿದಿರೆ 25, ಪುತ್ತೂರು 54 ಹಾಗೂ ಸುಳ್ಯದಲ್ಲಿ 30 ಶಾಲೆಗಳು ನೂರಕ್ಕೆ ನೂರು ಫಲಿತಾಂಶ ಪಡೆದುಕೊಂಡಿದೆ.

### ಮೂಡುಬಿದಿರೆಯೇ ಟಾಪರ್

ದಕ್ಷಿಣ ಕನ್ನಡ ಜಿಲ್ಲೆಯನ್ನು 7 ವಲಯವನ್ನಾಗಿ ಪರಿಗಣಿಸಿದಾಗ ಪುತ್ತೂರು ಬ್ಲಾಕ್‌ನಲ್ಲಿ ಶೇ.98.05 ಫಲಿತಾಂಶ ಬಂದರೆ ಮೂಡುಬಿದಿರೆ ಶೇ. 99.53 ಫಲಿತಾಂಶ, ಬೆಳ್ತಂಗಡಿ ಶೇ.99.05, ಸುಳ್ಯ ಶೇ.99.10, ಮಂಗಳೂರು ಉತ್ತರಕ್ಕೆ ಶೇ.98.20, ಬಂಟ್ವಾಳ ಶೇ.97.87, ಮಂಗಳೂರು ದಕ್ಷಿಣ ಶೇ.98.32 ಫಲಿತಾಂಶ ಬಂದಿದೆ. ಇದೇ ರೀತಿಯಲ್ಲಿ ಸರಕಾರಿ ಪ್ರೌಢ ಶಾಲೆ ಶೇ.97.25 ಫಲಿತಾಂಶ ಬಂದರೆ ಅನುದಾನಿತ ಪ್ರೌಢ ಶಾಲೆಗಳಿಗೆ ಶೇ.98.08 ಫಲಿತಾಂಶ ಬಂದಿದೆ. ಅನುದಾನರಹಿತ ಪ್ರೌಢ ಶಾಲೆಗಳಿಗೆ ಶೇ. 99.39 ಫಲಿತಾಂಶ ಬಂದಿದೆ. ಇದರ ಜತೆಗೆ ನಗರ ಭಾಗದ ಶಾಲೆಗಳ ಫಲಿತಾಂಶ ಶೇ. 98.43 ಇದ್ದರೆ ಇತ್ತ ಕಡೆಯಲ್ಲಿ ಗ್ರಾಮಾಂತರ ಭಾಗದಲ್ಲಿ ಶೇ.98.43ರಷ್ಟು ಇದೆ. ಈ ಮೂಲಕ ಗ್ರಾಮಾಂತರ ಭಾಗಕ್ಕಿಂತ ನಗರ ಭಾಗದ ವಿದ್ಯಾರ್ಥಿಗಳೇ ಸ್ಟ್ರಾಂಗು ಎನ್ನುವ ಮಾತು ಫಲಿತಾಂಶದಲ್ಲಿ ದಾಖಲಾಗಿದೆ.

ನಗರ ಭಾಗದ ವಿದ್ಯಾರ್ಥಿಗಳೇ ಸ್ಟ್ರಾಂಗು

## ಮಿನಿ ನ್ಯೂಸ್

### ತಾ.ಪಂ.ಕಛೇರಿಯಲ್ಲಿ; ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂಚೋಳಿ

ಪಟ್ಟಣದ ತಾಲ್ಲೂಕಾ ಪಂಚಾಯತ ಕಾರ್ಯಾಲಯದಲ್ಲಿ ರಾಷ್ಟ್ರೀಯ ಪಂಚಾಯತ್ ರಾಜ್ ದಿನಾಚರಣೆಯನ್ನು ತಾಪಂ.ಕಾರ್ಯನಿರ್ವಾಹಕ ಅಧಿಕಾರಿ ಸಂತೋಷಕುಮಾರ ಚವ್ಹಾಣ ನೇತೃತ್ವದಲ್ಲಿ ಕೇಕ್ ಕತ್ತರಿಸುವ ಮೂಲಕ ಆಚರಣೆ ಮಾಡಲಾಯಿತು. ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ ಸಹಾಯಕ ನಿರ್ದೇಶಕ ನಾಗೇಂದ್ರಪ್ಪಾ, ತಾಪಂ.ವ್ಯವಸ್ಥಾಪಕ ಮಲ್ಲಿಕಾರ್ಜುನ ತಳವಾರ,ಪಿಡಿಒ ಸಂಘದ ಅಧ್ಯಕ್ಷ ಪವನಕುಮಾರ,ಪಿಡಿಒಗಳಾದ ರಾಮಕೃಷ್ಣ,ಗೋವಿಂದರೆಡ್ಡಿ,ಸುನೀಲಕುಮಾರ,ಸಂಗಮೇಶ, ಗುರುನಾಥ ರಾಠೋಡ,ವಿನೋಧ ಚವ್ಹಾಣ,ಬಸವರಾಜ,ಜ್ಯೋತಿ,ಐಇಸಿ ಭೀಮಶಂಕರ,ಗಣಕಯಂತ್ರ ಅಪರೇಟರ್ ರಾಜು ಹಿತ್ತಲ್,ಫಯಾಜ್, ಶ್ರೀನಿವಾಸ,ರೇವಣಸಿದ್ದಯ್ಯ,ಅನ್ವರ್,ವಿಶ್ವವಿರೇಶ,ಫರೀಫ್,ಹಾಗೂ ಜೈಭೀಮ್,ನಿವರ್ತಿ,ಮಧುರವಾಣಿ.ದೇವಪ್ಪ,ಅನೇಕರಿದ್ದರು.

### ಬೆಲ್ಲದ ಕಂಪನಿಗೆ ರೂ.50 ಲಕ್ಷ ವಂಚನೆ

• ಉದಯವಾಹಿನಿ, ಹುಬ್ಬಳ್ಳಿ

ದೆಹಲಿಯಲ್ಲಿ ವ್ಯವಹಾರ ನಡೆಸಲು ಸಹಕರಿಸುವಂತೆ ನಗರದ ಗೋಕುಲ ರಸ್ತೆಯ ಬೆಲ್ಲದ ಕಂಪನಿಯವರನ್ನು ನಂಬಿಸಿ ರೂ.50 ಲಕ್ಷ ಪಡೆದು ವಂಚಿಸಿದ ಉದ್ಯಮಿ ವಿರುದ್ಧ ಗೋಕುಲ ರಸ್ತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೆಹಲಿಯ ಡಿಫೆನ್ಸ್ ಕಾಲೋನಿಯ ಉದ್ಯಮಿ ಮಹೇಂದ್ರಪಾಲ್ ಆರೋರ ವಿರುದ್ಧ, ಕಂಪನಿ ಉದ್ಯೋಗಿ ರಾಮಚಂದ್ರ ರಾವ್ ದೂರು ನೀಡಿದ್ದಾರೆ. ಮಹೇಂದ್ರಪಾಲ್ ಅವರು ಎರಡು ಬಾರಿ ಕಂಪನಿಗೆ ಭೇಟಿ ನೀಡಿ, ದೆಹಲಿಯಲ್ಲಿ ಉದ್ಯೋಗ ನಡೆಸಲು ತಮ್ಮ ಮಾರ್ಗದರ್ಶನ ಹಾಗೂ ಸಹಕಾರ ಬೇಕು ಎಂದು ನಂಬಿಸಿ ಹಣ ವರ್ಗಾಯಿಸಿಕೊಂಡಿದ್ದರು. ನಂತರ ಹಣ ನೀಡದೆ ವಂಚಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

**ಗಾಂಜಾ ವಶ:** ಗದಗ ರಸ್ತೆಯ ಚಾಲುಕ್ಯ ಹಾಲ್ ಬಳಿ ಗಾಂಜಾ ಸಾಗಾಟ ಮಾಡುತ್ತಿದ್ದ ಆರೋಪದ ಮೇಲೆ ಸಿಸಿಬಿ ಪೊಲೀಸರು ಇಬ್ಬರನ್ನು ಬಂಧಿಸಿ, ರೂ.1.21 ಲಕ್ಷ ಮೌಲ್ಯದ 1 ಕೆಜಿ 210 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ. ವಿನೋಭಾ ನಗರದ ನಿವಾಸಿ ರೋಹನ್ ಬಂಡಿ ಮತ್ತು ಗಾಂಧಿವಾಡ ನಿವಾಸಿ ಅಮಿತ್ ಕಾಂಬಳೆ ಬಂಧಿತರು. ಕೇಶ್ವಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ರೂ.4.35 ಲಕ್ಷ ಮೌಲ್ಯದ ಚಿನ್ನಾಭರಣ ಕಳ್ಳತನ

• ಉದಯವಾಹಿನಿ, ಹಾಸನ

ಇಲ್ಲಿನ ಬಿ.ಕಾಟೀಹಳ್ಳಿ ಕೊಪ್ಪಲಿನ ಮನೆಯ ಬೀಗ ಮುರಿದು ರೂ.4.35 ಲಕ್ಷ ಮೌಲ್ಯದ ಚಿನ್ನಾಭರಣ ಕಳವು ಮಾಡಲಾಗಿದೆ. ರುದ್ರಮೂರ್ತಿ ಅವರ ಪತ್ನಿ ಬೇಲೂರಿಗೆ ತೆರಳಿದ್ದು, ಅವರ ಪುತ್ರಿ ಕಾಲೇಜಿಗೆ ಹೋಗಿದ್ದರು. ಸಂಜೆ ಮನೆಗೆ ಬಂದು ನೋಡಿದಾಗ, ಕಬೋರ್ಡ್ ಒಳಗೆ ಹ್ಯಾಂಡ್ ಬ್ಯಾಗ್‌ನಲ್ಲಿದ್ದ 18 ಗ್ರಾಂನ 3 ಜೊತೆ ಚಿನ್ನದ ಓಲೆ, 15 ಗ್ರಾಂನ ಚಿನ್ನದ ಸರ, 10 ಗ್ರಾಂನ 2 ಚಿನ್ನದ ಉಂಗುರ, ಆ ಬ್ಯಾಗ್‌ನ ಪಕ್ಕದಲ್ಲಿದ್ದ 8 ಗ್ರಾಂನ ಚಿನ್ನದ ಓಲೆ ಕಳುವಾಗಿದ್ದವು. ಬೀಗದ ಕೀ ಅನ್ನು ಮನೆಯ ಹೊರಗಿನ ಡಸ್ಟ್ ಪಿನ್ ಪಕ್ಕದ ಮ್ಯಾಟ್ ಕೆಳಗೆ ಇಟ್ಟು ಹೋಗಿದ್ದು, ವೇಳೆ ಕಳ್ಳರು ಬೀಗ ತೆಗೆದು ಕಳ್ಳತನ ಮಾಡಿದ್ದಾರೆ. ಒಟ್ಟು ರೂ.4.35 ಲಕ್ಷ ಮೌಲ್ಯದ 51 ಗ್ರಾಂ ಚಿನ್ನದ ಒಡವೆಗಳು ಕಳವಾಗಿವೆ. ಹಾಸನದ ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಐದಂತಸ್ತಿನ ಅಕ್ರಮ ಕಟ್ಟಡ ತೆರವು

• ಉದಯವಾಹಿನಿ, ಬೆಳಗಾವಿ

ನಗರದ ಮಾರುತಿ ಗಲ್ಲಿಯಲ್ಲಿ ನಿಯಮ ಬಾಹಿರವಾಗಿ ಕಟ್ಟಿದ್ದ ವಾಣಿಜ್ಯ ಕಟ್ಟಡವನ್ನು ಮಹಾನಗರ ಪಾಲಿಕೆ ಅಧಿಕಾರಿಗಳು ತೆರವುಗೊಳಿಸಲು ಆರಂಭಿಸಿದರು. ಶಿವಾಜಿರಾವ್ ಹೈಬತ್ತಿ ಎಂಬುವವರಿಗೆ ಸೇರಿದ ವಾಣಿಜ್ಯ ಕಟ್ಟಡ ನಿರ್ಮಾಣದಲ್ಲಿ ನಿಯಮ ಪಾಲನೆ ಮಾಡಿಲ್ಲ ಎಂದು ಶರೀಫ್ ಮುಲ್ಲಾ ಅವರು ಪಾಲಿಕೆ ಆಯುಕ್ತರಿಗೆ ಹಾಗೂ ಲೋಕಾಯುಕ್ತರಿಗೆ ದೂರು ನೀಡಿದ್ದರು. ಈ ಬಗ್ಗೆ ವಿಚಾರಣೆ ಮಾಡಿದ್ದ ಲೋಕಾಯುಕ್ತ ಅಧಿಕಾರಿಗಳು, ಒಂದು ವಾರದಲ್ಲಿ ಅನಧಿಕೃತ ಕಟ್ಟಡದ ತೆರವುಗೊಳಿಸುವ ಕ್ರಮದ ಬಗ್ಗೆ ಮಾಹಿತಿ ನೀಡಲು ಆಯುಕ್ತರಿಗೆ ಇತ್ತೀಚೆಗೆ ಸೂಚನೆ ನೀಡಿದ್ದರು. ಹೀಗಾಗಿ ಪಾಲಿಕೆ ಅಕಾರಿಗಳು, ಮೂರು ಜೆಸಿಬಿ ಯಂತ್ರಗಳಿಂದ ಮಾರುತಿ ಗಲ್ಲಿಯಲ್ಲಿನ 5 ಮಹಡಿಯ ವಾಣಿಜ್ಯ ಕಟ್ಟಡದ ತೆರವು ಕಾರ್ಯಾಚರಣೆಗೆ ಮುಂದಾದರು. ಈ ವೇಳೆ ಕೆಲ ವ್ಯಾಪಾರಸ್ಥರು, ಕಟ್ಟಡದ ಮಾಲೀಕರು ಸೇರಿಕೊಂಡು ಕಟ್ಟಡ ತೆರವುಗೊಳಿಸದಂತೆ ಪಾಲಿಕೆ ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರು. ಲೋಕಾಯುಕ್ತ ಅಧಿಕಾರಿಗಳ ಹಾಗೂ ಪಾಲಿಕೆ ಆಯುಕ್ತರ ಆದೇಶದಂತೆ ತೆರವುಗೊಳಿಸಲಾಗುವುದು ಎಂದು ಪಾಲಿಕೆ ಅಧಿಕಾರಿಗಳು ಕಾರ್ಯಾಚರಣೆ ಮುಂದುವರಿದರು. ವಾಣಿಜ್ಯ ಕಟ್ಟಡದ ಸುತ್ತಲಿನ ಅತಿಕ್ರಮದ ಭಾಗವನ್ನು ಮಾತ್ರ ತೆರವುಗೊಳಿಸಲಾಗಿದೆ. ಶೀಘ್ರವಾಗಿ ಆಯುಕ್ತರ ಸೂಚನೆಯಂತೆ ಇಡೀ ಕಟ್ಟಡವನ್ನು ತೆರವುಗೊಳಿಸಲು ಕ್ರಮ ವಹಿಸಲಾಗುವುದು ಎಂದು ಪಾಲಿಕೆಯ ಇಂಜಿನಿಯರ್ ತಿಳಿಸಿದರು.

## ಪುಸ್ತಕಗಳು ಆತ್ಮದ ದನಿಗಳು: ಗೊರೂರು ಶಿವೇಶ್

• ಉದಯವಾಹಿನಿ, ಹಾಸನ

ಪುಸ್ತಕಗಳು ಆತ್ಮದ ದನಿಗಳಾಗಿದ್ದು, ಸಹೃದಯ ಓದುಗನಲ್ಲಿ ಆನಂದದ ಅನುಭೂತಿಯನ್ನು ಉಂಟುಮಾಡುವ ಶಕ್ತಿಯನ್ನು ಹೊಂದಿವೆ ಎಂದು ಲೇಖಕ ಹಾಗೂ ನಿವೃತ್ತ ಆಂಗ್ಲ ಭಾಷಾ ಉಪನ್ಯಾಸಕ ಗೊರೂರು ಶಿವೇಶ್ ಹೇಳಿದರು.

ಅವರು ವಿಶ್ವ ಪುಸ್ತಕ ದಿನದ ಅಂಗವಾಗಿ ಏಪ್ರಿಲ್ 23ರಂದು ಹಾಸನದ ಹೇಮಾವತಿ ಆಸ್ಪತ್ರೆ ಎದುರು ಇರುವ ಅದಮ್ಯ ಪುಸ್ತಕ ಭಂಡಾರದಲ್ಲಿ ಅದಮ್ಯ ಬುಕ್ಸ್, ಕದಂಬ ಸೈನ್ಯ ಕನ್ನಡ ಸಂಘಟನೆ ಹಾಗೂ ಸಾಹಿತ್ಯಾಭಿಮಾನಿಗಳ ಬಳಗದ ವತಿಯಿಂದ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಶ್ವ ಪುಸ್ತಕ ದಿನವು ಭಾಷೆಯ ಹಬ್ಬವಾಗಿದ್ದು, ವಿಶ್ವಪ್ರಸಿದ್ಧ ನಾಟಕಕಾರ ವಿಲಿಯಂ ಶೇಕ್ಸ್‌ಪಿಯರ್ ಅವರ ಹುಟ್ಟು ಹಾಗೂ ಮರಣದ ದಿನವಾಗಿರುವುದು ವಿಶೇಷ ಎಂದು ಅವರು ತಿಳಿಸಿದರು. ಶೇಕ್ಸ್‌ಪಿಯರ್ ಅವರ ಕೃತಿಗಳು ಮಾನವ ಬದುಕಿನ ಭಾವನೆಗಳನ್ನು ಆಳವಾಗಿ ಚಿತ್ರಿಸುತ್ತವೆ. ಅದೇ ರೀತಿಯಲ್ಲಿ ಪ್ರತಿಯೊಂದು ಪುಸ್ತಕವೂ ಮಾನವ ಜೀವನದ ವಿಭಿನ್ನ ಮುಖಗಳನ್ನು ನಮಗೆ ಪರಿಚಯಿಸುತ್ತದೆ ಎಂದು ಹೇಳಿದರು.

**ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು:** ಡಾ. ಬರಾಳು ಶಿವರಾಮ ಮಾತನಾಡಿ, ಪುಸ್ತಕ ಓದುವ ಅಭ್ಯಾಸವು ವ್ಯಕ್ತಿಯ ಚಿಂತನೆಗೆ ಆಳವನ್ನು ನೀಡುತ್ತದೆ. ಓದು ಜೀವನದ ದಿಕ್ಕನ್ನು ತಿದ್ದುವ ಶಕ್ತಿಯಾಗಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಆನಂದ್ ನೆಲ್ಲಿಗೆರೆ ಹೇಳಿದರು, ಜ್ಞಾನವೇ ಮಾನವನ ನಿಜವಾದ ಸಂಪತ್ತು. ಅದನ್ನು ಹೆಚ್ಚಿಸುವ ಸರಳ ಮಾರ್ಗ ಪುಸ್ತಕ ಓದುವುದೇ ಎಂದು ಅಭಿಪ್ರಾಯಪಟ್ಟರು.

ಕೊಟ್ರೇಶ್ ಎಸ್. ಉಪ್ಪಾರ್ ತಿಳಿಸಿ, ಪುಸ್ತಕಗಳು ಶಿಕ್ಷಕರಿಗಿಂತ ಹೆಚ್ಚಾಗಿ ಜೀವನ ಪಾಠಗಳನ್ನು ಕಲಿಸುತ್ತವೆ. ಅವು ನಮ್ಮೊಳಗಿನ ಮಾನವೀಯತೆಯನ್ನು ಬೆಳೆಸುತ್ತವೆ'' ಎಂದರು.

ರವಿ ನಾಕಲಗೂಡು ಮಾತನಾಡಿ, ವಿದ್ಯಾರ್ಥಿಗಳಲ್ಲಿ ಓದು ಹವ್ಯಾಸ ಬೆಳೆಸಲು ಇಂತಹ ಸಾಹಿತ್ಯ ಕಾರ್ಯಕ್ರಮಗಳು ಇಂದಿನ ಕಾಲದಲ್ಲಿ ಅತ್ಯಂತ ಅಗತ್ಯ. ಪುಸ್ತಕಗಳು ಜ್ಞಾನಕ್ಕೆ ಬಾಗಿಲು ತೆರೆಯುತ್ತವೆ ಎಂದು ಹೇಳಿದರು.

ಗೊರೂರು ಅನಂತರಾಜು ಹೇಳಿದರು, ಸಾಹಿತ್ಯವೆಂದರೆ ಸಮಾಜದ ಪ್ರತಿಬಿಂಬ. ಪುಸ್ತಕಗಳ ಮೂಲಕ ನಮ್ಮ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಉಳಿಸಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಎ.ಎಚ್. ಗಣೇಶ್ ಅಧ್ಯಕ್ಷೀಯ ಭಾಷಣದಲ್ಲಿ, ಒಳ್ಳೆಯ ಓದು ಒಳ್ಳೆಯ ಬದುಕಿಗೆ ದಾರಿ ಮಾಡಿಕೊಡುತ್ತದೆ. ವಿದ್ಯಾರ್ಥಿಗಳು ಪುಸ್ತಕಗಳನ್ನು ತಮ್ಮ ಸ್ನೇಹಿತರನ್ನಾಗಿ ಮಾಡಿಕೊಂಡರೆ ಯಶಸ್ಸು ಖಚಿತ ಎಂದು ಹೇಳಿದರು. ಈ ಸಂದರ್ಭದಲ್ಲಿ ಲೇಖಕ ವಿಶ್ವಾಸ್ ಡಿ. ಗೌಡ ಮಾತನಾಡಿ, ಪುಸ್ತಕಗಳು ಕೇವಲ ಜ್ಞಾನವಲ್ಲ, ಅವು ಮನಸ್ಸುಗಳನ್ನು ಸಂಪರ್ಕಿಸುವ ಸೇತುವೆಗಳಾಗಿವೆ. ಓದುವ ಸಂಸ್ಕೃತಿ ಬೆಳೆದರೆ ಸಮಾಜವೂ ಸೃಜನಾತ್ಮಕವಾಗಿ ಬೆಳೆಯುತ್ತದೆ ಎಂದು ಹೇಳಿದರು.

ಗೊರೂರು ಅನಂತರಾಜು ಕಾರ್ಯಕ್ರಮವನ್ನು ನಿರೂಪಿಸಿದರು. ಪುಸ್ತಕ ಮಾರಾಟಗಾರ ನಾಗೇಂದ್ರ ವಂದಿಸಿದರು. ಗಾಯಕ ಶ್ರೀಕಾಂತ್ ಗೊರೂರು ಪ್ರಾರ್ಥಿಸಿದರು. ಇದೇ ಸಂದರ್ಭದಲ್ಲಿ ಕನ್ನಡ ಗೋಡೆ ಬರಹಗಾರ ಯಾಕೂಬ್ ಗೊರೂರು ಅವರಿಗೆ ಪುಸ್ತಕ ನೀಡಿ ಗೌರವಿಸಲಾಯಿತು.

## ಲವ್ ಜಿಹಾದ್: ಎನ್‌ಐಎ ತನಿಖೆಗೆ ಒತ್ತಾಯ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಕೊಪ್ಪಳ

ದೇಶದ ವಿವಿಧೆಡೆ ನಡೆಯುತ್ತಿರುವ ಲವ್ ಜಿಹಾದ್ ಪ್ರಕರಣಗಳನ್ನು ತ್ವರಿತವಾಗಿ ಪತ್ತೆ ಹಚ್ಚಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ರಾಷ್ಟ್ರಪತಿಗೆ ಬರೆದ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರಿಗೆ ಸಲ್ಲಿಸಿದ ಕಾರ್ಯಕರ್ತರು, ದೇಶದಲ್ಲಿನ ಸಮಾಜ ವಿದ್ರೋಹಿ ಚಟುವಟಿಕೆಗಳು ಮತ್ತು ಮಾರಕವಾಗುತ್ತಿರುವ ಲವ್ ಜಿಹಾದ್ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಇದರಿಂದ ದೇಶದ ಸಾಮಾಜಿಕ ವ್ಯವಸ್ಥೆ ಹಾಳಾಗುತ್ತಿದೆ. ಆಂತರಿಕ ಭದ್ರತೆ ಮತ್ತು ಸಾಮರಸ್ಯಕ್ಕೆ ಬಹುದೊಡ್ಡ ಅಪಾಯಕಾರಿಯಾಗಿದೆ ಎಂದರು. ಇಂಥ ಪ್ರಕರಣಗಳನ್ನು ತನಿಖೆ ನಡೆಸಲು ಎನ್‌ಐಎಗೆ ಒಪ್ಪಿಸಬೇಕು ಎಂದು ಒತ್ತಾಯಿಸಿದರು.

ಮಹಾರಾಷ್ಟ್ರದ ನಾಸಿಕ್‌ನ ಟಿಸಿಎಸ್ ಕಂಪನಿಯಲ್ಲಿ ಲವ್ ಜಿಹಾದ್ ಬೆಳಕಿಗೆ ಬಂದಿದೆ. ಜಿಮ್ ತರಬೇತಿಯ ಹೆಸರಿನಲ್ಲಿ ಹಿಂದೂ ಹೆಣ್ಣುಮಕ್ಕಳನ್ನು ಮುಸಲ್ಮಾನರು ವಂಚಿಸುತ್ತಿದ್ದಾರೆ. ಕೊಪ್ಪಳ ತಾಲ್ಲೂಕಿನ ಕಂಪ್ಲಿಯ ಮುಸ್ತಫಾ ಖಾದ್ರಿ ತನ್ನ ಮೊಬೈಲ್‌ನಲ್ಲಿ ಸಾವಿರಾರು ಮಹಿಳೆಯರ ವಿಡಿಯೋಗಳನ್ನು ಇಟ್ಟುಕೊಂಡಿದ್ದಾನೆ. ಇವು ಕೆಲವು ಉದಾಹರಣೆಗಳಷ್ಟೇ ಇದೇ ರೀತಿ ರಾಜ್ಯದ ಅನೇಕ ಕಡೆ ಲವ್ ಜಿಹಾದ್ ಪ್ರಕರಣಗಳು ನಡೆಯುತ್ತಿವೆ' ಎಂದು ಅವರು ಆರೋಪಿಸಿದರು.

## ಪಕ್ಷದ ಸಂಘಟನೆಗೆ ಒಗ್ಗಟ್ಟಿನಿಂದ ಶ್ರಮಿಸಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಹುಮನಾಬಾದ್

ಪಕ್ಷದ ಸಂಘಟನೆಗೆ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಹುಮನಾಬಾದ್‌ನಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ ಹೇಳಿದರು. ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ತಾಲ್ಲೂಕಿನ ಹಳ್ಳಿಖೇಡ್ ಬಿ. ಪಟ್ಟಣದಲ್ಲಿ ಆಯೋಜಿಸಿದ್ದ ಹಳ್ಳಿಖೇಡ್ ಬಿ. ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

ನಮ್ಮ ನಡುವೆ ಸಣ್ಣಪುಟ್ಟ ವ್ಯತ್ಯಾಸಗಳಿಂದ ಅಲ್ಪ ಮತಗಳಲ್ಲಿ ನಾವು ಸೋಲಬೇಕಾಯಿತು. ಆದರೆ ಇದರಿಂದಾಗಿ ಯಾರು ಕುಗ್ಗುವುದು ಬೇಡ. ನಿಮ್ಮ ಏನೇ ಸಮಸ್ಯೆಗಳು ಇದ್ದರೆ ನೇರವಾಗಿ ನನ್ನ ಹತ್ತಿರ ಹೇಳಬೇಕು. ಸಂಘಟನೆಯ ಮೂಲಕ ಕಾಂಗ್ರೆಸ್ ಬಲಪಡಿಸುವುದರ ಕಡೆ ಹೆಚ್ಚಿನ ಒತ್ತು ನೀಡಬೇಕು ಎಂದರು.

ಕಾರ್ಯಕರ್ತರೇ ಪಕ್ಷದ ಜೀವಾಳ. ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರು, ಪದಾಧಿಕಾರಿಗಳು ಒಗ್ಗಟ್ಟಿನಿಂದ ಸಂಘಟನೆಯಲ್ಲಿ ತೊಡಗಿಕೊಂಡು ಮನೆ ಮನೆಗೆ ರಾಜ್ಯ ಸರ್ಕಾರ ಯೋಜನೆಗಳನ್ನು ತಲುಪಿಸಬೇಕು. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಡಾ ಚಂದ್ರಶೇಖರ ಪಾಟೀಲ ಮಾತನಾಡಿ, ಶಾಸಕರು ಅಭಿವೃದ್ಧಿ ಮಾಡುತ್ತಿಲ್ಲ. ಬರಿ ಸುಳ್ಳು ಹೇಳುತ್ತಿದ್ದಾರೆ. ಕ್ಷೇತ್ರದಲ್ಲಿ ಯಾವುದಾದರೂ ದೊಡ್ಡ ಅಭಿವೃದ್ಧಿಯ ಉದಾಹರಣೆಗಳಿಲ್ಲ ಎಂದರು. ವಿಪ ಮಾಜಿ ಸದಸ್ಯ ಅರವಿಂದ ಅರಳಿ ಮಾತನಾಡಿ, ಗ್ರಾಮಗಳ ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆ ಆಗಬೇಕು. ಇದಕ್ಕೆ ಎಲ್ಲರೂ ಸಂಘಟಿತರಾಗಬೇಕು' ಎಂದರು.

## ಎಸ್‌ಎಸ್‌ಎಲ್‌ಸಿ ಫಲಿತಾಂಶ: ಸಾಧನೆ ಸೂಪರ್, ವಿದ್ಯಾರ್ಥಿಗಳಿಗೂ ಬಂಪರ್

• ಉದಯವಾಹಿನಿ, ಕೊಪ್ಪಳ

ವಿದ್ಯಾರ್ಥಿಗಳು ತಮ್ಮ ಸುಂದರ ಭವಿಷ್ಯ ರೂಪಿಸಿಕೊಳ್ಳಲು ಪ್ರಮುಖ ವೇದಿಕೆಯಾದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ 1ರಲ್ಲಿ ಜಿಲ್ಲೆಯು ಒಂದೇ ವರ್ಷದಲ್ಲಿ ಐದು ಸ್ಥಾನಗಳಲ್ಲಿ ಜಿಗಿತ ಕಂಡಿದೆ. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆ ಹೊಂದುವ ಜೊತೆಗೆ ಅಂಕ ಗಳಿಕೆಯಲ್ಲಿಯೂ ಮುಂಚೂಣಿಯಲ್ಲಿ ಸಾಧನೆ ಮಾಡಿರುವುದು ವಿಶೇಷ.

2024-25ರ ಶೈಕ್ಷಣಿಕ ವರ್ಷದಲ್ಲಿ ಜಿಲ್ಲೆ ಶೇ. 57.32ರಷ್ಟು ಫಲಿತಾಂಶ ಪಡೆದು ರಾಜ್ಯಮಟ್ಟದಲ್ಲಿ 30ನೇ ಸ್ಥಾನ ಪಡೆದುಕೊಂಡಿತ್ತು. ಈ ವರ್ಷ ಶೇ 93ರಷ್ಟು ಫಲಿತಾಂಶ ಗಳಿಸಿ ರಾಜ್ಯದಲ್ಲಿ 25ನೇ ಸ್ಥಾನ ಸಂಪಾದಿಸಿದೆ. ಒಂದೇ ವರ್ಷದಲ್ಲಿ ಶೇಕಡವಾರು ಫಲಿತಾಂಶದಲ್ಲಿ ಶೇ.35.68ರಷ್ಟು ಹೆಚ್ಚಳವಾಗಿದ್ದು ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಅಧಿಕಾರಿಗಳ ಶ್ರಮಕ್ಕೆ ಹಿಡಿದ ಕೈಗನ್ನಡಿಯಂತಿದೆ. ಮೂರು ವರ್ಷಗಳ ಹಿಂದೆ ಜಿಲ್ಲೆಯು ಶೇ90.27ರಷ್ಟು ಫಲಿತಾಂಶ ಪಡೆದುಕೊಂಡಿತ್ತು. ಅದಾದ ಬಳಿಕ ಈಗ ಮತ್ತೊಮ್ಮೆ ಶೇ 90ರ ಗಡಿ ದಾಟಿದೆ.

ಪರೀಕ್ಷೆಗೆ ಹಾಜರಾದ ಒಟ್ಟು 21,433 ವಿದ್ಯಾರ್ಥಿಗಳಲ್ಲಿ 19,802 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 96 ಪ್ರೌಢಶಾಲೆಗಳು ಶೇ 100ರಷ್ಟು ಫಲಿತಾಂಶ ಪಡೆದುಕೊಂಡಿದ್ದು ವಿಶೇಷ. ತಾಲ್ಲೂಕುವಾರು ವಿಶ್ಲೇಷಣೆಯಲ್ಲಿ ಯಲಬುರ್ಗಾ ಶೈಕ್ಷಣಿಕ ತಾಲ್ಲೂಕು (ಶೇ 95.14), ಗಂಗಾವತಿ ಶೈಕ್ಷಣಿಕ ತಾಲ್ಲೂಕು (ಶೇ 92.88), ಕುಷ್ಟಗಿ (ಶೇ 92.45) ಮತ್ತು ಕೊಪ್ಪಳ (ಶೇ 89.53) ಕ್ರಮವಾಗಿ ಮೊದಲ ನಾಲ್ಕು ಸ್ಥಾನಗಳನ್ನು ಪಡೆದುಕೊಂಡಿವೆ. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಮೂರನೇ ಸ್ಥಾನಗಳಿಸಿದ್ದು ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳು ಮೊದಲ ಎರಡು ಸ್ಥಾನಗಳಲ್ಲಿವೆ.


ಉದಯವಾಹಿನಿ ಚಿತ್ರ

ಮೇಲಧಿಕಾರಿಗಳ ಮಾರ್ಗದರ್ಶನ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಶ್ರಮದಿಂದಾಗಿ ಜಿಲ್ಲೆ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ ಪಡೆದಿದೆ. ಎಲ್ಲರಿಗೂ ಇದರ ಶ್ರೇಯ ಸಲ್ಲಬೇಕು.
-ಸೋಮಶೇಖರಗೌಡ ಪಾಟೀಲ ಡಿಡಿಪಿಐ

**ಕಾರಣವೇನು:** ಜಿಲ್ಲೆಯಲ್ಲಿ ಉತ್ತೀರ್ಣ ಪ್ರಮಾಣ ಹೆಚ್ಚಿಸಲು ಮಿಷನ್ ಶೇ 40 ಯೋಜನೆ ಅನುಷ್ಠಾನ ಮಾಡಲಾಗಿತ್ತು. ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ ನೇತೃತ್ವದಲ್ಲಿ ಸ್ಫೂರ್ತಿ ನಡೆ, ದಿನಕ್ಕೊಂದು ಪ್ರಶ್ನೆ ವಾರಕ್ಕೊಂದು ಪರೀಕ್ಷೆ.

ಎಸ್‌ಎಸ್‌ಎಲ್‌ಸಿಯಿಂದ ನಡೆಸಲಾದ ಪೂರ್ವ ಸಿದ್ಧತಾ ಪರೀಕ್ಷೆಗಳ ಸಮರ್ಪಕ ಅನುಷ್ಠಾನ, ಆರು ಮಾದರಿ ಪ್ರಶ್ನೆ ಪತ್ರಿಕೆಗಳ ಅಭ್ಯಾಸ, ಸಂಪನ್ಮೂಲ ಸದ್ಬಳಕೆ, ನೀಲನಕ್ಷೆ ಆಧಾರಿತ ವಿಷಯವಾರು ಪ್ಯಾಕೇಜ್ ತಯಾರಿಕೆ, ಜಿಲ್ಲಾ ಹಂತದ ಅಧಿಕಾರಿಗಳಿಂದ ದತ್ತು ಸ್ವೀಕಾರ ಹಾಗೂ ಮಾರ್ಗದರ್ಶನ, ಶಾಲಾ ಹಂತದಲ್ಲಿ ಗುಂಪು ಅಧ್ಯಯನ ಹಾಗೂ ವಿಶೇಷ ತರಗತಿಗಳನ್ನು ನಡೆಸಿದ್ದು ಜಿಲ್ಲೆಯ ಫಲಿತಾಂಶಕ್ಕೆ ಕಾರಣ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ವಿಶ್ಲೇಷಿಸುತ್ತಾರೆ. ಈ ಎಲ್ಲಾ ಪ್ರಯೋಗಗಳು ಫಲ ನೀಡಿವೆ.

**ಜಿಲ್ಲಾಧಿಕಾರಿ ದತ್ತು ಪಡೆದ ಶಾಲೆಗೆ ಶೇ 80ರಷ್ಟು ಫಲಿತಾಂಶ:** ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ ಅವರು ಕೊಪ್ಪಳದ ಸರ್ಕಾರಿ ಪದವಿಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ದತ್ತ ಪಡೆದಿದ್ದು ವಿದ್ಯಾರ್ಥಿಗಳ ಓದಿನ ಮೇಲ್ವಿಚಾರಣೆ ಮಾಡಿದ್ದರು. ಈ ಶಾಲೆಯು ಹಿಂದಿನ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ಪಡೆದಿರಲಿಲ್ಲ. ಈ ಬಾರಿ ಶೇ 80ರಷ್ಟು ಫಲಿತಾಂಶ ಗಳಿಸಿ ಗಮನ ಸೆಳೆದಿದೆ. ಪರೀಕ್ಷೆ ಬರೆದ 94 ವಿದ್ಯಾರ್ಥಿಗಳಲ್ಲಿ 76 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಸುರೇಶ ಇಟ್ನಾಳ ಜಿಲ್ಲೆಯ ಫಲಿತಾಂಶ ಸುಧಾರಣೆಯಾಗಿದ್ದು ಖುಷಿ ನೀಡಿದೆ. ಮುಂದೆ ಇನ್ನಷ್ಟು ಸುಧಾರಣೆಗೆ ಕ್ರಮ ವಹಿಸಲಾಗುವುದು ಎಂದರು.

## ಅಪಪ್ರಚಾರದ ನಡುವೆಯೂ ಯೋಜನೆ ಯಶಸ್ವಿ

• ಉದಯವಾಹಿನಿ, ಕುಂದಾಪುರ

ವಿರೋಧ ಪಕ್ಷಗಳ ಟೀಕೆ, ಅಪಪ್ರಚಾರಗಳ ನಡುವೆಯೂ ಪಂಚ ಗ್ಯಾರಂಟಿ ಯೋಜನೆಗಳು ಯಶಸ್ವಿಯಾಗಿ ಜಾರಿಯಾಗುತ್ತಿದ್ದು, ಮಾರ್ಚ್ ತಿಂಗಳಲ್ಲಿ ತಾಲ್ಲೂಕಿಗೆ ರೂ. 29.63 ಕೋಟಿ ಅನುದಾನ ಬಂದಿದೆ. ಯೋಜನೆ ಪ್ರಾರಂಭದಿಂದ ಈವರೆಗೆ ರೂ.560 ಕೋಟಿ ಅನುದಾನ ಬಿಡುಗಡೆಯಾಗಿದೆ ಎಂದು ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್. ಹರಿಪ್ರಸಾದ್ ಶೆಟ್ಟಿ ಕಾನ್ಮಕ್ಕಿ ಹೇಳಿದರು. ತಾಲ್ಲೂಕು ಪಂಚಾಯಿತಿಯ ಡಾ. ವಿ.ಎಸ್.ಆಚಾರ್ಯ ಸಭಾಂಗಣದಲ್ಲಿ ಗುರುವಾರ ನಡೆದ ತಾಲ್ಲೂಕು ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೆಲವೆಡೆ ಅಪಾಯಕಾರಿ ಮರದ ಗೆಲ್ಲುಗಳಿಂದ ವಿದ್ಯುತ್ ಸಂಪರ್ಕಕ್ಕೆ ತೊಂದರೆಯಾಗುತ್ತಿದ್ದು, ಅವುಗಳನ್ನು ತೆರವು ಮಾಡಲು ಮೆಸ್ಕಾಂ, ಸ್ಥಳೀಯ ಪಂಚಾಯಿತಿ ಹಾಗೂ ಅರಣ್ಯ ಇಲಾಖೆ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಮೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಗಂಗೊಳ್ಳಿಗೆ ಸೇರಿದಂತೆ ಸಿಬ್ಬಂದಿ ಕೊರತೆ ಇರುವೆಡೆ ಹೆಚ್ಚುವರಿ ಸಿಬ್ಬಂದಿ ನೇಮಕ ಮಾಡುವಂತೆ ಸದಸ್ಯರು ಒತ್ತಾಯಿಸಿದರು. ಹೊಸ ನೇಮಕಾತಿ ಆದಾಗ ಅಗತ್ಯವಿರುವ ಕಡೆಗೆ ಸಿಬ್ಬಂದಿ ನಿಯೋಜನೆ ಮಾಡಲಾಗುವುದು ಎಂದು ಮೆಸ್ಕಾಂ ಅಧಿಕಾರಿಗಳು ತಿಳಿಸಿದರು.

ಗಂಗೊಳ್ಳಿಯಿಂದ ಬೈಂದೂರಿಗೆ ಬೆಳಿಗ್ಗೆ 6.15ಕ್ಕೆ ಬಸ್ ಆರಂಭಿಸುವಂತೆ ಸದಸ್ಯರು ಮನವಿ ಮಾಡಿದರು. ಸದ್ಯ ಚಾಲಕರ ಕೊರತೆಯಿದ್ದು, ಹೊಸ ನೇಮಕಾತಿಯಾದರೆ ಹೆಚ್ಚುವರಿ ಬಸ್ ಬಿಡಲಾಗುವುದು. ಹಂಗಳೂರು ಕೋಡಿ ಮಧ್ಯೆ ದೊಡ್ಡ ಬಸ್ ಸಂಚರಿಸುತ್ತಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.


ಉದಯವಾಹಿನಿ ಚಿತ್ರ

# ರೈಲ್ವೆ ಕಾಮಗಾರಿ: ಶಿವಮೊಗ್ಗ ತಾಳಗುಪ್ಪ ಮಾರ್ಗದ 2 ರೈಲು 3 ದಿನ ರದ್ದು

ಬೇಸಿಗೆ ರಜೆಯ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು, ದಕ್ಷಿಣ ಮಧ್ಯ ರೈಲ್ವೆಯು ವಿಶೇಷ ರೈಲುಗಳ ಕಾರ್ಯಾಚರಣೆ

• ಉದಯವಾಹಿನಿ, ಶಿವಮೊಗ್ಗ

ಹಾಸನ ವಾರ್ಡ್‌ನಲ್ಲಿ ಸುರಕ್ಷತೆ ಸಂಬಂಧಿಸಿದ ಕಾಮಗಾರಿಗಳನ್ನು ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಕೆಲ ರೈಲುಗಳ ಸೇವೆಯಲ್ಲಿ ವ್ಯತ್ಯಯವಾಗಲಿದೆ. ಪ್ರಮುಖವಾಗಿ ಮೈಸೂರು ತಾಳಗುಪ್ಪ ಎಕ್ಸ್‌ಪ್ರೆಸ್ ರೈಲು ಮೂರು ದಿನ ರದ್ದಾಗಲಿದೆ.

ಮೈಸೂರು ತಾಳಗುಪ್ಪ ಮೈಸೂರು ಎಕ್ಸ್‌ಪ್ರೆಸ್ (16206-16205) ಮತ್ತು ಅರಸೀಕೆರೆ ಮೈಸೂರು ಪ್ಯಾಸೆಂಜರ್ (56267) ರೈಲುಗಳ ಪ್ರಯಾಣವನ್ನು ಏಪ್ರಿಲ್ 29, ಮೇ 4 ಮತ್ತು ಮೇ 6 ರಂದು ರದ್ದುಗೊಳಿಸಲಾಗಿದೆ.

**ಭಾಗಶಃ ರೈಲುಗಳು ರದ್ದು:** ಮೈಸೂರು ಶಿವಮೊಗ್ಗ ಟೌನ್ ಎಕ್ಸ್‌ಪ್ರೆಸ್(16225) ರೈಲು ಏಪ್ರಿಲ್ 29, ಮೇ 4 ಮತ್ತು ಮೇ 6 ರಂದು ಮೈಸೂರು ಮತ್ತು ಅರಸೀಕೆರೆ ನಡುವೆ ಭಾಗಶಃ ರದ್ದುಗೊಂಡಿದ್ದು, ಅರಸೀಕೆರೆ ನಿಲ್ದಾಣದಿಂದ ತನ್ನ ನಿಗದಿತ ಸಮಯಕ್ಕೆ ಪ್ರಯಾಣ ಆರಂಭಿಸಲಿದೆ.

ಮೈಸೂರು ಅರಸೀಕೆರೆ ಪ್ಯಾಸೆಂಜರ್(56266) ರೈಲಿನ ಪ್ರಯಾಣವು ಏ.29, ಮೇ 4 ಮತ್ತು ಮೇ 6ರಂದು ಮಾವಿನಕೆರೆ ಮತ್ತು ಅರಸೀಕೆರೆ ನಡುವೆ ರದ್ದುಗೊಳ್ಳಲಿದ್ದು ಮಾವಿನಕೆರೆ ನಿಲ್ದಾಣದಲ್ಲಿ ತನ್ನ ಪ್ರಯಾಣವನ್ನು ಕೊನೆಗೊಳಿಸಲಿದೆ.

ಯಶವಂತಪುರ ಕಾರವಾರ ಎಕ್ಸ್‌ಪ್ರೆಸ್ (16515) ರೈಲು ಏ.29, ಮೇ 4, ಮೇ 6 ರಂದು ಬೆಂಗಳೂರು ವಿಭಾಗದಲ್ಲಿಸುಮಾರು 65 ನಿಮಿಷ ವಿಳಂಬವಾಗಿ ಸಂಚರಿಸಲಿದೆ.

ಬೇಸಿಗೆ ರಜೆಯ ಹಿನ್ನೆಲೆ ವಿಶೇಷ ರೈಲುಗಳ ಸಂಚಾರ ವಿಸ್ತರಣೆ ಬೇಸಿಗೆ ರಜೆಯ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು, ದಕ್ಷಿಣ ಮಧ್ಯ ರೈಲ್ವೆಯು ವಿಶೇಷ ರೈಲುಗಳ ಕಾರ್ಯಾಚರಣೆಯನ್ನು ವಿಸ್ತರಿಸಲು ನಿರ್ಧರಿಸಿದೆ.

ರೈಲು ಸಂಖ್ಯೆ 07033 ಕಾಕಿನಾಡ ಟೌನ್ ಮೈಸೂರು ದ್ವಿ-ಸಾಪ್ತಾಹಿಕ ವಿಶೇಷ ರೈಲು, ಮೊದಲು ಏಪ್ರಿಲ್ 20, 2026 ರವರೆಗೆ ಸಂಚರಿಸಲು ನಿಗದಿಯಾಗಿತ್ತು. ಈಗ ಇದು ಏಪ್ರಿಲ್ 24 ಮತ್ತು 27, 2026 ರಂದು ಹೆಚ್ಚುವರಿ ಸಂಚಾರ ನಡೆಸಲಿದೆ. ಇದರ ಜೋಡಿ ಸೇವೆಯಾದ ರೈಲು ಸಂಖ್ಯೆ 07034 ಮೈಸೂರು-ಕಾಕಿನಾಡ ಟೌನ್ ವಿಶೇಷ ರೈಲು, ಈ ಹಿಂದೆ ಏಪ್ರಿಲ್ 21, 2026 ರವರೆಗೆ ಸೂಚಿಸಲಾಗಿತ್ತು, ಈಗ ಏಪ್ರಿಲ್ 25 ಮತ್ತು 28, 2026 ರಂದು ಹೆಚ್ಚುವರಿ ಟ್ರಿಪ್‌ಗಳನ್ನು ನಡೆಸಲಿದೆ.

ರೈಲು ಸಂಖ್ಯೆ 07043 ಹೈದರಾಬಾದ್-ಬೆಳಗಾವಿ ಸಾಪ್ತಾಹಿಕ ವಿಶೇಷ ರೈಲು, ಮೊದಲು ಏಪ್ರಿಲ್ 23, 2026 ರವರೆಗೆ ಯೋಜಿಸಲಾಗಿತ್ತು, ಇದನ್ನು ಏಪ್ರಿಲ್ 30, 2026 ರಂದು ಮತ್ತೊಂದು ಹೆಚ್ಚುವರಿ ಟ್ರಿಪ್‌ಗಾಗಿ ವಿಸ್ತರಿಸಲಾಗಿದೆ. ಮರು ಪ್ರಯಾಣದಲ್ಲಿ, ರೈಲು ಸಂಖ್ಯೆ 07044 ಬೆಳಗಾವಿ-ಹೈದರಾಬಾದ್ ವಿಶೇಷ ರೈಲು, ಮೊದಲು ಏಪ್ರಿಲ್ 24, 2026 ರವರೆಗೆ ನಿಗದಿಯಾಗಿತ್ತು, ಈಗ ಮೇ 1, 2026 ರಂದು ಹೆಚ್ಚುವರಿ ಟ್ರಿಪ್ ನಡೆಸಲಿದೆ.

ರೈಲು ಸಂಖ್ಯೆ 06539 ಎಸ್‌ಎಂವಿಟಿ ಬೆಂಗಳೂರು-ಬೀದರ್ ದ್ವಿ-ಸಾಪ್ತಾಹಿಕ ವಿಶೇಷ ಎಕ್ಸ್ ಪ್ರೆಸ್ ರೈಲು, ಮೊದಲು ಏಪ್ರಿಲ್ 26, 2026 ರವರೆಗೆ ಸೂಚಿಸಲಾಗಿತ್ತು, ಈಗ ಮೇ 3 ಮತ್ತು 8, 2026 ರಂದು ಹೆಚ್ಚುವರಿ ಸಂಚಾರ ನಡೆಸಲಿದೆ. ಅಂತೆಯೇ, ರೈಲು ಸಂಖ್ಯೆ 06540 ಬೀದರ್-ಎಸ್‌ಎಂವಿಟಿ ಬೆಂಗಳೂರು ದ್ವಿ-ಸಾಪ್ತಾಹಿಕ ವಿಶೇಷ ಎಕ್ಸ್ ಪ್ರೆಸ್ ರೈಲು, ಮೊದಲು ಏಪ್ರಿಲ್ 27, 2026 ರವರೆಗೆ ನಿಗದಿಯಾಗಿತ್ತು, ಈಗ ಮೇ 4 ಮತ್ತು 9, 2026 ರಂದು ಹೆಚ್ಚುವರಿ ಟ್ರಿಪ್‌ಗಳನ್ನು ಕಾರ್ಯಾಚರಿಸಲಿದೆ.



5 ರೈಲುಗಳ ಸಂಚಾರ ವ್ಯತ್ಯಯ

- ಹಾಸನ ವಾರ್ಡ್‌ನಲ್ಲಿ ಸುರಕ್ಷತೆ ಸಂಬಂಧಿಸಿದ ಕಾಮಗಾರಿ; ಹಲವು ರೈಲುಗಳ ಸಂಚಾರ ವ್ಯತ್ಯಯ.
- ಮುಖವಾಗಿ ಮೈಸೂರು ತಾಳಗುಪ್ಪ ಎಕ್ಸ್‌ಪ್ರೆಸ್ ರೈಲು ಮೂರು ದಿನ ರದ್ದಾಗಲಿದೆ.
- ಮೈಸೂರು ಅರಸೀಕೆರೆ ಪ್ಯಾಸೆಂಜರ್ ಭಾಗಶಃ ಸಂಚಾರ ನಡೆಸಲಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ:** ಹಿರಿಯರು ಉತ್ತಮ ಲಾಭ ಪಡೆಯಲು ತಮ್ಮ ಹೆಚ್ಚುವರಿ ಶಕ್ತಿಯನ್ನು ಸಕಾರಾತ್ಮಕ ಬಳಕೆಗೆ ವಿನಿಯೋಗಿಸಬೇಕು. ಸುಮ್ಮನೆ ಕುಳಿತುಕೊಳ್ಳುವ ಬದಲು –ಏಕೆ ಏನನ್ನಾದರೂ ಮಾಡಬಾರದು.

**ವೃಷಭ:** ಪ್ರತಿ ವ್ಯಕ್ತಿಯನ್ನೂ ಆಲಿಸಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕಬಹುದು. ಯಾರಾದರೂ ನಿಮ್ಮ ನೆರೆಹೊರೆಯವರು ಇಂದು ನಿಮ್ಮ ಹತ್ತಿರ ಹಣ ಸಾಲ ಕೇಳಲು ಬರಬಹುದು.

**ಮಿಥುನ:** ಹಳೆಯ ಸಂಪರ್ಕಗಳು ಮತ್ತು ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ. ಇಂದು ಪ್ರೀತಿಪಾತ್ರರಿಗೆ ನಿಮ್ಮ ವಿಚಿತ್ರ ವರ್ತನೆಯ ಜೊತೆ ಏಗಲು ಅತ್ಯಂತ ಕಷ್ಟವಾಗುತ್ತದೆ.

**ಕರ್ಕಾಟಕ:** ಸ್ನೇಹಿತರು ನಿಮ್ಮ ಆಲೋಚನೆಗಳ ಮೇಲೆ ಗಮನಾರ್ಹ ಪ್ರಭಾವ ಬೀರಬಹುದಾದ ಯಾರಾದರೊಬ್ಬರನ್ನು ನಿಮಗೆ ಪರಿಚಯಿಸುತ್ತಾರೆ. ಹಣದ ಕೊರತೆ ನಿಮ್ಮ ಮನೆಯಲ್ಲಿ ಅಪಶ್ರುತಿಗೆ ಕಾರಣವಾಗಬಹುದು.

**ಸಿಂಹ:** ತಿರುವುಗಳಲ್ಲಿ ವಾಹನ ಚಾಲನೆ ಮಾಡುವಾಗ ಎಚ್ಚರಿಕೆಯಿಂದಿರಿ. ಬೇರೆಯವರ ಉದಾಸೀನತೆ ನಿಮಗೆ ಸಮಸ್ಯೆಗಳನ್ನು ಉಂಟುಮಾಡಬಹುದು. ನಿಮ್ಮ ಹೂಡಿಕೆಗಳ ಬಗ್ಗೆ ಭವಿಷ್ಯದ ಗುರಿಗಳ ಬಗ್ಗೆ ರಹಸ್ಯಮಯವಾಗಿರಿ.

**ಕನ್ಯಾ:** ನೀವು ಪ್ರಮುಖ ಸಮಸ್ಯೆಗಳ ಮೇಲೆ ಗಮನ ನೀಡಬೇಕು. ಮದುವೆ ಕೇವಲ ಒಂದೇ ಸೂರಿನಡಿ ವಾಸಿಸುವುದು ಮಾತ್ರವಲ್ಲ, ನಿಮ್ಮ ಸಂಗಾತಿಯ ಜೊತೆ ಸ್ವಲ್ಪ ಸಮಯ ಕಳೆಯುವುದೂ ಬಹಳ ಮುಖ್ಯವಾಗಿದೆ.

**ತುಲಾ:** ನಿಮ್ಮ ದೈಹಿಕ ರಚನೆಯನ್ನು ಕಾಯ್ದುಕೊಳ್ಳಲು ನೆರವಾಗುವ ಕೆಲವು ಕ್ರೀಡಾ ಚಟುವಟಿಕೆಗಳನ್ನು ನೀವು ಇಂದು ಆನಂದಿಸಬಹುದು. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ.

**ವೃಶ್ಚಿಕ:** ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ಇತರರ ಮೇಲೆ ಪ್ರಭಾವ ಬೀರಲು ತುಂಬಾ ವೆಚ್ಚ ಮಾಡಬೇಡಿ.

**ಧನಸ್ಸು:** ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ, ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ.

**ಮಕರ:** ಇತ್ತೀಚೆಗೆ ನಿಮ್ಮಲ್ಲಿ ಕೆಲವರು ಓವರ್‌ಟೈಮ್ ಮಾಡುತ್ತಿರುತ್ತಾರೆ ಹಾಗೂ ನಿಮ್ಮ ಚೈತನ್ಯ ಉಡುಗುತ್ತಿರುತ್ತದೆ– ಇಂದು ನೀವು ಒತ್ತಡ ಹಾಗೂ ಸಂದಿಗ್ದತೆಯನ್ನು ಬಯಸುವುದಿಲ್ಲ.

**ಕುಂಭ:** ಅನಗತ್ಯ ತೊಡಕುಗಳಿಂದ ದೂರ ಹೋಗಿ ಇಂದು ನೀವು ಯಾವುದೇ ದೇವಸ್ಥಾನ, ಗುರುದ್ವಾರ ಅಥವಾ ಯಾವುದೇ ಧಾರ್ಮಿಕ ಸ್ಥಳದಲ್ಲಿ ನಿಮ್ಮ ಉಚಿತ ಸಮಯವನ್ನು ಕಳೆಯಬಹುದು.

**ಮೀನ:** ಸ್ನೇಹಿತರ ಅಥವಾ ಒಬ್ಬ ಪರಿಚಯಸ್ಥರ ಸ್ವಾರ್ಥದ ವರ್ತನೆ ನಿಮ್ಮ ಮಾನಸಿಕ ಶಾಂತಿಗೆ ತೊಂದರೆ ತರಬಹುದು. ಬುದ್ಧಿವಂತ ಹೂಡಿಕೆಗಳು ಮಾತ್ರ ಆದಾಯಗಳನ್ನು ನೀಡುತ್ತವೆ.

### ಮುಂದಿನ ತಲೆಮಾರುಗಳಿಗೆ ಸಮರ್ಪಕ ಶಿಕ್ಷಣ ನೀಡುವುದು ದಿನೇ ದಿನೇ ಕಷ್ಟವಾಗುತ್ತಿದೆ

# ಪರಿಸ್ಥಿತಿ ಚಾತುರ್ಯದಿಂದ ಎದುರಿಸುವ ಸಾಮರ್ಥ್ಯ ಅಗತ್ಯ

• ಉದಯವಾಹಿನಿ, ಧಾರವಾಡ

ವಿಜ್ಞಾನ ಮತ್ತು ತಂತ್ರಜ್ಞಾನವು ಮಾನವರ ದೈನಂದಿನ ಶ್ರಮವನ್ನು ಕಡಿಮೆ ಮಾಡುವಲ್ಲಿ ಮಹತ್ತರ ಪಾತ್ರ ವಹಿಸಿದ್ದರೂ, ಅದು ಮಾನವರ ಪರಸ್ಪರ ಸಂಬಂಧ ಮತ್ತು ಪ್ರಕೃತಿಯೊಂದಿಗೆ ಇರುವ ಸಂಬಂಧವನ್ನು ಕೂಡ ಬದಲಾಯಿಸಿದೆ ಎಂದು ಇಸ್ರೋದ ನಿಕಟ ಪೂರ್ವ ಅಧ್ಯಕ್ಷರಾದ ಎ.ಎಸ್.ಕಿರಣಕುಮಾರ ಅಭಿಪ್ರಾಯಪಟ್ಟರು. ಅವರು ಕವಿವಿ ಗಾಂಧಿ ಭವನದಲ್ಲಿ ಆಯೋಜಿಸಿದ ಕರ್ನಾಟಕ ವಿಶ್ವವಿದ್ಯಾಲಯದ 75ನೇ ವಾರ್ಷಿಕ ಘಟಿಕೋತ್ಸವ ಭಾಷಣ ಮಾಡಿ ಮಾತನಾಡಿದರು.

ಮಾನವ ಭೂಮಿಯ ಹೊರಗೂ ಹೋಗುವ ಸಾಮರ್ಥ್ಯವನ್ನು ಹೊಂದಿದ್ದು, ಹತ್ತಿರದ ಗ್ರಹಗಳಲ್ಲಿ ವಾಸಸ್ಥಾನ ನಿರ್ಮಿಸಲು ಸಿದ್ಧತೆ ನಡೆಸುತ್ತಿದ್ದಾರೆ. ಬದಲಾವಣೆಯ ವೇಗ ನಿಧಾನವಾಗಿದ್ದಾಗ, ಜನರು ಹೊಸ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲು ಸಾಕಷ್ಟು ಸಮಯ ಸಿಗುತ್ತಿತ್ತು. ಆದರೆ ಈಗ ವೇಗವಾದ ಬದಲಾವಣೆಗಳು ವ್ಯಕ್ತಿಗಳು, ಗುಂಪುಗಳು, ಸಮುದಾಯಗಳು ಮತ್ತು ರಾಷ್ಟ್ರಗಳ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಮುಂತಾದ ಸಂಶೋಧಕರು ಸಂಶೋಧನೆಯಿಂದ ವಿವರಿಸಿದ್ದಾರೆ ಎಂದರು.

ನೀವು ಈಗ ನಿಮ್ಮ ಜೀವನದ ಒಂದು ಮಹತ್ವದ ಹಂತಕ್ಕೆ ಪ್ರವೇಶಿಸುತ್ತಿದ್ದೀರಿ. ಇದು ನೀವು ಇತ್ತೀಚೆಗೆ ಅನುಭವಿಸಿದ್ದ ಸುವ್ಯವಸ್ಥಿತ, ನಿಯಂತ್ರಿತ ಮತ್ತು ಸಂಘಟಿತ ಪರಿಸರದಿಂದ ಹೆಚ್ಚು ಅಸ್ಥಿರ, ಸವಾಲಿನ ಪರಿಸ್ಥಿತಿಗಳಿಗೆ ಸಾಗುವ ಹಂತವಾಗಿದೆ.

ಈ ಹಂತದಲ್ಲಿ ನೀವು ಎದುರಿಸುವ ಪರಿಸ್ಥಿತಿಗಳನ್ನು ಚಾತುರ್ಯ ಮತ್ತು ಧೈರ್ಯದಿಂದ ಎದುರಿಸುವ ಸಾಮರ್ಥ್ಯ ಅಗತ್ಯವಾಗುತ್ತದೆ ಎಂದರು. ಮಾನವರು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಲು ಹೊಸ ಸಾಧನಗಳನ್ನು ಬಳಸುವ ಸ್ವಾಭಾವಿಕ ಆಸೆಯನ್ನು ಹೊಂದಿದ್ದಾರೆ. ಆದರೆ, ಈ ವೇಗವಾದ ಮತ್ತು ಅಸ್ಥಿರ ಬದಲಾವಣೆಗಳ ಪರಿಣಾಮವಾಗಿ ಮಾನಸಿಕ ಆರೋಗ್ಯದ ಮೇಲೆ ದೊಡ್ಡ ಒತ್ತಡ ಉಂಟಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮುಂದುವರಿಯುವ ಮಾನವ ಪ್ರಯತ್ನ ನಿಲ್ಲದು. ಆದರೆ ಅದರ ಪರಿಣಾಮಗಳನ್ನು ಎದುರಿಸುವ ಸಾಮರ್ಥ್ಯವನ್ನು ವ್ಯಕ್ತಿಗಳು ಮತ್ತು ಸಮಾಜಗಳು ಬೆಳೆಸಿಕೊಳ್ಳಬೇಕು. ಶತಮಾನಗಳ ಕಾಲ ನಡೆದ ಹೊರಗಿನ ಆಳ್ವಿಕೆ ನಮ್ಮ ದೇಶದ ಮೌಲ್ಯ ವ್ಯವಸ್ಥೆ ಮತ್ತು ಜೀವನಶೈಲಿ ಮೇಲೆ ಪ್ರಭಾವ ಬೀರಿದೆ. ಸ್ವಾತಂತ್ರ್ಯ ನಂತರ, ನಾವು ನಮ್ಮ ನಾಗರಿಕರ ಜೀವನಮಟ್ಟವನ್ನು ಸುಧಾರಿಸಲು ಸಾಕಷ್ಟು ಪ್ರಯತ್ನಿಸಿದ್ದೇವೆ ಎಂದರು. ಪ್ರಸ್ತುತ ಲಭ್ಯವಿರುವ ತಂತ್ರಜ್ಞಾನಗಳನ್ನು ಮಾತ್ರ ಬಳಸಿಕೊಂಡು ಸಮಸ್ಯೆಗಳನ್ನು ಪರಿಹರಿಸುವುದು ಸಾಕಾಗುವುದಿಲ್ಲ. ಅದು ನಿಮಗೆ ಕೆಲ ಅಡೆತಡೆಗಳನ್ನು ದಾಟಲು ಸಹಾಯ ಮಾಡಬಹುದು, ಆದರೆ ಇತರರಿಗಿಂತ ಹಿಂದೆ ಬೀಳುವ ಸಾಧ್ಯತೆ ಇದೆ. ಆದ್ದರಿಂದ, ನೀವು ನಿಮ್ಮ ಜೀವನಯಾತ್ರೆಯನ್ನು ಹೇಗೆ ಸಾಗಿಸುತ್ತೀರಿ ಎಂಬುದರ ಬಗ್ಗೆ ಆತ್ಮ ವಿಮರ್ಶೆ ಮಾಡಬೇಕೋಳ್ಳಬೇಕಾಗಿದೆ ಎಂದರು. ಈಗ ಎಲ್ಲರೂ ವಿಶ್ವದ ಅನ್ವೇಷಕರೇ ಆಗಿದ್ದಾರೆ. ಈ ಅನ್ವೇಷಣೆಯನ್ನು ಮಾಡಲು ನಿಮ್ಮಲ್ಲಿ ಇರುವ ಸಾಮರ್ಥ್ಯಗಳನ್ನು ತಿಳಿದುಕೊಳ್ಳಬೇಕು. ಮಾನವರಾಗಿ ನಮಗೆ , ಐದು ಜ್ಞಾನೇಂದ್ರಿಯಗಳು , ಐದು ಕರ್ಮೇಂದ್ರಿಯಗಳು ಮತ್ತು ಎರಡು ವಿಧದ ಸ್ಮರಣೆಗಳಿವೆ. ಈ ಎಲ್ಲವು ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದನ್ನು ನೀವು ತಿಳಿದುಕೊಂಡರೆ, ನಿಮ್ಮ ಜೀವನಯಾತ್ರೆಯನ್ನು ಯಶಸ್ವಿಯಾಗಿ ಸಾಗಿಸುವ ನಿಮ್ಮ ಸಾಮರ್ಥ್ಯವನ್ನು ನೀವು ಸ್ವತಃ ನಿರ್ಧರಿಸಬಹುದು ಎಂದರು.

**ಕುಲಪತಿಗಳ ಸ್ವಾಗತ ಭಾಷಣ:** ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎ.ಎಂ ಖಾನ್ ಸ್ವಾಗತ ಭಾಷಣ ಮಾಡಿ ಮಾತನಾಡಿದ ಅವರು ಕರ್ನಾಟಕ ವಿಶ್ವವಿದ್ಯಾಲಯ ನ್ಯಾಕ್ 'ಎ' ಗ್ರೇಡ ಹೊಂದಿದ್ದು, ಶೈಕ್ಷಣಿಕವಾಗಿ ನಾವೀನ್ಯತೆ ಯನ್ನು ಹೊಂದಿದೆ. ವಿಶ್ವವಿದ್ಯಾಲಯವು ಐದು ಸಂಯೋಜಿತ ಕಾಲೇಜುಗಳನ್ನು ಹೊಂದಿದೆ. 235 ಕಾಲೇಜುಗಳು ಕವಿವಿಯ ವ್ಯಾಪ್ತಿಯ ಸಂಯೋಜನೆ.ಗೊಂಡಿವೆ. ಪ್ರತಿವರ್ಷ ಎಂಟು ಸಾವಿರ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಪಡೆಯುತ್ತಾರೆ. ಪ್ರಸಾರಾಂಗ 45 ಪಠ್ಯ ಪುಸ್ತಕಗಳನ್ನು 10 ಇತರೆ ಶೈಕ್ಷಣಿಕ ಮೌಲ್ಯಾಧಾರಿತ ಪ್ರಕಟಣೆಗಳನ್ನು ಪ್ರಕಟಿಸಿದೆ.


ಉದಯವಾಹಿನಿ ಚಿತ್ರ

**ನಿಮ್ಮ ಅನುಭವವೇ ಗುರಿ:** ನೀವು ಪಡೆದಿರುವ ಶಿಕ್ಷಣವು ಈ ಹಂತಕ್ಕೆ ನಿಮ್ಮನ್ನು ಸಿದ್ಧಗೊಳಿಸಬೇಕೆಂದು ನಿರೀಕ್ಷಿಸಲಾಗಿದೆ. ಆದರೆ, ನಿಮ್ಮ ಜೀವನಯಾತ್ರೆಯನ್ನು ಯಶಸ್ವಿಯಾಗಿ ಸಾಗಿಸುವ ನಿಮ್ಮ ಅನುಭವವೇ ಆ ಗುರಿ ಸಾಧನೆಯಾಗಿದೆಯೇ ಇಲ್ಲವೇ ಎಂಬುದನ್ನು ತೋರಿಸುತ್ತದೆ. ಎಂದ ಅವರು ವಾಸ್ತವಿಕವಾಗಿ ನೋಡಿದರೆ, ಭಾರತದಲಷ್ಟೇ ಅಲ್ಲದೆ ಜಾಗತಿಕ ಮಟ್ಟದಲ್ಲಿಯೂ ಶಿಕ್ಷಣವನ್ನು ಸಮರ್ಪಕವಾಗಿ ಒದಗಿಸುವುದು ಒಂದು ದೊಡ್ಡ ಸವಾಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನವು ಸಮಾಜದಲ್ಲಿ ತರುತ್ತಿರುವ ವೇಗವಾದ ಬದಲಾವಣೆಗಳನ್ನು ಗಮನಿಸಿದರೆ, ಮುಂದಿನ ತಲೆಮಾರುಗಳಿಗೆ ಸಮರ್ಪಕ ಶಿಕ್ಷಣ ನೀಡುವುದು ದಿನೇ ದಿನೇ ಕಷ್ಟವಾಗುತ್ತಿದೆ ಎಂಬುದು ಸ್ಪಷ್ಟವಾಗುತ್ತಿದೆ ಎಂದರು.

> ಭಾರತವು ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯನ್ನು ಹೊಂದಿದೆ. ಸ್ವಾತಂತ್ರ್ಯದ ನೂರು ವರ್ಷದಲ್ಲಿ ಭಾರತ ಮೊದಲ ಸ್ಥಾನವನ್ನು ಪಡೆಯುವ ಗುರಿಯನ್ನೂ ಹೊಂದಿದೆ. ಈ ಪ್ರಯಾಣದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಮಹತ್ವದ ಪಾತ್ರ ವಹಿಸುತ್ತಿವೆ. ಎಂದ ಅವರು ಸಂವಹನ, ಪ್ರಸಾರ, ಹವಾಮಾನ ಮೇಲ್ವಿಚಾರಣೆ, ಸಂಪನ್ಮೂಲಗಳ ನಿರ್ವಹಣೆ, ನೇವಿಗೇಶನ್ ಮತ್ತು ವಿಪತ್ತು ನಿರ್ವಹಣೆಯಲ್ಲಿ ಅಂತರಿಕ್ಷ ತಂತ್ರಜ್ಞಾನದ ಬಳಕೆ ಅತ್ಯುತ್ತಮ ಉದಾಹರಣೆಯಾಗಿದೆ. ಅದೇ ರೀತಿ ಅಣುಶಕ್ತಿ ಅಭಿವೃದ್ಧಿ, ಕೋವಿಡ್ ಸಮಸ್ಯೆ ಎದುರಿಸುವುದು, ಡಿಜಿಟಲ್ ಗವರ್ನನ್ಸ್ ವ್ಯವಸ್ಥೆಗಳು–ಇವೆಲ್ಲವೂ ನಾವು ರಾಷ್ಟ್ರವಾಗಿ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೊಂದಿದ್ದೇವೆ ಎಂಬುದನ್ನು ತೋರಿಸುತ್ತವೆ. –ಎ.ಎಸ್.ಕಿರಣಕುಮಾರ

# ಎಚ್.ಐ.ವಿ ತಪಾಸಣೆ, ಜಾಗೃತಿ ಕಾರ್ಯಕ್ರಮಗಳಿಗೆ ವೇಗ: ಡಿ.ಸಿ

• ಉದಯವಾಹಿನಿ, ದಾವಣಗೆರೆ

ಎಚ್.ಐ.ವಿ ಸೋಂಕನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಮತ್ತು ಸೋಂಕಿತರಿಗೆ ಉತ್ತಮ ಚಿಕಿತ್ಸೆ ಒದಗಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಹಾಗೂ ವಿವಿಧ ಸ್ವಯಂಸೇವಾ ಸಂಸ್ಥೆಗಳ ಸಹಯೋಗದಲ್ಲಿ ಮಹತ್ವದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಜಿಲ್ಲೆಯನ್ನು ಎಚ್.ಐ.ವಿ ಮುಕ್ತವಾಗಿಸಲು ಹೆಚ್ಚಿನ ಒತ್ತು ನೀಡುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಜಿ.ಎಂ ಗಂಗಾಧರಸ್ವಾಮಿ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಮಿಷನ್ ಏಡ್ ಸುರಕ್ಷಾ ಅಭಿಯಾನ ಸಭೆಯಲ್ಲಿ ಮಾತನಾಡಿದರು.


ಉದಯವಾಹಿನಿ ಚಿತ್ರ

ಜಿಲ್ಲೆಯ ಎಲ್ಲಾ ಪ್ರಮುಖ ಖಾಸಗಿ ಆಸ್ಪತ್ರೆಗಳು ಮತ್ತು ಆರೋಗ್ಯ ಕೇಂದ್ರಗಳಲ್ಲಿ ಎಚ್.ಐ.ವಿ ತಪಾಸಣೆ ಕಡ್ಡಾಯಗೊಳಿಸಲಾಗಿದೆ. ಪಾಸಿಟಿವ್ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣವೇ ಎಆರ್‌ಟಿ ಉಚಿತ ಚಿಕಿತ್ಸೆಗೆ ಶಿಫಾರಸು ಮಾಡಲು ಸೂಚಿಸಲಾಗಿದೆ' ಎಂದು ಜಿಲ್ಲಾ ಕಾರ್ಯಕ್ರಮ ಅಧಿಕಾರಿ ಡಾ.ಪಿ.ಡಿ. ಮುರಳೀಧರ್ ತಿಳಿಸಿದರು. 'ಲಾರಿ ಚಾಲಕರು ಮತ್ತು ವಲಸೆ ಕಾರ್ಮಿಕರು ಹೆಚ್ಚಾಗಿ ಸೇರುವ ರಸ್ತೆಬದಿಯ ಡಾಬಾಗಳು ಹಾಗೂ ರಾಷ್ಟ್ರೀಯ ಹೆದ್ದಾರಿಯನ್ನು ಸಂಪರ್ಕಿಸುವ ಕಡೆ ವಿಶೇಷ ತಪಾಸಣಾ ಶಿಬಿರಗಳನ್ನು ಆಯೋಜಿಸಲು ಎನ್‌ಜಿಒಗಳಿಗೆ ಜವಾಬ್ದಾರಿ ನೀಡಲಾಗಿದೆ. 4,500 ನೋಂದಾಯಿತ ಲೈಂಗಿಕ ಕಾರ್ಯಕರ್ತೆಯರಿಗೆ ಪ್ರತಿ ಆರು ತಿಂಗಳಿಗೊಮ್ಮೆ ನಿಯಮಿತ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ. ಇದರೊಂದಿಗೆ ಅವರಿಗೆ ಸರ್ಕಾರದ ಸಾಮಾಜಿಕ ಭದ್ರತಾ ಯೋಜನೆಗಳ ಲಾಭವನ್ನು ತಲುಪಿಸಲಾಗುತ್ತಿದೆ' ಎಂದರು.

# ಆಸ್ಪತ್ರೆಯಿಂದ ಕೈದಿ ಪರಾರಿ

• ಉದಯವಾಹಿನಿ, ಬಳ್ಳಾರಿ

ನಗರದ ಬಳ್ಳಾರಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಬಂದಿದ್ದ ಕೈದಿ ನಿನ್ನೆ ಸಂಜೆ ಪರಾರಿಯಾಗಿರುವ ಘಟನೆ ನಡೆದಿದೆ.

ಹರಪನಹಳ್ಳಿ ಮೂಲದ ಆರೋಪಿ ಅಣ್ಣಪ್ಪ ನಿನ್ನೆ ಮಧ್ಯಾಹ್ನ ಜೈಲಿನೊಳಗೆ ಮರದ ಮೇಲಿಂದ ಬಿದ್ದು ಗಾಯ ಮಾಡಿಕೊಂಡಿದ್ದನು. ಕೂಡಲೇ ಆತನನ್ನು ಬಳ್ಳಾರಿ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಪಡೆದು ಬಾತ್ ರೂಂಗೆ ಹೋಗಿದ್ದಾನೆ. ಅಲ್ಲಿ ಬಾತ್ ರೂಂ ಕಿಟಕಿ ಗ್ಲಾಸ್ ಒಡೆದು ಅಲ್ಲಿಂದ ಪರಾರಿಯಾಗಿದ್ದಾನೆ. ಈ ಕುರಿತು ಕೌಲಬಜಾರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬಸವಣ್ಣನವರ ತತ್ವಗಳು ಜೀವನಕ್ಕೆ ದಾರಿದೀಪ

• ಉದಯವಾಹಿನಿ, ಸತ್ತಿಗೇರಿ

ಸಮೀಪದ ಕೋಟೂರ– ಶಿವಾಪುರ ಗ್ರಾಮದ ಬಸವೇಶ್ವರ ಜಾತ್ರಾ ಮಹೋತ್ಸವ ಅಂಗವಾಗಿ ವಿಶ್ವಾಸೋತ್ಸವ ಕಾರ್ಯಕ್ರಮ ವಿಶ್ವಾಸ ಅಣ್ಣ ಅಭಿಮಾನಿ ಬಳಗದ ಆಶ್ರಯದಲ್ಲಿ ಗೋಕಾಕ ಫಾಲ್ಸ್ನ ಗುರು ರಾಘವೇಂದ್ರ ಮೆಲೋಡಿಸ್ ವತಿಯಿಂದ ಹಾಸ್ಯ– ರಸಮಂಜರಿ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ವಿಶ್ವಾಸ್ ವೈದ್ಯ, ಬಸವಣ್ಣನವರ ತತ್ವ ಆದರ್ಶಗಳು ನಮ್ಮ ಜೀವನಕ್ಕೆ ದಾರಿದೀಪ. ಅಂತಹ ಮಹಾಪುರುಷರ ಸ್ಮರಣೆ ಜೊತೆಗೆ ಹಾಸ್ಯ ಕಾರ್ಯಕ್ರಮದ ಮೂಲಕ ಗ್ರಾಮಸ್ಥರೆಲ್ಲ ಒಗ್ಗೂಡಿ ನಲಿದ ಕ್ಷಣಗಳು ಮನಸ್ಸಿಗೆ ಮುದ ನೀಡಿದವು' ಎಂದರು. ಸಚಿವ ಸತೀಶ ಜಾರಕಿಹೊಳಿ ಅವರ ಆಪ್ತ ಸಹಾಯಕ ಅರವಿಂದ ಕಾರ್ಚಿ ಮಾತನಾಡಿದರು. ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಮಹಾದೇವಪ್ಪ ನಿಂ. ಗಡ್ಡಿ ಅಧ್ಯಕ್ಷತೆ ವಹಿಸಿದ್ದರು. ಯರಗಟ್ಟಿಯ ಎ.ಪಿ.ಎಂ.ಸಿ ಅಧ್ಯಕ್ಷ ನೀಲಕಂಠ ಶೀದ್ದಬಸನ್ನವರ ಹಾಗೂ ಸತ್ತಿಗೇರಿಯ ಕಾಂಗ್ರೆಸ್ ಯುವ ಮುಖಂಡರಾದ ಪ್ರಕಾಶ ವಾಲಿ, ಬೆಳಗಾವಿಯ ಕೆ.ಎಂ.ಎಫ್.ನಿರ್ದೇಶಕರಾದ ಶಂಕರ ಇಟ್ನಾಳ, ಗುತ್ತಿಗೆದಾರ ಮಹಾಂತೇಶ ಉರಬಿನವರ, ಚಾಯಪ್ಪ ಹುಂಡೇಕಾರ ಇತರರು ಇದ್ದರು.

# ಐದಂತಸ್ತಿನ ಅಕ್ರಮ ಕಟ್ಟಡ ತೆರವು

• ಉದಯವಾಹಿನಿ, ಬೆಳಗಾವಿ

ನಗರದ ಮಾರುತಿ ಗಲ್ಲಿಯಲ್ಲಿ ನಿಯಮ ಬಾಹಿರವಾಗಿ ಕಟ್ಟಿದ್ದ ವಾಣಿಜ್ಯ ಕಟ್ಟಡವನ್ನು ಮಹಾನಗರ ಪಾಲಿಕೆ ಅಧಿಕಾರಿಗಳು ಗುರುವಾರ ತೆರವುಗೊಳಿಸಲು ಆರಂಭಿಸಿದರು. ಶಿವಾಜಿರಾವ್ ಹೈಬತ್ತಿ ಎಂಬುವವರಿಗೆ ಸೇರಿದ ವಾಣಿಜ್ಯ ಕಟ್ಟಡ ನಿರ್ಮಾಣದಲ್ಲಿ ನಿಯಮ ಪಾಲನೆ ಮಾಡಿಲ್ಲ ಎಂದು ಶರೀಫ್ ಮುಲ್ಲಾ ಅವರು ಪಾಲಿಕೆ ಆಯುಕ್ತರಿಗೆ ಹಾಗೂ ಲೋಕಾಯುಕ್ತರಿಗೆ ದೂರು ನೀಡಿದ್ದರು. ಈ ಬಗ್ಗೆ ವಿಚಾರಣೆ ಮಾಡಿದ್ದ ಲೋಕಾಯುಕ್ತ ಅಧಿಕಾರಿಗಳು, ಒಂದು ವಾರದಲ್ಲಿ ಅನಧಿಕೃತ ಕಟ್ಟಡದ ತೆರವುಗೊಳಿಸುವ ಕ್ರಮದ ಬಗ್ಗೆ ಮಾಹಿತಿ ನೀಡಲು ಆಯುಕ್ತರಿಗೆ ಇತ್ತೀಚೆಗೆ ಸೂಚನೆ ನೀಡಿದ್ದರು. ಹೀಗಾಗಿ ಪಾಲಿಕೆ ಅಕಾರಿಗಳು, ಮೂರು ಜೆಸಿಬಿ ಯಂತ್ರಗಳಿಂದ ಮಾರುತಿ ಗಲ್ಲಿಯಲ್ಲಿನ ಐದು ಮಹಡಿಯ ವಾಣಿಜ್ಯ ಕಟ್ಟಡದ ತೆರವು ಕಾರ್ಯಾಚರಣೆಗೆ ಮುಂದಾದರು. ಈ ವೇಳೆ ಕೆಲ ವ್ಯಾಪಾರಸ್ಥರು, ಕಟ್ಟಡದ ಮಾಲೀಕರು ಸೇರಿಕೊಂಡು ಕಟ್ಟಡ ತೆರವುಗೊಳಿಸದಂತೆ ಪಾಲಿಕೆ ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿದರು. ಲೋಕಾಯುಕ್ತ ಅಧಿಕಾರಿಗಳ ಹಾಗೂ ಪಾಲಿಕೆ ಆಯುಕ್ತರ ಆದೇಶದಂತೆ ತೆರವುಗೊಳಿಸಲಾಗುವುದು ಎಂದು ಪಾಲಿಕೆ ಅಕಾರಿಗಳು ಕಾರ್ಯಾಚರಣೆ ಮುಂದುವರಿದರು. ಗುರುವಾರ ವಾಣಿಜ್ಯ ಕಟ್ಟಡದ ಸುತ್ತಲಿನ ಅತಿಕ್ರಮದ ಭಾಗವನ್ನು ಮಾತ್ರ ತೆರವುಗೊಳಿಸಲಾಗಿದೆ. ಶೀಘ್ರವಾಗಿ ಆಯುಕ್ತರ ಸೂಚನೆಯಂತೆ ಇಡೀ ಕಟ್ಟಡವನ್ನು ತೆರವುಗೊಳಿಸಲು ಕ್ರಮ ವಹಿಸಲಾಗುವುದು ಎಂದು ಪಾಲಿಕೆಯ ಇಂಜಿನಿಯರ್ ತಿಳಿಸಿದರು.

# ಸಾಗುವಳಿ ಜಮೀನಿಗೆ ಆರ್‌ಟಿಸಿ ಕೊಡಿ

• ಉದಯವಾಹಿನಿ, ಯಲ್ಲಾಪುರ

ಕಳೆದ 18 ವರ್ಷಗಳಿಂದ ಅರಣ್ಯದಲ್ಲಿ ವಾಸಿಸಿ. ಜಮೀನು ಸಾಗುವಳಿ ಮಾಡಿಕೊಂಡು ಬರುತ್ತಿರುವ ನಮಗೆ ಹಕ್ಕುಪತ್ರ ನೀಡಲಾಗಿದೆಯಾದರೂ ಆರ್‌ಟಿಸಿ ಹೊಂದಿರುವ ರೈತರಿಗೆ ಕೊಡಮಾಡುವ ಯಾವುದೇ ಸೌಲಭ್ಯ ದೊರೆಯುತ್ತಿಲ್ಲ ಎಂದು ಕರ್ನಾಟಕ ರಾಜ್ಯ ಸಿದ್ದಿ ಬುಡಕಟ್ಟು ಜನಪರ ಸಂಘದ ರಾಜ್ಯಾಧ್ಯಕ್ಷ ಬೆನಿತ್ ಅಂತೋನಿ ಸಿದ್ದಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಗುವಳಿ ಮಾಡಿದ ಜಮೀನಿನ ಪ್ರಮಾಣಕ್ಕೂ ಜಿಪಿಎಸ್ ನಲ್ಲಿ ತೋರಿಸಲಾದ ಜಮೀನಿನ ಪ್ರಮಾಣಕ್ಕೂ ವ್ಯತ್ಯಾಸ ಇದೆ. ಈ ವ್ಯತ್ಯಾಸವನ್ನು ಸರಿಪಡಿಸಿ ಆರ್‌ಟಿಸಿ ಮಾಡಿಕೊಡುವಂತೆ ಸರಕಾರವನ್ನು ಒತ್ತಾಯಿಸುತ್ತಲೇ ಬಂದಿದ್ದೇವೆ. ಆದರೆ ಇದುವರೆಗೂ ಯಾವುದೇ ಕ್ರಮ ಆಗಿಲ್ಲ ಎಂದು ಅವರು ಆರೋಪಿಸಿದರು. ಆರ್‌ಟಿಸಿ ನೀಡದ ಕಾರಣ ರೈತರಿಗೆ ಸಿಗಬೇಕಾದ ಬೆಳೆಸಾಲ, ಮಾಧ್ಯಮಿಕ ಸಾಲ ಮುಂತಾದ ಅನೇಕ ಸೌಲಭ್ಯಗಳಿಂದ ವಂಚಿತರಾಗಿದ್ದೇವೆ. ಈ ನಿಟ್ಟಿನಲ್ಲಿ ಸರಕಾರ ಆದಷ್ಟು ಶೀಘ್ರ ಕ್ರಮ ಕೈಗೊಳ್ಳಬೇಕು. ಕಾನೂನಿನಲ್ಲಿ ಅವಕಾಶ ಇರುವಂತೆ ನಾವು ಸಾಗುವಳಿ ಮಾಡಿದ ಎಲ್ಲಾ ಜಮೀನಿನ ಜಿಪಿಎಸ್ ಮಾಡಿ ಆರ್‌ಟಿಸಿ ನೀಡಬೇಕು ಎಂದರು.

ಕರ್ನಾಟಕ ರಾಜ್ಯ ಸಿದ್ದಿ ಬುಡಕಟ್ಟು ಜನಪರ ಸಂಘದ ಕಾರ್ಯಾಧ್ಯಕ್ಷ ಲಾರೆನ್ಸ್ ಕೈತಾನ ಸಿದ್ದಿ ಮಾತನಾಡಿ, ಸರ್ಕಾರಿ ಉದ್ಯೋಗದಲ್ಲಿ ಪರಿಶಿಷ್ಟರಿಗೆ ಮೀಸಲಾತಿ ಕಲ್ಪಿಸಲಾಗಿದ್ದರೂ ಅದು ಸಿದ್ದಿ ಸಮುದಾಯದವರಿಗೆ ಸಿಗುತ್ತಿಲ್ಲ, ಕಾರಣ ಸಿದ್ದಿ ಸಮುದಾಯದವರಿಗೆ ಪ್ರತ್ಯೇಕ ಒಳ ಮೀಸಲಾತಿ ಕಲ್ಪಿಸಬೇಕು ಎಂದರು. ಕರ್ನಾಟಕ ರಾಜ್ಯ ಸಿದ್ದಿ ಬುಡಕಟ್ಟು ಜನಪರ ಸಂಘದ ಗೌರವಾಧ್ಯಕ್ಷ ಜಾನ್ ಕೊಸ್ತಾಂವ್ ಬಿಳ್ಳಿಕರ, ಪ್ರಮುಖರಾದ ಅಗಸ್ತಿನ್ ಜುಜೆ ಸಿದ್ದಿ, ಶಂಕರ ನಾರಾಯಣ ಸಿದ್ದಿ, ಸಿದ್ದಿ ಇದ್ದರು.

# ಪರಿಶ್ರಮದಿಂದ ಗುರಿ ತಲುಪಲು ಸಾಧ್ಯ

• ಉದಯವಾಹಿನಿ, ಗುಳೇದಗುಡ್ಡ

ಪ್ರತಿಯೊಬ್ಬರೂ ಜೀವನದಲ್ಲಿ ಒಂದು ಗುರಿ ಇಟ್ಟುಕೊಳ್ಳಬೇಕು. ಆ ಗುರಿಯೆಡೆಗೆ ಪರಿಶ್ರಮದಿಂದ ಕಾರ್ಯ ನಿರ್ವಹಿಸಿದಾಗ ಪ್ರತಿಫಲ ಸಿಕ್ಕೆ ಸಿಗುತ್ತದೆ. ಗುರಿ ಇದ್ದರೆ ಸಾಧನೆ ಸಾಧ್ಯವಾಗುತ್ತದೆ' ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ ಬಡಿಗೇರ ಹೇಳಿದರು. ಪಟ್ಟಣದ ತಾಪಂ ಕಾರ್ಯಾಲಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾ.ಪಂ.ಗಳಲ್ಲಿ 2025–26ನೇ ಸಾಲಿನಲ್ಲಿ ಕರ ವಸೂಲಿ, ನರೇಗಾ ಹಾಗೂ ಇನ್ನಿತರ ವಿಷಯಗಳಲ್ಲಿ ಸಾಧನೆ ಮಾಡಿರುವ ಅಧಿಕಾರಿ ಮತ್ತು ಸಿಬ್ಬಂದಿಗೆ ಅಭಿನಂದನೆ ಸಲ್ಲಿಸುವ ಹಾಗೂ ಪ್ರಶಂಸನಾ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗುಳೇದಗುಡ್ಡ ತಾ.ಪಂ ಜಿಲ್ಲೆ, ರಾಜ್ಯಮಟ್ಟದಲ್ಲಿ ಹೆಸರು ಮಾಡಿದೆ. ತಾಪಂ ವ್ಯಾಪ್ತಿಯ ಕಟಗೇರಿ ಗ್ರಾ.ಪಂ ಶ್ರೀ ಚಾಮುಂಡೇಶ್ವರಿ ಸಂಜೀವಿನಿ ಗ್ರಾಪಂ ಮಹಿಳಾ ಒಕ್ಕೂಟವು ಕೇಂದ್ರ ಪುರಸ್ಕೃತ ಆತ್ಮ ನಿರ್ಭರ ಸಂಘಟನಾ ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆಯಿತು. ಅದೇ ಕಟಗೇರಿ ಗ್ರಾ.ಪಂ 2024–25 ನೇ ಸಾಲಿನ ಗಾಂಧಿ ಗ್ರಾಮ ಪುರಸ್ಕಾರ ಪಡೆಯಿತು. 2025–26ನೇ ಸಾಲಿನಲ್ಲಿ ಗುಳೇದಗುಡ್ಡ ತಾ.ಪಂ ವಿವಿಧ ವಿಭಾಗಗಳಲ್ಲಿ ಜಿಲ್ಲೆಗೆ ಪ್ರಥಮ ಬಂದಿದೆ. ಒಟ್ಟು 12 ಗ್ರಾಪಂ ತೆರಿಗೆ ಸಂಗ್ರ ನೂರಕ್ಕೆ ನೂರರಷ್ಟು ಸಂಗ್ರಹಿಸಿದ್ದಾರೆ. ವಸತಿ ಯೋಜನೆ ಅಡಿಯಲ್ಲಿ 12 ಗ್ರಾಪಂಗಳು ಪ್ರಗತಿ ಸಾಧಿಸಿವೆ ಎಂದರು.

ನರೇಗಾ ಉದ್ಯೋಗ ಖಾತ್ರಿ, ಯೋಜನೆಯ ಸಹಾಯಕ ನಿರ್ದೇಶಕ ರಾಮಚಂದ್ರ ಮೇತ್ರಿ ಪ್ರಾಸ್ತಾವಿಕವಾಗಿ ಮಾತನಾಡಿ, ನರೇಗಾ ಯೋಜನೆಯಡಿ ಒಟ್ಟು 4 ಲಕ್ಷ 50 ಸಾವಿರ ಮಾನವ ದಿನಗಳ ಗುರಿಗೆ ಎದುರಾಗಿ ಒಟ್ಟು 3 ಲಕ್ಷ 9 ಸಾವಿರ ಮಾನವ ದಿನಗಳ ಸೃಜನೆ ಮಾಡಿ ಗುಳೇದಗುಡ್ಡ ತಾ.ಪಂ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದೆ. ಎಸ್.ಸಿ.ಪಿ. ಕೂಲಿಕಾರರಿಗೆ ಕೆಲಸ ನೀಡುವಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದೆ ಎಂದರು. ಪಿಡಿಒ ಗೂಳಪ್ಪ ಹೊರಟ್ಟಿ, ಕಾರ್ಯದರ್ಶಿ ಶಂಕರ ಹುಲ್ಯಾಳ, ಸಂಗ ಮೇಶ ವಂದಾಲ, ಸಂತೋಷ ಲೋಕೂರ, ಶಿವಾನಂದ ಬನ್ನಿ ತಮ್ಮ ಅನುಭವಗಳನ್ನು ಹಂಚಿಕೊಂಡರು. 12 ಗ್ರಾಪಂಗಳ ಪಿಡಿಒ, ಕಾರ್ಯದರ್ಶಿಗಳು, ವಿವಿಧ ಶಾಖೆಗಳ ಸಿಬ್ಬಂದಿಗೆ ಪ್ರಶಂಸನಾ ಪತ್ರ ನೀಡಿ ಗೌರವಿಸಿದರು. ಶೇಖರ ಅಂಗಡಿ, ಲಕ್ಷ್ಮಣ ಶಾಂತಗೇರಿ, ರಾಜನಾಳ ಇದ್ದರು.

# ಸರ್ಕಾರದಿಂದ ಕ್ರೀಡಾಪಟುಗಳಿಗೆ ನೆರವು: ಕೆ. ಸೀತಾರಾಮ ರೈ

• ಉದಯವಾಹಿನಿ ಪುತ್ತೂರು

ಸವಣೂರಿನ ವಿದ್ಯಾರಶ್ಮಿ ವಿದ್ಯಾಲಯದ ಕ್ರೀಡಾಂಗಣದಲ್ಲಿ 2025–26 ನೇ ಶೈಕ್ಷಣಿಕ ವರ್ಷದ ಕ್ರೀಡಾಕೂಟ ನಡೆಯಿತು. ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಅಡ್ವೋಕೇಟ್ ಅಶ್ವಿನ್ ಎಲ್. ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಚಾಲಕ ಸವಣೂರು ಕೆ. ಸೀತಾರಾಮ ರೈ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿ, ಇಂದಿನ ದಿನಗಳಲ್ಲಿ ಕ್ರೀಡಾಪಟುಗಳಿಗೆ ಉಜ್ವಲ ಭವಿಷ್ಯವಿದ್ದು, ಸರ್ಕಾರವೂ ಕೂಡ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಕಾರ್ಯವನ್ನು ಮಾಡುತ್ತಿದೆ ಎಂದರು. ಅತಿಥಿಗಳಾದ ಬಾಲಕೃಷ್ಣ ಬಸ್ತಿ ಅವರು ಕ್ರೀಡೆಯಲ್ಲಿ ಸೋಲು–ಗೆಲುವು ಇದ್ದದ್ದೆ ಒಬ್ಬ ಸೋತಾಗ ಮಾತ್ರ ಒಬ್ಬ ಗೆಲ್ಲಲು ಸಾಧ್ಯ ಎನ್ನುವುದರ ಜೊತೆಗೆ ಸೋತಾಗ ಕುಗ್ಗದೆ, ಗೆದ್ದಾಗ ಹಿಗ್ಗದೆ ಇರುವವನೇ ನಿಜವಾದ ಕ್ರೀಡಾಪಟು ಎಂದರು. ಸಂಸ್ಥೆಯ ಕ್ರೀಡಾಪಟುಗಳಾದ ಕೌಶಿಕ್, ಚತುರ್ಥ್, ಕಲ್ಪನಾ, ರಕ್ಷಿತ್, ಪ್ರತೀಕ್ಷಾ ಅವರ ನೇತೃತ್ವದಲ್ಲಿ ಸವಣೂರಿನ ಪದ್ಮಾವತಿ ಅಮ್ಮನವರ ಬಸದಿಯಲ್ಲಿ ಪೂಜೆಗೊಂಡ ಕ್ರೀಡಾಜ್ಯೋತಿಯು ಆಗಮಿಸಿತು. ಕ್ರೀಡಾ ಜ್ಯೋತಿಯನ್ನು ಮುಖ್ಯ ಅತಿಥಿಗಳಾಗಿದ್ದ ಬಾಲಕೃಷ್ಣ ಬಸ್ತಿ ಅವರ ಕೈಗೆ ಹಸ್ತಾಂತರಿಸಲಾಯಿತ್ತು. ಶಾಂತಿಯ ಸಂಕೇತವಾದ ಪಾರಿವಾಳವನ್ನು ನಿಸರ್ಗಕ್ಕೆ ಹಾರಿಸಿ ಬಿಡಲಾಯಿತು. ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಟ್ರಸ್ಟಿಗಳಾದ ರಶ್ಮಿ ಅಶ್ವಿನ್ ಶೆಟ್ಟಿ, ಸಂಸ್ಥೆಯ ಪ್ರಾಂಶುಪಾಲೆ ರಾಜಲಕ್ಷ್ಮೀ ಎಸ್ ರೈ, ವಿದ್ಯಾರಶ್ಮಿ ವಿದ್ಯಾಲಯದ ಪ್ರಾಂಶುಪಾಲೆ ಶಶಿಕಲಾ ಎಸ್ ಆಳ್ವ, ಕ್ರೀಡಾ ಜೊತೆ ಕಾರ್ಯದರ್ಶಿ ಸರಸ್ವತಿ ಇದ್ದರು. ಕ್ರೀಡಾ ಕಾರ್ಯದರ್ಶಿ ಪವನ್ ಎಚ್.ಎಸ್ ಕ್ರೀಡಾಪಟುಗಳಿಗೆ ಪ್ರತಿಜ್ಞೆ ಬೋಧಿಸಿದರು.


ಉದಯವಾಹಿನಿ ಚಿತ್ರ

# ಅಧಿಕ ಉಷ್ಣಾಂಶಕ್ಕೆ ಮತ್ಸ ವಲಸೆ: ಸಾಂಪ್ರದಾಯಿಕ ಮೀನುಗಾರಿಕೆಗೆ ಕರಿನೆರಳು

• ಉದಯವಾಹಿನಿ, ಕಾರವಾರ

ಬಿಸಿಲ ಝಳಕ್ಕೆ ಜನರಷ್ಟೇ ಅಲ್ಲ, ಸಮುದ್ರದ ಒಳಗಿರುವ ಮೀನುಗಳೂ ಬೆದರಿವೆ. ಅವು ಸೆಕೆ ತಾಳಲಾರದೆ ಆಳ ಸಮುದ್ರಕ್ಕೆ ವಲಸೆ ಹೋಗುತ್ತಿರುವ ಪರಿಣಾಮ ಮೀನುಗಾರಿಕೆ ಚಟುವಟಿಕೆ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.

ಜಿಲ್ಲೆಯ ವ್ಯಾಪ್ತಿಯಲ್ಲಿ ಕೆಲ ದಿನಗಳಿಂದ ಸರಾಸರಿ ಉಷ್ಣಾಂಶ 36ರಿಂದ 38 ಡಿಗ್ರಿ ಸೆಲ್ಸಿಯಸ್ ತಲುಪಿದೆ. ಅರಬ್ಬಿ ಸಮುದ್ರ ತೀರ ಪ್ರದೇಶದಲ್ಲಿ ಶಾಖ ಹೆಚ್ಚಿದೆ. ಇದರಿಂದ ಕಡಲತೀರಕ್ಕೆ ಸಮೀಪದಲ್ಲಿರುವ ಮೀನುಗಳು ಹಲವು ನಾಟಿಕಲ್ ಮೈಲು ದೂರ ವಲಸೆ ಹೋಗಿವೆ ಎಂಬುದಾಗಿ ಮೀನುಗಾರರು ಹೇಳುತ್ತಿದ್ದಾರೆ.

ಬಿಸಿಲ ಝಳದಿಂದ ಮತ್ಸಕ್ಷಾಮ ಉಂಟಾಗಿದೆ. ನಿತ್ಯ ಬೈತಕೋಲ, ಮುದಗಾ ಮೀನುಗಾರಿಕೆ ಬಂದರುಗಳಿಂದ ಶೇ 85ರಷ್ಟು ಬೋಟ್‌ಗಳು ಮೀನುಗಾರಿಕೆಗೆ ತೆರಳುತ್ತಿದ್ದವು. ಆದರೆ, ಈಗ ಅರ್ಧದಷ್ಟು ಸಂಖ್ಯೆಯ ಬೋಟುಗಳು ಲಂಗರು ಹಾಕಿವೆ. ಕೆಲವೇ ಬೋಟ್‌ಗಳು ಮಾತ್ರ ಆಳ ಸಮುದ್ರಕ್ಕೆ ತೆರಳುತ್ತಿವೆ ಎಂದು ಪರ್ಸಿನ್ ಬೋಟ್ ಮಾಲೀಕ ಅಭಿಷೇಕ ದುರ್ಗೇಕರ ಹೇಳಿದರು.

ಕಡಲತೀರಕ್ಕೆ ಸಮೀಪದಲ್ಲಿ ಮೀನುಗಾರಿಕೆ ನಡೆಸುವ ನಾಡದೋಣಿಗಳು ಕೂಡ ಮೀನುಗಾರಿಕೆಗೆ ತೆರಳುವುದು ಕಡಿಮೆ ಆಗಿದೆ. ತೆರಳಿದರೂ ಸಿಗುವ ಮೀನಿನ ಪ್ರಮಾಣ ಕಡಿಮೆ ಇದೆ' ಎಂಬುದಾಗಿ ನಾಡದೋಣಿ ಮಾಲೀಕ ಗೌರೀಶ ಉಳ್ವೇಕರ ತಿಳಿಸಿದರು. ಸಮುದ್ರ ತೀರಕ್ಕೆ ಸಮೀಪದ ಪ್ರದೇಶದಲ್ಲಿನ ಬಂಗುಡೆ, ತಾರ್ಲೆ, ಸೊಂದಾಳೆ ಸೇರಿದಂತೆ ನಾನಾ ಬಗೆಯ ಮೀನುಗಳು 22ರಿಂದ 28 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ತಡೆದುಕೊಳ್ಳಬಲ್ಲವು. ಉಷ್ಣತೆ ಅದಕ್ಕಿಂತ ಹೆಚ್ಚಾದರೆ ಅವು ತಂಪು ಅರಸುತ್ತ ಆಳ ಸಮುದ್ರದತ್ತ ವಲಸೆ ಹೋಗುತ್ತವೆ. ಗರಿಷ್ಠ 30ರಿಂದ 40 ನಾಟಿಕಲ್ ಮೈಲು ದೂರದವರೆಗೂ ಅವು ಸಾಗುತ್ತವೆ. ಸಾಂಪ್ರದಾಯಿಕ ದೋಣಿಗಳು ಅಷ್ಟು ದೂರಕ್ಕೆ ಸಾಗಲಾರದು.

ಯಾಂತ್ರೀಕೃತ ದೋಣಿಗಳು ದೂರ ಸಾಗಿದರೂ ತೀರಾ ಆಳದವರೆಗಿನ ಮೀನು ಹಿಡಿಯುವುದು ಕಷ್ಟವಾಗಬಹುದು ಎಂದು ಕಡಲ ಜೀವಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಮುಖ್ಯಸ್ಥ ಶಿವಕುಮಾರ ಹರಗಿ ತಿಳಿಸಿದರು.


ಉದಯವಾಹಿನಿ ಚಿತ್ರ

# ಹಾವೇರಿ–ಶಿರಸಿ ರಸ್ತೆ ಕಾಮಗಾರಿ; 30ರ ಗಡುವು

• ಉದಯವಾಹಿನಿ ಹಾವೇರಿ

ಸಾಗರ ಮಾಲಾ ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡಿರುವ ಹಾವೇರಿ–ಶಿರಸಿ ಸಂಪರ್ಕ ಕಲ್ಪಿಸುವ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಏಪ್ರಿಲ್ 30ರೊಳಗಾಗಿ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು' ಎಂದು ಸಂಸದ ಬಸವರಾಜ ಬೊಮ್ಮಾಯಿ ಅವರು ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಖಡಕ್ ಸೂಚನೆ ನೀಡಿದರು.

ನಗರದ ಹಳೇ ಪಿ.ಬಿ. ರಸ್ತೆ ಬಳಿ ಇರುವ ಲೋಕಸಭಾ ಸದಸ್ಯರ ಜನಸಂಪರ್ಕ ಕಚೇರಿಯಲ್ಲಿ ಗುರುವಾರ 'ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳ ಸಭೆ' ನಡೆಸಿದ ಅವರು, ಕಾಮಗಾರಿ ಚುರುಕುಗೊಳಿಸುವಂತೆ ಹೇಳಿದರು. ಹಾನಗಲ್‌ನ ನಾಲ್ಕರ ಕ್ರಾಸ್‌ನಿಂದ ಸಮ್ಮಸಗಿವರೆಗಿನ ರಾಷ್ಟ್ರೀಯ ಹೆದ್ದಾರಿ ಸಂಪೂರ್ಣ ಹಾಳಾಗಿದೆ. ಅದನ್ನು ವಾಹನ ಸಂಚಾರಕ್ಕೆ ಸುಗಮಗೊಳಿಸಬೇಕು. ಹಾವೇರಿಯಿಂದ ಹಾನಗಲ್ ಸಂಪರ್ಕಿಸುವ ರಸ್ತೆಯು ಅಲ್ಲಲ್ಲಿ ಹಾಳಾಗಿದ್ದು, ಅದನ್ನು ಸರಿಪಡಿಸಬೇಕು' ಎಂದರು.

'ಯೋಜನೆಯ ಕಾಮಗಾರಿಯನ್ನು ವಿಳಂಬ ಮಾಡದೇ ಇದೇ ತಿಂಗಳು ಮುಗಿಸಬೇಕು. ರಸ್ತೆಯನ್ನು ವಾಹನ ಸಂಚಾರಕ್ಕೆ ಸುಗಮಗೊಳಿಸಬೇಕು. ನಾನು ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. ನನ್ನ ಜೊತೆಗೆ ಆಟ ಆಡಬೇಡಿ. ಕೆಲಸ ಸರಿಯಾಗಿ ಮಾಡದಿದ್ದರೆ ಹತ್ತು ವರ್ಷಗಳವರೆಗೆ ಕಪ್ಪು ಪಟ್ಟಿಗೆ ಸೇರಿಸುತ್ತೇನೆ. ನನಗೆ ಕೆಲಸ ಆಗಬೇಕು. ಬೇರೆ ರಾಜಕಾರಣಿಯಂತೆ ಅಲ್ಲ' ಎಂದು ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದರು. 'ಈಗಾಗಲೇ ಮಾಡಿರುವ 5 ಕಿ.ಮೀ ರಸ್ತೆಯಲ್ಲಿ ಸುಗಮವಾಗಿ ವಾಹನ ಸಂಚರಿಸುವಂತೆ ಮಾಡಬೇಕು. ಉಳಿದ 3 ಕಿ.ಮೀ ರಸ್ತೆಯನ್ನು ತ್ವರಿತವಾಗಿ ಮಾಡಬೇಕು. ಕಂತ್ರಿಕೊಪ್ಪದಿಂದ ಸಮ್ಮಸಗಿವರೆಗಿನ ರಸ್ತೆ ಸಂಪೂರ್ಣ ಹಾಳಾಗಿದೆ. ಅಕ್ಕಿಆಲೂರು ಬಸ್ ನಿಲ್ದಾಣದ ಎದುರಿಗೆ ರಸ್ತೆಯಲ್ಲಿ ನೀರು ನಿಲ್ಲುವುದನ್ನು ಸರಿಪಡಿಸಬೇಕು. ಸದ್ಯದಲ್ಲೇ ನಾನೇ ಕಾಮಗಾರಿ ವೀಕ್ಷಣೆಗೆ ಬರುತ್ತೇನೆ' ಎಂದು ಹೇಳಿದರು. ಕಾಮಗಾರಿ ಮಾಹಿತಿ ನೀಡಿದ ಅಧಿಕಾರಿಗಳು, 'ಹಾನಗಲ್ ನಾಲ್ಕರ ಕ್ರಾಸ್‌ನಿಂದ ಹನುಮನಕೊಪ್ಪವರೆಗಿನ 4.5 ಕಿ.ಮೀ. ರಸ್ತೆ ಕಾಮಗಾರಿ ಮುಗಿದಿದೆ. ಹನುಮನಕೊಪ್ಪದಿಂದ ಬ್ಯಾಲಹಳ್ಳಿವರೆಗಿನ 2.5 ಕಿ.ಮೀ.ವರೆಗೆ ಕೆಲಸ ಮುಗಿದಿದೆ. ಸಬ್ ಗ್ರೇಡ್ ಮಾಡಿ ಡಿಬಿಎಂ ಮುಗಿಸಲು 25 ದಿನ ಬೇಕು. ಬಾಲಹಳ್ಳಿಯಿಂದ ಕತ್ರಿಕೊಪ್ಪ 1 ಕಿ.ಮೀ.ವರೆಗೆ ಡಿಬಿಎಂ ಮಾಡಿ, ಇದೇ ಮೇ 10ರ ನಂತರ ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದು' ಎಂದರು. ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ, ಪ್ರಾಧಿಕಾರದ ಹೊನ್ನಾವರ ವಿಭಾಗದ ಯೋಜನಾ ನಿರ್ದೇಶಕ ಎಂ. ಶಿವಕುಮಾರ, ಇಂಜಿನಿಯರ್ ಅಮರ್ ಇದ್ದರು.



# ಸಿಮೆಂಟ್ ಟ್ಯಾಂಕರ್ ಲಾರಿ ಸಾರಿಗೆ ಬಸ್ ಮತ್ತು ಆಟೋ ಮೂರರ ಮಧ್ಯೆ ಮುಖಾಮುಖಿ ಭೀಕರ ಅಪಘಾತ: 10ಜನರಿಗೆ ಗಂಭೀರ ಗಾಯ

• ಉದಯವಾಹಿನಿಚಿಂಚೋಳಿ.

ತಾಲ್ಲೂಕಿನ ಪೋಲಕಪಳ್ಳಿ ಕುಂಚಾವರಂ ಮಧ್ಯೆ ಪೋಲಕಪಳ್ಳಿ ತಾಂಡಾದ ಹತ್ತಿರ ಸಾರಿಗೆ ಬಸ್,ಸಿಮೆಂಟ್ ತುಂಬಿದ ಲಾರಿ ಮತ್ತು ಆಟೋ ಮಧ್ಯೆ ಮುಖಾಮುಖಿ ಡಿಕ್ಕಿಯಾಗಿ 13ಜನರಲ್ಲಿ 10ಜನರಿಗೆ ಗಂಭೀರ ಘಾಯಗಳಾಗಿವೆ ಎಂದು ಪ್ರಾಥಮಿಕ ತಪಾಸಣೆ ವರದಿಯಲ್ಲಿ ತಿಳಿದು ಬಂದಿದೆ ಎಂದು ಟಿಹೆಚ್‌ಓ ಡಾ.ಮಹ್ಮದ್ ಗಫಾರ್ ತಿಳಿಸಿದ್ದಾರೆ.

ತಾಂಡುರ್ ಮತ್ತು ಚಿಂಚೋಳಿ ರಾಷ್ಟ್ರೀಯ ಹೆದ್ದಾರಿ ಮಾರ್ಗದಲ್ಲಿ ಶುಕ್ರವಾರ ಸಂಜೆ ಸಿಮೆಂಟ್ ತುಂಬಿದ ಲಾರಿ ಟ್ಯಾಂಕರ್ ಮತ್ತು ಚಿಂಚೋಳಿಯ ಸಾರಿಗೆ ಇಲಾಖೆ ಬಸ್ ಹಾಗೂ ಆಟೋ ಮಧ್ಯೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಒಟ್ಟು 10ಜನರಿಗೆ ಗಂಭೀರ ಘಾಯಗಳಾಗವೆ.

ತೆಲಂಗಾಣದ ತಾಂಡೂರ ಕಡೆಯಿಂದ ಸಿಮೆಂಟ್ ತುಂಬಿದ ಲಾರಿ ಮಧ್ಯೆ ಆಟೋ ಡಿಕ್ಕಿ ತಪ್ಪಿಸಲು ಹೋಗಿ ಎದುರಿಗೆ ಬರುತ್ತಿದ್ದ ಚಿಂಚೋಳಿ ಘಟಕಕ್ಕೆ ಸೇರಿದ ಸಾರಿಗೆ ಬಸ್ಸಿಗೆ ಡಿಕ್ಕಿ ಹೊಡೆದ ಪರಿಣಾಮವಾಗಿ ಬಸ್ಸಿನಲ್ಲಿದ್ದ ಒಂಬತ್ತು ಪ್ರಯಾಣಿಕರ ಸ್ಥಿತಿ ಗಂಭೀರವಾಗಿದ್ದಾರೆ,ಬಸ್ ತಾಲ್ಲೂಕಿನ ವೆಂಕಟಾಪುರ ಗ್ರಾಮಕ್ಕೆ ಹೊರಟಿತು ಈ ಘಟನೆಯಲ್ಲಿ ಬಸ್ ಚಾಲಕ ಮಹಮ್ಮದ್ ಲಾಲ್ ಪಟೇಲ್ ವಡ್ಡನ್ಕೇರ ಮತ್ತು ನಿರ್ವಾಹಕ ವಿಜಯಕುಮಾರ ಗಂಭೀರವಾಗಿ ಘಾಯಗಳಾಗಿವೆ, ಆಟೋ ಚಾಲಕ ಮಹಮ್ಮದ್ ಇಲಿಯಾಸರವರು ಗಂಭೀರ ಗಾಯಗೊಂಡಿದ್ದಾರೆ. ಘಟನೆಯಲ್ಲಿ ಐದು ಪ್ರಯಾಣಿಕರಿಗೆ ತಲೆ ಪೆಟ್ಟಾಗಿದ್ದು ಮೂರು ಜನರಿಗೆ ಕೈಕಾಲು ಬೆನ್ನು ಮೂಳೆ ಪೆಟ್ಟಾಗಿದೆ, ಚಿಂಚೋಳಿ ಸರ್ಕಾರಿ ಆಸ್ಪತ್ರೆಯಲ್ಲಿ ಎಲ್ಲಾ ಗಾಯಾಳುಗಳನ್ನು ಸರ್ಕಾರಿ ಆಸ್ಪತ್ರೆಯ ಆಡಳಿತ ಅಧಿಕಾರಿ ಡಾ.ಮಹ್ಮದ್ ಗಫಾರ್ ನೇತೃತ್ವದಲ್ಲಿ ಎಲ್ಲಾ ಗಾಯಾಳುಗಳಿಗೆ ಪ್ರಥಮ ಚಿಕಿತ್ಸೆಯನ್ನು ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಬೀದರ್ ಮತ್ತು ಕಲ್ಬುರ್ಗಿ ಭೀಮ್ಸ್ ಮತ್ತು ಜೇಮ್ಸ್ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಆಂಬುಲೆನ್ಸ್ ಮೂಲಕ ರವಾನಿಸಲಾಗಿದೆ.

ಗಾಯಾಳುವಿನಲ್ಲಿ ಆಟೋ ಚಾಲಕನ ಸ್ಥಿತಿ ಬಹಳ ಚಿಂತಾಜನಕವಾಗಿದೆ, ಘಟನಾ ಸ್ಥಳಕ್ಕೆ ಸಿಪಿಐ ಕಪಿಲ್ ದೇವ್,ಪಿಎಸ್‌ಐ ಗಂಗಮ್ಮ ಜಿನಕೆರೆ ಭೇಟಿನೀಡಿ ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ.

ತಾಂಡೂರ ಚಿಂಚೋಳಿ ರಸ್ತೆ ಮಧ್ಯೆ ಬಿದ್ದ ಸಿಮೆಂಟ್ ತುಂಬಿದ ಟ್ಯಾಂಕರ್ ಅನ್ನು ಜೆಸಿಬಿ ಯಂತ್ರದ ಮೂಲಕ ರಸ್ತೆ ಬದಿಗೆ ತಳ್ಳಿ ಚಿಂಚೋಳಿ ತಾಂಡೂರ್ ಮಾರ್ಗ ಮಧ್ಯೆ ಸಂಚರಿಸುವ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಯಿತು.

ಗಾಯಗೊಂಡ ವಿವರಣೆ:– ಶಂಕರ ರಾಮಶೆಟ್ಟಿ ಪವಾರ (65),ಸುಶೀಲಬಾಯಿ (60),ಎಂ.ಡಿ.ಇಲಿಯಾಜ್ ಎಂ.ಡಿ.ಅಯೂಬ್ (23),ಲಾಲ್ ಪಟೇಲ್ ಚಾಂದ್ ಪಟೇಲ್ ಬಸ್ ಚಾಲಕ (35),ಉಮೇಶ ಶ್ರೀಮಂತ (30),ರಮೇಶ ವೀರಶೆಟ್ಟಿ (36),ರವಿ ಸಂಗಪ್ಪ (38),ವಿಜಯಕುಮಾರ ವಿಠಲ್ ಕಂಡಕ್ಟರ್ (37),ಭಾಗಮ್ಮ ಕಾಶಿನಾಥ (36),ವಿದ್ಯಾವತಿ ಕಾಶಿನಾಥ (38) ಗಾಯಗೊಂಡಿದ್ದಾರೆ.


ಉದಯವಾಹಿನಿ ಚಿತ್ರ

> ಚಿಂಚೋಳಿ ಮತ್ತು ತಾಂಡೂರ್ ರಾಷ್ಟ್ರೀಯ ಹೆದ್ದಾರಿ ಮಧ್ಯೆ ಸಂಚರಿಸುವ ವಾಹನಗಳು ಅಧಿಕ ಪ್ರಮಾಣದಲ್ಲಿ ಸಿಮೆಂಟ್ ಮತ್ತು ಹೊಟ್ಟು (ಭೂಸಾ) ತುಂಬಿಕೊಂಡು ಸಂಚಾರ ಮಾಡುವುದರಿಂದ ರಸ್ತೆ ಅಪಘಾತಗಳು ಸಂಭವಿಸುತ್ತಿವೆ,ಶಾಧಿಪೂರ ಕುಂಚಾವರಂ ರಸ್ತೆಗೂ ಕೂಡ ಅಧಿಕ ಪ್ರಮಾಣದ ಕೇಂಪುಮಣ್ಣು ತುಂಬಿಕೊಂಡು ಹೋಗುತ್ತಿರುವುದರಿಂದ ಅನೇಕ ಅಪಘಾತಗಳು ಆಗುತ್ತಿವೆ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು, ಮೈನ್ಸ್ ಅಧಿಕಾರಿಗಳು ಪೋಲಿಸ್ ಅಧಿಕಾರಿಗಳು ಕಡಿವಾಣ ಹಾಕಬೇಕು. –ರವಿಶಂಕರರೆಡ್ಡಿ
> ಸಮಾಜ ಸೇವಕ ಜೆಡಿಎಸ್ ಅಧ್ಯಕ್ಷ

# ಎನ್‌ಐಎ ಕಾರ್ಯಾಚರಣೆ ಶಂಕಿತ ಉಗ್ರರಿಬ್ಬರ ಬಂಧನ



**ನವದೆಹಲಿ:** ಮಹತ್ವದ ಕಾರ್ಯಾಚರಣೆಯಲ್ಲಿ, ಪೊಲೀಸ್ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಇಬ್ಬರು ಶಂಕಿತ ಭಯೋತ್ಪಾದಕರನ್ನು ಬಂಧಿಸಿದೆ. ನೋಯ್ಡಾ ಪ್ರದೇಶದಲ್ಲಿ ಈ ಬಂಧನ ನಡೆದಿದ್ದು, ಎಟಿಎಸ್ ತಂಡ ಗುಪ್ತಚರ ಮಾಹಿತಿಯ ಆಧಾರದ ಮೇಲೆ ಕಾರ್ಯಾಚರಣೆ ನಡೆಸಿತ್ತು. ಈ ಶಂಕಿತರ ಬಂಧನದ ಸುದ್ದಿ, ಇದು ಪ್ರಮುಖ ಎಟಿಎಸ್ ಕಾರ್ಯಾಚರಣೆಯಾಗಿದ್ದು, ವ್ಯಾಪಕ ಗಮನ ಸೆಳೆದಿದೆ.

ಬಂಧಿತರನ್ನು 20 ವರ್ಷ ವಯಸ್ಸಿನ ತುಷಾರ್ ಚೌಹಾಣ್ ಅಲಿಯಾಸ್ ಹಿಜ್ಬುಲ್ಲಾ ಖಾನ್ (ಬಾಗ್‌ಪತ್ ನಿವಾಸಿ) ಮತ್ತು ಸಮೀರ್ ಖಾನ್ (ಹಳೆಯ ದೆಹಲಿಯ ಸೀಲಾಮ್‌ಪುರ ನಿವಾಸಿ) ಎಂದು ಗುರುತಿಸಲಾಗಿದೆ. ಇವರು ಕಳೆದ ಕೆಲವು ಸಮಯದಿಂದ ಸಮಾಜ ವಿರೋಧಿ ಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದರು ಎನ್ನಲಾಗಿದೆ.

ಉತ್ತರ ಪ್ರದೇಶ ಪೊಲೀಸರು ಮತ್ತು ಯುಪಿ ಎಟಿಎಸ್ ಜಂಟಿಯಾಗಿ ಈ ಶಂಕಿತರನ್ನು ಬಂಧಿಸಿವೆ. ಐಎಸ್‌ಐಗಾಗಿ ಬಂಧಿತ ಭಯೋತ್ಪಾದಕರು ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ. ಎಟಿಎಸ್ ಅವರಿಂದ 32 ಬೋರ್ ಪಿಸ್ತೂಲ್, ಐದು ಜೀವಂತ ಕಾರ್ಟ್ರಿಡ್ಜ್‌ಗಳು, ಒಂದು ಚಾಕು ಮತ್ತು ಎರಡು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದೆ. ಎಟಿಎಸ್ ಪ್ರಕಾರ, ಐಎಸ್‌ಐ ಸೂಚನೆಯ ಮೇರೆಗೆ ಪಾಕಿಸ್ತಾನಿ ಭಯೋತ್ಪಾದಕರು ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಸಮಗ್ರತೆಯನ್ನು ದುರ್ಬಲಗೊಳಿಸಲು ಸಂಚು ರೂಪಿಸುತ್ತಿದ್ದಾರೆ ಎಂಬ ಮಾಹಿತಿ ಬಹಳ ಸಮಯದ ಹಿಂದೆ ಲಭಿಸಿದೆ. ಈ ಸಂಚಿನಡಿಯಲ್ಲಿ, ಭಾರತೀಯ ಯುವಕರನ್ನು ಸಾಮಾಜಿಕ ಮಾಧ್ಯಮ, ವಿಶೇಷವಾಗಿ ಇನ್‌ಸ್ಟಾಗ್ರಾಮ್ ಮತ್ತು ಇತರ ವೇದಿಕೆಗಳ ಮೂಲಕ ಸ್ಲೀಪರ್ ಸೆಲ್‌ಗಳನ್ನು ರಚಿಸಿ ಭಯೋತ್ಪಾದಕ ಚಟುವಟಿಕೆಗಳನ್ನು ನಡೆಸಲು ಪ್ರಚೋದಿಸಲಾಗುತ್ತಿದೆ.

ಐಎಸ್‌ಐ ಸೂಚನೆಯ ಮೇರೆಗೆ ಪಾಕಿಸ್ತಾನಿ ದರೋಡೆಕೋರರಾದ ಶಹಜಾದ್ ಭಟ್ಟಿ, ಅಬಿದ್ ಜಾಟ್ ಮತ್ತು ಕೆಲವು ಪಾಕಿಸ್ತಾನಿ ಯೂಟ್ಯೂಬರ್‌ಗಳು ಭಾರತೀಯ ಯುವಕರನ್ನು ಧಾರ್ಮಿಕ ಮತಾಂಧತೆ ಮತ್ತು ಆರ್ಥಿಕ ಆಮಿಷದಿಂದ ಬೆದರಿಸುವ ಕೆಲಸ ಮಾಡುತ್ತಿದ್ದಾರೆ ಎಂದು ತನಿಖೆಯಿಂದ ತಿಳಿದುಬಂದಿದೆ. ಸೂಕ್ಷ್ಮ ಸ್ಥಳಗಳ ಮೇಲೆ ಕಣ್ಗಾವಲು ನಡೆಸಲು, ಗುರಿಯಿಟ್ಟು ದಾಳಿ ನಡೆಸಲು ಮತ್ತು ಆಧುನಿಕ ಶಸ್ತ್ರಾಸ್ತ್ರಗಳಿಂದ ಅವರನ್ನು ಕೊಲ್ಲಲು ಯುವಕರು ಯೋಜಿಸುತ್ತಿದ್ದರು. ಈ ಪಿತೂರಿಯ ಪ್ರಭಾವದಿಂದ, ಬಾಗ್‌ಪತ್ ನಿವಾಸಿ ತುಷಾರ್ ಚೌಹಾಣ್ ಅಲಿಯಾಸ್ ಹಿಜ್ಬುಲ್ಲಾ ಅಲಿ ಖಾನ್ ಮತ್ತು ದೆಹಲಿ ನಿವಾಸಿ ಸಮೀರ್ ಖಾನ್ ಪಾಕಿಸ್ತಾನಿ ದರೋಡೆಕೋರರೊಂದಿಗೆ ನೇರ ಸಂಪರ್ಕಕ್ಕೆ ಬಂದಿದ್ದಾರೆ.

ದೃಢವಾದ ಪುರಾವೆಗಳ ಆಧಾರದ ಮೇಲೆ ಎಟಿಎಸ್ 2026 ರ ಏಪ್ರಿಲ್ 23 ರಂದು ನೋಯ್ಡಾದಿಂದ ಇಬ್ಬರೂ ಆರೋಪಿಗಳನ್ನು ಬಂಧಿಸಿದೆ.

## ಪಾಕ್ ಕಾರ್ಯಾಚರಣೆಗೆ 22 ಉಗ್ರರ ಬಲಿ



**ಇಸ್ಲಾಮಾಬಾದ್:** ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನದ ನಡುವೆ ನಡೆಯುತ್ತಿರುವ ಸಂಘರ್ಷದ ನಡುವೆ ಪಾಕಿಸ್ತಾನದ ವಾಯುವ್ಯ ಪ್ರದೇಶವಾಗಿರುವ ಖೈಬರ್ ಪಖ್ತುಂಖ್ವಾ ಜಿಲ್ಲೆಯ ಗಡಿಯಲ್ಲಿ ಈ ವಾರದಲಿ ನಡೆದ ಭೀಕರ ಗುಂಡಿನ ಚಕಮಕಿಯಲ್ಲಿ 22 ಉಗ್ರರು ಸಾವನ್ನಪ್ಪಿದ್ದಾರೆ, ಇದರಲ್ಲಿ 10 ವರ್ಷದ ಮಗು ಸಹ ಸೇರಿದೆ ಎಂದು ಪಾಕಿಸ್ತಾನದ ಮಿಲಿಟರಿ ಅಧಿಕಾರಿಗಳು ತಿಳಿಸಿದ್ದಾರೆ.

ಈ ಕುರಿತು ಶುಕ್ರವಾರ(ಏ.24) ಹೇಳಿಕೆ ಬಿಡುಗಡೆ ಮಾಡಿದ ಪಾಕಿಸ್ತಾನದ ಮಿಲಿಟರಿಯ ಮಾಧ್ಯಮ ವಿಭಾಗದ ಪ್ರಕಾರ, ಮಂಗಳವಾರ ಖೈಬರ್ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಮತ್ತು ಕಾನೂನು ಜಾರಿ ಸಂಸ್ಥೆಗಳು ಜಂಟಿ ಮಿಲಿಟರಿ ಕಾರ್ಯಾಚರಣೆ ನಡೆಸಿದ್ದು, ಇದರ ಪರಿಣಾಮವಾಗಿ ತೀವ್ರವಾದ ಗುಂಡಿನ ಚಕಮಕಿ ನಡೆದು 22 ಉಗ್ರಗಾಮಿಗಳು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದೆ.

ಅಲ್ಲದೆ, ಈ ಗುಂಡಿನ ಚಕಮಿಕಯ ವೇಳೆ ಭಯೋತ್ಪಾದಕರ ಅಪ್ರಚೋದಿತ ಗುಂಡಿನ ದಾಳಿಯಲ್ಲಿ ಅಫ್ಘಾನ್ ಗಡಿಯಲ್ಲಿನ ಸ್ಥಳೀಯ ಕುಟುಂಬವೊಂದಕ್ಕೆ ದುರಂತವಾಗಿ ಪರಿಣಮಿಸಿದ್ದು, ಕಾರ್ಯಚರಣೆ ವೇಳೆ 10 ವರ್ಷದ ಬಾಲಕಿ ಸಾವನ್ನಪ್ಪಿದ್ದು, ಇದಕ್ಕೆ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಸಂತಾಪ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದೆ.

**ಪಾಕಿಸ್ತಾನದಲ್ಲಿ ಉಗ್ರರ ಅಟ್ಟಹಾಸ:** ದೀರ್ಘಕಾಲದಿಂದಲೂ ಅಫ್ಘಾನಿಸ್ತಾನದ ಗಡಿಗೆ ಹೊಂದಿಕೊಂಡಿರುವ ಖೈಬರ್ ಪ್ರಾಂತ್ಯದಲ್ಲಿ ದಂಗೆಕೋರರ ಹಿಂಸಾಚಾರ ಮತ್ತು ಗಡಿಯಾಚೆಗಿನ ಉದ್ವಿಗ್ನತೆ ನಡೆಯುತ್ತಲೇ ಇದೆ. ಅದರಲ್ಲೂ ಪ್ರಮುಖವಾಗಿ ಈ ಪ್ರದೇಶದಲ್ಲಿ ಟಿಟಿಪಿ ಉಗ್ರರ ಅಟ್ಟಹಾಸ ಮುಂದುವರೆಯುತ್ತಿದ್ದು, ಪಾಕಿಸ್ತಾನ ಮಿಲಿಟರಿ ವರ್ಷಗಳಿಂದ, ಪ್ರದೇಶದ ಒರಟಾದ ಭೌಗೋಳಿಕತೆಯನ್ನು ಬಳಸಿಕೊಳ್ಳಲು ಪ್ರಯತ್ನಿಸುವ ಸಶಸ್ತ್ರ ಬಣಗಳ ಪ್ರಭಾವವನ್ನು ಕಡಿಮೆ ಕಾರ್ಯಚರಣೆಗಳನ್ನು ನಡೆಸುತ್ತಿದೆ. ಇದು ಸದ್ಯ ಇತ್ತೀಚೆಗೆ ಇಲ್ಲಿನ ಪರಿಸ್ಥಿತಿ ಉಲ್ಬಣವಾಗುತ್ತಿದೆ.

**ಅಫ್ಘಾನ್ ಗಡಿಯಲ್ಲಿ ಘರ್ಷಣೆ:** ಇನ್ನು, ಪ್ರಾಂತ್ಯದಲ್ಲಿನ ಪಾಕಿಸ್ತಾನದ ತೆಹ್ರಿಕ್-ಎ-ತಾಲಿಬಾನ್ ವಿಶ್ವದ ಮೂರನೇ ಅತಿದೊಡ್ಡ ಭಯೋತ್ಪಾದಕ ಗುಂಪು ಎಂದು ಜಾಗತಿಕ ಭಯೋತ್ಪಾದನಾ ಸೂಚ್ಯಂಕ ವರದಿ ಮಾಡಿದೆ. ಪಾಕಿಸ್ತಾನದಲ್ಲಿ ಈಗಾಗಲೇ ಹಲವು ದಾಳಿಗಳ ಹೊಣೆಯನ್ನು ಟಿಟಿಪಿ ಹೊತ್ತುಕೊಂಡಿದೆ.

### ● ಭಾರತವನ್ನು ನರಕದ ಕುಳಿ ಎಂಬ ಹೇಳಿಕೆ ಬೆಂಬಲಿಸಿದ್ದ ಡೊನಾಲ್ಡ್ ಟ್ರಂಪ್

# ಟ್ರಂಪ್ ಭಾರತ ವಿರೋಧಿ ಹೇಳಿಕೆಗೆ ಇರಾನ್ ತಿರುಗೇಟು

**ಮುಂಬೈ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತ ಮತ್ತು ಚೀನಾವನ್ನು ನರಕದ ಕುಳಿ ಎಂದು ಕರೆದ ಪಾಡ್‌ಕಾಸ್ಟರ್ ವೋರ್ವನ ವಿಡಿಯೋ ಹಂಚಿಕೊಂಡು ತೀವ್ರ ವಿವಾದ ಸೃಷ್ಟಿಸಿದ್ದಾರೆ. ಅಮೆರಿಕದ ಜನ್ಮಸಿದ್ಧ ಪೌರತ್ವ ಕಾನೂನುಗಳಲ್ಲಿ ಬದಲಾವಣೆಗಳಿಗೆ ಕರೆ ನೀಡಿರುವ ಅವರು, ಅಮೆರಿಕರನ್ನು ಮೆಚ್ಚಿಸುವ ಭರದಲ್ಲಿ ಇಲ್ಲಸಲ್ಲದ ಮಾತುಗಳನ್ನಾಡಿದ್ದಾರೆ. ಡೊನಾಲ್ಡ್ ಟ್ರಂಪ್ ಅವರ ಭಾರತ ವಿರೋಧಿ ಹೇಳಿಕೆ ಇದೀಗ ಭಾರೀ ಆಕ್ರೋಶಕ್ಕೆ ಕಾರಣವಾಗಿದೆ.

ಆದರೆ ತಮ್ಮ ಹೇಳಿಕೆಯ ದುಷ್ಪರಿಣಾಮವನ್ನು ಅರಿತ ಡೊನಾಲ್ಡ್ ಟ್ರಂಪ್, ಆ ಬಳಿಕ ಭಾರತವನ್ನು ಮೆಚ್ಚಿಸುವ ಕಾರ್ಯಕ್ಕೆ ಕೈಹಾಕಿದ್ದಾರೆ. ಭಾರತ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಹೊಗಳುವ ಮೂಲಕ, ಅಮೆರಿಕ ಅಧ್ಯಕ್ಷರು ತಮ್ಮ ತಪ್ಪನ್ನು ಸರಿಪಡಿಸಿಕೊಳ್ಳಲು ಮುಂದಾಗಿದ್ದಾರೆ. ಆದರೆ ಇರಾನ್ ಮಾತ್ರ ಡೊನಾಲ್ಡ್ ಟ್ರಂಪ್ ಅವರ ಭಾರತ ವಿರೋಧಿ ಹೇಳಿಕೆಯನ್ನು ಖಂಡಿಸಿದೆ. ಈ ಕುರಿತು ಭಾರತದಲ್ಲಿರುವ ಇರಾನ್ ರಾಯಭಾರ ಕಚೇರಿ ತನ್ನ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿದ್ದು, ಭಾರತದ ವಿರುದ್ಧ ಏನೇ ಹೇಳಿಕೆ ನೀಡುವ ಮೊದಲು, ಡೊನಾಲ್ಡ್ ಟ್ರಂಪ್ ಒಮ್ಮೆ ಭಾರತಕ್ಕೆ ಭೇಟಿ ನೀಡುವುದು ಒಳಿತು ಎಂದು ಅಮೆರಿಕ ಅಧ್ಯಕ್ಷರ ಕಾಲೆಳೆದಿದೆ. ಭಾರತದ ಪರ ಇರಾನ್ ರಾಯಭಾರ ಕಚೇರಿ ಹೇಳಿಕೆ ಇದೀಗ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ.

**ಭಾರತದ ಪರ ಇರಾನ್**

ಮುಂಬೈನಲ್ಲಿರುವ ಇರಾನ್‌ನ ಕಾನ್ಸುಲೇಟ್ ಜನರಲ್ ಮಹಾರಾಷ್ಟ್ರದ ಶ್ರೀಮಂತ ಸಾಂಸ್ಕೃತಿಕ ಮತ್ತು ಭೌಗೋಳಿಕ ಪರಂಪರೆಯನ್ನು ದಾಖಲಿಸುವ ವೀಡಿಯೊವನ್ನು ಹಂಚಿಕೊಂಡಿದ್ದು, ಈ ರಾಜ್ಯಕ್ಕೆ ಪ್ರವಾಸ ಮಾಡುವ ಮೂಲಕ ಅಮೆರಿಕ ನಾಯಕ ತನ್ನ ಸಾಂಸ್ಕೃತಿಕ ನಿರ್ವಿಶೀಕರಣ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದೆ.

ಬಹುಶಃ ಯಾರಾದರೂ ಡೊನಾಲ್ಡ್ ಟ್ರಂಪ್‌ಗಾಗಿ ಏಕಮುಖ ಸಾಂಸ್ಕೃತಿಕ ನಿರ್ವಿಶೀಕರಣವನ್ನು ಕಾಯ್ದಿರಿಸಬೇಕು, ಅದು ಅವರ ಯಾದೃಚ್ಛಿಕ ಉಡಾಫೆಯ ಮಾತುಗಳನ್ನು ಕಡಿಮೆ ಮಾಡಬಹುದು. ಕಭಿ ಇಂಡಿಯಾ ಆ ಕೆ ದೇಖೋ, ಫಿರ್ ಬೋಲ್ನಾ (ಒಮ್ಮೆಯಾದರೂ ಭಾರತಕ್ಕೆ ಭೇಟಿ ನೀಡಿ ಆಮೇಲೆ ಮಾತನಾಡಿ) ಎಂದು ಇರಾನ್ ಕಾನ್ಸುಲೇಟ್ ಜನರಲ್ ಅಮೆರಿಕ ಅಧ್ಯಕ್ಷರನ್ನು ಗುರಿಯಾಗಿಸಿ ವ್ಯಂಗ್ಯವಾಡಿದೆ. ಇಷ್ಟೇ ಅಲ್ಲದೇ ಡೊನಾಲ್ಡ್ ಟ್ರಂಪ್ ಅವರು ಅಮೆರಿಕದಲ್ಲಿ ನೆಲೆಸಿರುವ ಭಾರತೀಯ ಮತ್ತು ಚೀನೀ ವಲಸಿಗರು ನಮ್ಮ ಧ್ವಜದ ಮೇಲೆ ಕಾಲಿಟ್ಟ ಲ್ಯಾಪ್‌ಟಾಪ್ ಹೊಂದಿರುವ ದರೋಡೆಕೋರರು ಎಂದು ಅಸಮಾಧಾನ ಹೊರಹಾಕಿದ್ದಾರೆ. ಇದರಿಂದ ಟ್ರಂಪ್ ಭಾರತೀಯರ ಆಕ್ರೋಶ ಎದುರಿಸಬೇಕಾಗಿ ಬಂದಿದೆ.

**ಭಾರತದ ಪ್ರತಿಕ್ರಿಯೆ:** ಇನ್ನು ಭಾರತವು ಈ ಹೇಳಿಕೆಗಳನ್ನು ಖಂಡಿಸಿದ್ದು, ಅವುಗಳನ್ನು ತಿಳಿವಳಿಕೆಯಿಲ್ಲದ, ಅನುಚಿತ ಮತ್ತು ಕಳಪೆ ಅಭಿರುಚಿಯಿಂದ ಕೂಡಿದ ಹೇಳಿಕೆಗಳು ಎಂದು ಬಣ್ಣಿಸಿದೆ. ಈ ಕುರಿತು ಅಧಿಕೃತ ಹೇಳಿಕೆಯನ್ನು ಬಿಡುಗಡೆ ಮಾಡಿರುವ ಭಾರತದ ವಿದೇಶಾಂಗ ಇಲಾಖೆ, ಈ ಹೇಳಿಕೆಗಳು ಖಂಡಿತವಾಗಿಯೂ ಪರಸ್ಪರ ಗೌರವ ಮತ್ತು ಹಂಚಿಕೆಯ ಹಿತಾಸಕ್ತಿಗಳನ್ನು ಆಧರಿಸಿದ ಭಾರತ-ಯುಎಸ್ ಸಂಬಂಧದ ವಾಸ್ತವತೆಯನ್ನು ಪ್ರತಿಬಿಂಬಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದೆ.

ನಾವು ಈ ಕಾಮೆಂಟ್‌ಗಳನ್ನು ಮತ್ತು ನಂತರ ಅಮೆರಿಕ ರಾಯಭಾರ ಕಚೇರಿ ನೀಡಿದ ಹೇಳಿಕೆಯನ್ನು ನೋಡಿದ್ದೇವೆ. ಈ ಹೇಳಿಕೆಗಳು ಸ್ಪಷ್ಟವಾಗಿ ಮಾಹಿತಿರಹಿತ, ಅನುಚಿತ ಮತ್ತು ಕಳಪೆ ಅಭಿರುಚಿಯಿಂದ ಕೂಡಿವೆ. ಅವು ಖಂಡಿತವಾಗಿಯೂ ಪರಸ್ಪರ ಗೌರವ ಮತ್ತು ಹಂಚಿಕೆಯ ಹಿತಾಸಕ್ತಿಗಳನ್ನು ಆಧರಿಸಿದ ಭಾರತ-ಅಮೆರಿಕ ಸಂಬಂಧದ ವಾಸ್ತವತೆಯನ್ನು ಪ್ರತಿಬಿಂಬಿಸುವುದಿಲ್ಲ ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ. ಈ ಕುರಿತು ಮಾತನಾಡಿರುವ ನವದೆಹಲಿಯಲ್ಲಿರುವ ಅಮೆರಿಕ ರಾಯಭಾರ ಕಚೇರಿಯ ವಕ್ತಾರ ಕ್ರಿಸ್ಟೋಫರ್ ಎಲ್ಮ್ಸ್, ನಮ್ಮ ಅಧ್ಯಕ್ಷರು ಭಾರತದ ಬಗ್ಗೆ ಆತ್ಮೀಯ ಸಂಬಂಧ ಹೊಂದಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರೊಂದಿಗಿನ ಅವರ ವೈಯಕ್ತಿಕ ಬಾಂಧವ್ಯ ಇಡೀ ಜಗತ್ತಿಗೆ ಗೊತ್ತಿದೆ ಎಂದು ಹೇಳಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಅಮೆರಿಕ ಮತ್ತು ಇಸ್ರೇಲ್ ನೊಂದಿಗೆ ಸಂಘರ್ಷದಲ್ಲಿ ನಿರತವಾಗಿರುವ ಇರಾನ್, ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಭಾರತದ ಪರವಾಗಿ ದೃಢ ನಿಲುವುಗಳನ್ನು ತಳೆದಿದೆ. ಭಾರತ ಸಂಘರ್ಷ ಕೊನೆಗಾಣಿಸಲು ನಡೆಸುತ್ತಿರುವ ಪ್ರಯತ್ನಗಳನ್ನು ಇರಾನ್ ಮೆಚ್ಚಿಕೊಂಡಿದೆ. ಉಭಯ ದೇಶಗಳ ನಡುವಿನ ಈ ಗಟ್ಟಿ ಸಂಬಂಧ, ಇರಾನ್ ರಾಯಭಾರ ಕಚೇರಿ ಮಾಡಿರುವ ಎಕ್ಸ್ ಪೋಸ್ಟ್ ನಿಂದ ಸ್ಪಷ್ಟವಾಗುತ್ತದೆ.



**ನರಕದ ಕುಳಿ ಹೇಳಿಕೆ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ರೇಡಿಯೋ ನಿರೂಪಕ ಮೈಕೆಲ್ ಸ್ಯಾವೇಜ್ ಅವರ ಪಾಡ್‌ಕ್ಯಾಸ್ಟ್‌ವೊಂದನ್ನು ಮರು ಪೋಸ್ಟ್ ಮಾಡಿದ ನಂತರ ವಿವಾದ ಭುಗಿಲೆದ್ದಿತು. ಈ ಪಾಡ್‌ಕಾಸ್ಟ್‌ನಲ್ಲಿ ಸ್ಯಾವೇಜ್ ಭಾರತ, ಚೀನಾ ಮತ್ತು ಇತರ ರಾಷ್ಟ್ರಗಳನ್ನು ನರಕದ ಕುಳಿಗಳು ಎಂದು ಉಲ್ಲೇಖಿಸಿದ್ದರು. ಅಮೆರಿಕದ ಜನ್ಮಸಿದ್ಧ ಪೌರತ್ವ ಕಾನೂನಿನಲ್ಲಿ ಬದಲಾವಣೆಗಳಿಗೆ ಕರೆ ನೀಡುವ ಜನಾಂಗೀಯ ಆಕ್ರೋಶದಲ್ಲಿ, ಏಷ್ಯಾದ ಎರಡು ಪ್ರಬಲ ರಾಷ್ಟ್ರಗಳ ಜನರು ಒಂಬತ್ತನೇ ತಿಂಗಳಲ್ಲಿ ಮಗುವಿಗೆ ಜನ್ಮ ನೀಡಲು ಅಮೆರಿಕಕ್ಕೆ ಬರುತ್ತಾರೆ. ನಮ್ಮ ಕಾನೂನು ಅವರಿಗೆ ತಕ್ಷಣ ಯುಎಸ್ ನಾಗರಿಕರನ್ನಾಗಿ ಮಾಡುತ್ತದೆ ಎಂದು ಸ್ಯಾವೇಜ್ ತೀವ್ರ ವಿವಾದತ್ಮಕ ಹೇಳಿಕೆ ನೀಡಿದ್ದರು.

**ಅಮೆರಿಕದ ಪ್ರತಿಕ್ರಿಯೆ**

ಇನ್ನು ಈ ಹೇಳಿಕೆಗಳಿಂದ ಆಗಿರುವ ಹಾನಿಯನ್ನು ಅರಿತ ಡೊನಾಲ್ಡ್ ಟ್ರಂಪ್, ಕೂಡಲೇ ಭಾರತವನ್ನು ಮೆಚ್ಚಿಸಲು ಮುಂದಾಗಿದ್ದಾರೆ. ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಭಾರತದಲ್ಲಿರುವ ಅಮೆರಿಕ ರಾಯಭಾರ ಕಚೇರಿ, ಭಾರತ ಯಾವಾಗಲೂ ಅಮೆರಿಕದ ಅತ್ಯಾಪ್ತ ರಾಷ್ಟ್ರ ಎಂದು ಹೇಳಿದೆ. ಅಲ್ಲದೇ ಭಾರತ ಶ್ರೇಷ್ಠ ರಾಷ್ಟ್ರ ಎಂಬ ಡೊನಾಲ್ಡ್ ಟ್ರಂಪ್ ಹೇಳಿಕೆ ಪ್ರಕಟಿಸಿದೆ. ಡೊನಾಲ್ಡ್ ಟ್ರಂಪ್ ಅವರು ಭಾರತವನ್ನು ತಮ್ಮ ಅತ್ಯುತ್ತಮ ಸ್ನೇಹಿತ ಆಳುತ್ತಿರುವ ಅತ್ಯಂತ ಶ್ರೇಷ್ಠ ರಾಷ್ಟ್ರ ಎಂದು ಪರಿಗಣಿಸುತ್ತಾರ ಎಂದು ಅಮೆರಿಕ ರಾಯಭಾರ ಕಚೇರಿ ಹೇಳಿದೆ.

## ಚಡ್ಡಾ ಜೊತೆ, ಕ್ರಿಕೆಟಿಗ ಹರ್ಭಜನ್ ಸಿಂಗ್ ಬಿಜೆಪಿಗೆ



**ನವದೆಹಲಿ:** ಆಮ್ ಆದ್ಮಿ ಪಕ್ಷದ (ಎಎಪಿ) ಹಿರಿಯ ರಾಜ್ಯಸಭಾ ಸಂಸದ ರಾಘವ್ ಚಡ್ಡಾ ಅವರು ಪಕ್ಷವನ್ನು ತೊರೆದು ಭಾರತೀಯ ಜನತಾ ಪಕ್ಷ (ಬಿಜೆಪಿ) ಸೇರುತ್ತಿರುವುದಾಗಿ ಘೋಷಿಸಿದರು. ಜೊತೆಗೆ ಮೇಲ್ಮನೆಯಲ್ಲಿನ ಗಮನಾರ್ಹ ಸಂಖ್ಯೆಯ ಎಎಪಿ ಸದಸ್ಯರನ್ನು ಬಿಜೆಪಿಗೆ ಸೇರುತ್ತಿದ್ದಾರೆ. ಅವರಲ್ಲಿ ಆಪ್ ರಾಜ್ಯಸಭಾ ಸದಸ್ಯ, ಕ್ರಿಕೆಟಿಗ ಹರ್ಭಜನ್ ಸಿಂಗ್ ಕೂಡ ಸೇರಿದ್ದಾರೆ.

ಈ ಬೆಳವಣಿಗೆಯಿಂದ ಎಎಪಿ ಮತ್ತು ಅದರ ನಾಯಕ ಅರವಿಂದ್ ಕೇಜ್ರಿವಾಲ್‌ಗೆ ದೊಡ್ಡ ಹಿನ್ನಡೆಯಾಗಿದೆ. ರಾಘವ್ ಚಡ್ಡಾ, ಎಎಪಿಯ ಸುಮಾರು ಮೂರನೇ ಎರಡರಷ್ಟು ರಾಜ್ಯಸಭಾ ಸಂಸದರು ಪಕ್ಷವನ್ನು ತೊರೆದು ಬಿಜೆಪಿಗೆ ಸೇರುತ್ತಿದ್ದಾರೆ ಎಂದು ಹೇಳಿದ್ದಾರೆ. ಚಡ್ಡಾ ಜೊತೆಗೆ, ಬಿಜೆಪಿಗೆ ಸೇರುತ್ತಿರುವ ಸಂಸದರಲ್ಲಿ ಸ್ವಾತಿ ಮಲಿವಾಲ್, ಹರ್ಭಜನ್ ಸಿಂಗ್, ಸಂದೀಪ್ ಪಾಠಕ್, ಅಶೋಕ್ ಮಿತ್ತಲ್, ರಾಜೆಂದರ್ ಗುಪ್ತಾ ಮತ್ತು ವಿಕ್ರಮ್ ಸಾಹ್ನಿ ಇದ್ದಾರೆ. ಎಎಪಿ ಪ್ರಸ್ತುತ 10 ರಾಜ್ಯಸಭಾ ಸದಸ್ಯರನ್ನು ಹೊಂದಿದ್ದು, ಅವರಲ್ಲಿ ಹೆಚ್ಚಿನವರು ಪಂಜಾಬ್‌ನಿಂದ ಬಂದವರು. ಹಿರಿಯ ಎಎಪಿ ಸಂಸದರಾದ ಅಶೋಕ್ ಮಿತ್ತಲ್ ಮತ್ತು ಸಂದೀಪ್ ಪಾಠಕ್ ಅವರೊಂದಿಗೆ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ್ದ ಚಡ್ಡಾ, ಪಕ್ಷಕ್ಕಾಗಿ 15 ವರ್ಷ ಬೆವರು, ರಕ್ತ ಹರಿಸಿ ದುಡಿದ್ದೇನೆ. ಆದರೆ, ಪಕ್ಷ ಹಿಂದೆ ಪ್ರತಿಪಾದಿಸಿದ್ದ ಪ್ರಾಮಾಣಿಕ ರಾಜಕೀಯದಿಂದ ದೂರ ಸರಿದಿದೆ ಎಂದು ಬೇಸರ ಹೊರಹಾಕಿದ್ದರು.

ಸುದ್ದಿಗೋಷ್ಠಿ ಬಳಿಕ ರಾಘವ್ ಚಡ್ಡಾ, ಸಂದೀಪ್ ಪಾಠಕ್ ಮತ್ತು ಅಶೋಕ್ ಮಿತ್ತಲ್ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ಪಕ್ಷದ ಪ್ರಧಾನ ಕಚೇರಿಯಲ್ಲಿ ಭೇಟಿಯಾದರು. ನಾಯಕರಿಗೆ ಹೂಗುಚ್ಛ ನೀಡಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು ಆತ್ಮೀಯ ಸ್ವಾಗತ ನೀಡಿದರು.

## ನಿಮ್ಮಿಂದ ದೆಹಲಿ ಕಸಿಯುತ್ತೇವೆ ಎಂದ ಮಮತಾ ಬ್ಯಾನರ್ಜಿ; ಪಶ್ಚಿಮ ಬಂಗಾಳದಲ್ಲಿ ಕೆಲಸ ಇಲ್ಲವೇ ಎಂದ ಅಮಿತ್ ಶಾ



**ಕೋಲ್ಕತ್ತಾ:** ಮೊದಲ ಹಂತದಲ್ಲಿ ದಾಖಲೆಯ ಮತದಾನ ಕಂಡಿರುವ ಪಶ್ಚಿಮ ಬಂಗಾಳ, ಈಗ ಎರಡನೇ ಹಂತದ ಮತದಾನಕ್ಕೆ ಸಜ್ಜಾಗಿದೆ. ರಾಜಕೀಯ ಪಕ್ಷಗಳ ಚುನಾವಣಾ ಅಬ್ಬರ ಜೋರಾಗಿದ್ದು, ಮುಖ್ಯಮಂತ್ರಿ ಮತ್ತು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರು ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ರಾಜ್ಯ ವಿಧಾನಸಭೆ ಚುನಾವಣೆ ಗೆದ್ದ ಬಳಿಕ ನಂತರ ನಾವು ಬಿಜೆಪಿಯಿಂದ ದೆಹಲಿಯನ್ನು (ಕೇಂದ್ರ ಸರ್ಕಾರ) ಕಸಿದುಕೊಳ್ಳುತ್ತೇವೆ ಎಂದು ದೀದಿ ಎಚ್ಚರಿಸಿದ್ದಾರೆ.

ಕೋಲ್ಕತ್ತಾದ ಚೌರಿಂಗೀ ಪ್ರದೇಶದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದ ಮಮತಾ ಬ್ಯಾನರ್ಜಿ, ವಿರೋಧ ಪಕ್ಷಗಳನ್ನು ಒಟ್ಟುಗೂಡಿಸುವ ಮೂಲಕ ಕೇಂದ್ರದಲ್ಲಿ ಅಧಿಕಾರಲ್ಲಿರುವ ಬಿಜೆಪಿ ಸರ್ಕಾರವನ್ನು ಕಿತ್ತೆಯುಸತ್ತೇವೆ ಎಂದು ಅಬ್ಬರಿಸಿದರು. ಇದನ್ನು ನೆನಪಿಡಿ, ನೀವು ನಮ್ಮನ್ನು ಸೋಲಿಸಲು ಸಾಧ್ಯವಿಲ್ಲ. ನಾವು ಅನ್ಯಾಯದ ವಿರುದ್ಧ ಹೋರಾಡುತ್ತೇವೆ, ನಮ್ಮ ಹಕ್ಕುಗಳಿಗಾಗಿ ಹೋರಾಡುತ್ತೇವೆ. ನಾನು ಬಂಗಾಳದಲ್ಲಿ ಹುಟ್ಟಿದ್ದೇನೆ ಮತ್ತು ನಾನು ಈ ಬಂಗಾಳದಲ್ಲಿಯೇ ಕೊನೆಯುಸಿರೆಳೆಯುತ್ತೇನೆ. ಬಂಗಾಳದಲ್ಲಿ ಗೆಲುವು ಸಾಧಿಸಿದ ನಂತರ ಎಲ್ಲಾ ರಾಜಕೀಯ ಪಕ್ಷಗಳನ್ನು ಒಟ್ಟುಗೂಡಿಸುವ ಮೂಲಕ, ನಾನು ದೆಹಲಿಯನ್ನು ಸ್ವಾಧೀನಪಡಿಸಿಕೊಳ್ಳುತ್ತೇನೆ. ದೆಹಲಿಯಲ್ಲಿ ಬಿಜೆಪಿಯ ಸಂಪೂರ್ಣ ವಿನಾಶವನ್ನು ನಾನು ಬಯಸುತ್ತೇನೆ. ಬಂಗಾಳದಲ್ಲಿ ಅವರ ನಾಶ ಅನಿವಾರ್ಯವಾಗಿದ್ದರೂ, ದೆಹಲಿಯಿಂದಲೂ ಬಿಜೆಪಿಯನ್ನು ಹೊರಹಾಕಬೇಕು ಎಂದು ಮಮತಾ ಬ್ಯಾನರ್ಜಿ ತೀವ್ರ ವಾಗ್ದಳಿ ನಡೆಸಿದರು.

**ಬಿಜೆಪಿ ಜಯದ ಘೋಷಣೆ**

**ಅಮಿತ್ ಶಾ ತಿರುಗೇಟು:** ಇನ್ನು ಮಮತಾ ಬ್ಯಾನರ್ಜಿ ಅವರ ಹೇಳಿಕೆಗೆ ತಿರುಗೇಟು ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಮತಾ ಬ್ಯಾನರ್ಜಿ ಈಗ ದೆಹಲಿಯತ್ತ ಚಿತ್ತ ಹರಿಸಿದ್ದಾರೆ ಎಂದರೆ, ಅವರು ಪಶ್ಚಿಮ ಬಂಗಾಳದಿಂದ ಹೊರಹೋಗಲಿದ್ದಾರೆ ಎಂದೇ ಅರ್ಥ ಎಂದು ವ್ಯಂಗ್ಯವಾಡಿದ್ದಾರೆ.

ಕೋಲ್ಕತ್ತಾದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡುತ್ತಾ, ಮೊದಲ ಹಂತದ ಮತದಾನದ ಬಳಿಕ, ಪಶ್ಚಿಮ ಬಂಗಾಳದ 152 ಕ್ಷೇತ್ರಗಳ ಪೈಕಿ 110ರಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದು ಅಮಿತ್ ಶಾ ಭರವಸೆ ವ್ಯಕ್ತಪಡಿಸಿದರು. ಪಶ್ಚಿಮ ಬಂಗಾಳದಲ್ಲಿ ಮೊದಲ ಹಂತದಲ್ಲೇ ಬಿಜೆಪಿ ಜಯದ ಘೋಷಣೆ ಮಾಡಿದೆ. ಬಿಜೆಪಿ ಮುಖ್ಯಮಂತ್ರಿ ಅಭ್ಯರ್ಥಿ ಸುವೇಂಧು ಅಧಿಕಾರಿ ಕೂಡ 152 ಕೇತ್ರ ಪೈಕಿ ಪಕ್ಷ 125 ಕ್ಷೇತ್ರಗಳಲ್ಲಿ ಜಯ ಸಾಧಿಸಲಿದೆ ಎಂದು ಭವಿಷ್ಯ ನುಡಿದಿದ್ದಾರೆ. ಇದಕ್ಕೆ ಪ್ರತಿಯಾಗಿ ಮಮತಾ ಬ್ಯಾನರ್ಜಿ, ಬಿಜೆಪಿಯಿಂದ ದೆಹಲಿಯನ್ನು ಕಸಿದುಕೊಳ್ಳುವುದಾಗಿ ಹೇಳಿದ್ದಾರೆ.

## ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ ಮುಖ ಸುಟ್ಟು ಹೋಗಿದೆ, ಪ್ಲಾಸ್ಟಿಕ್ ಸರ್ಜರಿ ಬಳಿಕವಷ್ಟೇ ಮಾತನಾಡಲು ಸಾಧ್ಯ



**ಟೆಹ್ರಾನ್:** ಇರಾನ್‌ನ ನೂತನ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಜೀವಂತವಾಗಿದ್ದಾರೆ. ಆದರೆ, ಅವರು ಅಧಿಕಾರ ನಡೆಸುತ್ತಿರುವ ರೀತಿ ಮತ್ತು ಅವರ ಪ್ರಸ್ತುತ ಆರೋಗ್ಯ ಸ್ಥಿತಿ ಅಕ್ಷರಶಃ ಬೆಚ್ಚಿ ಬೀಳಿಸುವಂತಿದೆ. ಫೆಬ್ರವರಿ 28ರ ಅಮೆರಿಕ-ಇಸ್ರೇಲಿ ವೈಮಾನಿಕ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿರುವ ಅವರು, ಈಗ ಮಾತಿಲ್ಲದೆ 'ನಿಗೂಢ ನಾಯಕ'ನಾಗಿ ಉಳಿದಿದ್ದಾರೆ.

ದಿ ನ್ಯೂಯಾರ್ಕ್ ಟೈಮ್ಸ್ ವರದಿ ಪ್ರಕಾರ, ಮೊಜ್ತಬಾ ಖಮೇನಿ ಸದ್ಯ ವೈದ್ಯಕೀಯ ಸಿಬ್ಬಂದಿಯ ಕಣ್ಗಾವಲಿನಲ್ಲಿದ್ದಾರೆ. ಅವರ ಮುಖ ಮತ್ತು ತುಟಿಗಳ ಮೇಲೆ ತೀವ್ರವಾದ ಸುಟ್ಟಗಾಯಗಳಾಗಿದ್ದು, ಅವರಿಗೆ ಮಾತನಾಡಲು ಸಾಧ್ಯವಾಗುತ್ತಿಲ್ಲ. ಸಹಜ ಸ್ಥಿತಿಗೆ ಮರಳಲು ಅವರಿಗೆ ಪ್ಲಾಸ್ಟಿಕ್ ಸರ್ಜರಿಯ ಅಗತ್ಯವಿದೆ. ಅವರ ಒಂದು ಕಾಲಿಗೆ ಈಗಾಗಲೇ ಮೂರು ಶಸ್ತ್ರಚಿಕಿತ್ಸೆಗಳಾಗಿದ್ದು, ಅವರು ಈಗ ಕೃತಕ ಅಂಗದ ಜೋಡಣೆಗಾಗಿ ಕಾಯುತ್ತಿದ್ದಾರೆ. ಒಂದು ಕೈ ಕೂಡ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಚೇತರಿಸಿಕೊಳ್ಳುತ್ತಿದೆ. ಅತ್ಯಂತ ಆಶ್ಚರ್ಯಕರ ಸಂಗತಿಯೆಂದರೆ, ಇಂದಿನ ಡಿಜಿಟಲ್ ಯುಗದಲ್ಲಿ ಮೊಜ್ತಬಾ ಖಮೇನಿ ಅವರು ದೇಶದ ಆಡಳಿತ ನಡೆಸುತ್ತಿರುವುದು 'ಕೈಬರಹದ ಚೀಟಿಗಳ' ಮೂಲಕ. ಐಆರ್‌ಜಿಸಿ ಕಮಾಂಡರ್‌ಗಳು ಅಥವಾ ಸಚಿವರು ಅವರನ್ನು ನೇರವಾಗಿ ಭೇಟಿ ಮಾಡುತ್ತಿಲ್ಲ. ವಿಶ್ವಾಸಾರ್ಹ ಕೊರಿಯರ್‌ಗಳ ಮೂಲಕ ಮೊಹರು ಮಾಡಿದ ಕೈಬರಹದ ಸಂದೇಶಗಳು ರಸ್ತೆಯ ಮೂಲಕ ರವಾನೆಯಾಗುತ್ತವೆ. ಮೊಜ್ತಬಾ ಅವರ ಪ್ರತಿಕ್ರಿಯೆಗಳು ಕೂಡ ಅದೇ ಮಾದರಿಯಲ್ಲಿ ಮರಳಿ ಬರುತ್ತವೆ. ಅವರ ದೈಹಿಕ ಅಸಮರ್ಥತೆ ಮತ್ತು ಸುರಕ್ಷತೆಯ ಕಾರಣದಿಂದಾಗಿ ದೇಶದ ಪ್ರಮುಖ ನಿರ್ಧಾರಗಳನ್ನು ಪ್ರಸ್ತುತ ಮಿಲಿಟರಿ ನಾಯಕರಿಗೆವಹಿಸಲಾಗಿದೆ ಎಂದು ಹೇಳಲಾಗುತ್ತಿದೆ. ಪ್ಲಾಸ್ಟಿಕ್ ಸರ್ಜರಿ ಮತ್ತು ಕೃತಕ ಅಂಗಗಳ ಜೋಡಣೆಯ ನಂತರ ಮೊಜ್ತಬಾ ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಾರೆಯೇ? ಅಥವಾ ತೆರೆಯ ಮರೆಯಲ್ಲೇ ಮಿಲಿಟರಿ ಆಡಳಿತ ಮುಂದುವರೆಯುತ್ತದೆಯೇ ಎಂಬುದು ಈಗಿನ ದೊಡ್ಡ ಪ್ರಶ್ನೆ. ಇಸ್ರೇಲ್ ಅವರನ್ನು ಪತ್ತೆಹಚ್ಚಿ ಕೊಲ್ಲಬಹುದು ಎಂಬ ಭಯದಿಂದ ಹಿರಿಯ ಸರ್ಕಾರಿ ಅಧಿಕಾರಿಗಳು ಅವರನ್ನು ಭೇಟಿ ಮಾಡುತ್ತಿಲ್ಲ.

ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಮತ್ತು ವಿದೇಶಾಂಗ ಸಚಿವ ಅಬ್ಬಾಸ್ ಅರಗ್ಚಿ ದೇಶದ ಬಗ್ಗೆ ಸಾಕಷ್ಟು ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಸಿಎನ್‌ಎನ್ ವರದಿಗಳ ಪ್ರಕಾರ, ಮೊಜ್ತಬಾ ಖಮೇನಿಯು ಸಕ್ರಿಯ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಿಂದ ದೂರವಿರುವುದು ಇರಾನ್ ನಾಯಕತ್ವದೊಳಗೆ ಬಿರುಕು ಮೂಡಿಸಿದೆ.

# ಅಮೆರಿಕಾ ನೌಕಾಪಡೆಗೆ ಶೂಟ್ ಆಂಡ್ ಕಿಲ್ ಆದೇಶ ನೀಡಿದ ಟ್ರಂಪ್

### ಹೊರ್ಮುಜ್ ಜಲಸಂಧಿಯಲ್ಲಿ ನೇವಲ್ ಮೈನ್ಸ್ ಹಾಕುವ ಇರಾನ್ ಬೋಟ್ ಹೊಡೆದುರುಳಿಸಿ ಎಂದು ನೌಕಾಪಡೆಗೆ ಆದೇಶ

**ಟೆಹ್ರಾನ್:** ಇರಾನ್ ಮತ್ತು ಅಮೆರಿಕಾ ನಡುವೆ ಎರಡನೇ ಸುತ್ತಿನ ಮಾತುಕತೆಯ ಭವಿಷ್ಯ ಇನ್ನೂ ತೂಗುಯ್ಯಾಲೆಯಲ್ಲಿರುವ ಹೊತ್ತಲ್ಲೇ ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೊರ್ಮುಜ್ ಜಲಸಂಧಿ ಸಂಪೂರ್ಣ ಅಮೆರಿಕಾ ನಿಯಂತ್ರಣದಲ್ಲಿದೆ ಎಂದಿದ್ದಾರೆ.

ಅಲ್ಲದೇ ಟ್ರಂಪ್ ಅವರು ಅಂತಾರಾಷ್ಟ್ರೀಯ ಪ್ರಮುಖ ಜಲಮಾರ್ಗ ಹೊರ್ಮುಜ್‌ನಲ್ಲಿ 'ನೇವಲ್ ಮೈನ್ಸ್' (ಸಮುದ್ರಾಳದ ಬಾಂಬ್) ಹಾಕುವ ಯಾವುದೇ ಇರಾನ್ ದೋಣಿಗಳು ಕಂಡುಬಂದರೆ ಅವುಗಳ ಮೇಲೆ ಗುಂಡಿನ ದಾಳಿ ನಡೆಸಿ ಎಂದು ಅಮೆರಿಕಾ ನೌಕಾಪಡೆಗೆ ಶೂಟ್ ಆಂಡ್ ಕಿಲ್ ಆದೇಶ ನೀಡಿದ್ದಾರೆ. ಇದರೊಂದಿಗೆ ಹೊರ್ಮುಜ್ ಜಲಸಂಧಿಯಲ್ಲಿ ಉದ್ವಿಗ್ನತೆ ಮುಂದುವರಿದಿದೆ. ಅಂತಾರಾಷ್ಟ್ರೀಯ ತೈಲ ಸಾಗಣೆಯ ಪ್ರಮುಖ ಮಾರ್ಗವಾದ ಹೊರ್ಮುಜ್ ಜಲಸಂಧಿಯಲ್ಲಿ ಇರಾನ್ 'ನೇವಲ್ ಮೈನ್ಸ್'ಗಳನ್ನು ಅಳವಡಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಈ ಚಟುವಟಿಕೆಯನ್ನು ತಡೆಗಟ್ಟಲು ಯಾವುದೇ ಸಣ್ಣ ದೋಣಿಗಳಿರಲಿ ಅವುಗಳು ಬಾಂಬ್ ಇರಿಸುತ್ತಿರುವುದು ಕಂಡುಬಂದರೆ ಮುಲಾಜಿಲ್ಲದೆ ಹೊಡೆದುರುಳಿಸಿ,'' ಎಂದು ಟ್ರಂಪ್ ಅಮೆರಿಕಾ ನೌಕಾಪಡೆಗೆ ಆದೇಶಿಸಿರುವುದನ್ನು ತಮ್ಮ ಸಾಮಾಜಿಕ ಜಾಲತಾಣ ಟ್ರುತ್ ಸೋಶಿಯಲ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಹೊರ್ಮುಜ್ ಜಲಸಂಧಿಯಲ್ಲಿ ಐಆರ್‌ಜಿಸಿ ದಿಗ್ಬಂಧನದ ನಡುವೆ ಅಲ್ಲಿರವು ನೇವಲ್ ಮೈನ್ಸ್‌ಗಳನ್ನು ತೆರವುಗೊಳಿಸುವ ಕಾರ್ಯದಲ್ಲಿ ಅಮೆರಿಕಾದ ನೌಕೆಗಳು ಕಾರ್ಯನಿರತವಾಗಿ ಎಂದು ಘೋಷಿಸಿದ ಕೆಲವು ವಾರಗಳಲ್ಲೇ ಟ್ರಂಪ್ ಅವರ ಈ ಹೇಳಿಕೆ ಬಂದಿದೆ. ಇನ್ನು, ವಾಷಿಂಗ್ಟನ್ ಪೋಸ್ಟ್ ವರದಿ ಅನುಸಾರ, ಇರಾನ್ ಸೇನೆಯು ಈ ಜಲಸಂಧಿಯ ಸುತ್ತಮುತ್ತ 20ಕ್ಕಿಂತಲೂ ಹೆಚ್ಚು 'ನೇವಲ್ ಮೈನ್ಸ್'ಗಳನ್ನು ಅಳವಡಿಸಿರುವ ಸಾಧ್ಯತೆ ಇದೆ. ಇವುಗಳಲ್ಲಿ ಕೆಲವು ಜಿಪಿಎಸ್ ತಂತ್ರಜ್ಞಾನ ಬಳಸಿ ದೂರದಿಂದಲೇ ನಿಯಂತ್ರಿಸಬಹುದಾದ ಮೈನ್ಸ್‌ಗಳಾಗಿದ್ದು, ಇವುಗಳನ್ನು ಪತ್ತೆಹಚ್ಚುವುದು ಅತ್ಯಂತ ಕಷ್ಟಕರವಾಗಿದೆ ಎಂದು ಹೇಳಲಾಗಿದೆ.

**ಇರಾನ್ ಅಟ್ಟಹಾಸಕ್ಕೆ ಬ್ರೇಕ್?**



**ಹೊರ್ಮುಜ್‌ನಲ್ಲಿ ಟೋಲ್ ಸಂಗ್ರಹ ಶುರು**

ಅಮೆರಿಕಾದ ನೌಕಾ ದಿಗ್ಬಂಧನವನ್ನೂ ಧಿಕ್ಕರಿಸಿ ಇರಾನ್ ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ಟೋಲ್ ಸಂಗ್ರಹ ಶುರು ಮಾಡಿದೆ. ಹೊರ್ಮುಜ್ ಜಲಸಂಧಿ ಮೂಲಕ ಸರಕು ಸಾಗಣೆಗೆ ವಿಧಿಸುತ್ತಿರುವ ಸುಂಕದಿಂದ ಇರಾನ್ ಮೊದಲ ಆದಾಯ ಪಡೆದುಕೊಂಡಿದೆ ಎಂದು ಇರಾನ್ ಸಂಸತ್ ಡೆಪ್ಯೂಟಿ ಸ್ಪೀಕರ್ ಹಮಿದ್‌ರೇಜಾ ಹಾಜಿಬೇಬಾಯ್ ಅವರ ಹೇಳಿಕೆ ಉಲ್ಲೇಖಿಸಿ ಅಂತಾರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿವೆ. ಅಮೆರಿಕಾ ದಿಗ್ಬಂಧನ ತೆರವುಗೊಳಿಸುವವರೆಗೆ ನಿರ್ದಿಷ್ಟ ಹಡಗುಗಳನ್ನು ಹೊರತುಪಡಿಸಿ ಉಳಿದೆಲ್ಲದಕ್ಕೂ ಜಲಸಂಧಿಯನ್ನು ಮುಚ್ಚುವುದಾಗಿ ಇರಾನ್ ಮತ್ತೊಮ್ಮೆ ಪುನರುಚ್ಚರಿಸಿದೆ.

**ಇರಾನ್ ಯೋಧರಿಂದ ಭಾರತಕ್ಕೆ ಬರುತ್ತಿದ್ದ ಹಡಗು ಸೆರೆ**

ಭಾರತಕ್ಕೆ ಬರುತ್ತಿದ್ದ ಹಡಗು ಎರಡು ಹಡಗುಗಳ ಮೇಲೆ ಇರಾನ್ ನೌಕಾಪಡೆ ಹೊರ್ಮುಜ್‌ನಲ್ಲಿ ದಾಳಿ ನಡೆಸಿದ ಒಂದು ದಿನದ ಬಳಿಕ ಗುರುವಾರ ಐಆರ್‌ಜಿಸಿ ವಿಡಿಯೋ ರಿಲೀಸ್ ಮಾಡಿದೆ. ಸ್ಪೀಡ್ ಬೋಟ್‌ನಲ್ಲಿ ಬಂದ ಮಾಸ್ಕ್ ಧರಿಸಿದ ಇರಾನ್ ನೌಕಾಪಡೆ ಯೋಧರು ಭಾರತಕ್ಕೆ ಬರುತ್ತಿದ್ದ 'ಎಪಾಮಿನೊಂಡಾಸ್' ಮತ್ತು 'ಎಂಎಸ್‌ಸಿ ಫ್ರಾನ್ಸೆಸ್ಕಾ' ಹಡಗುಗಳನ್ನು ತಡೆದು ಅವುಗಳನ್ನು ವಶಪಡಿಸಿಕೊಂಡಿರುವ ವಿಡಿಯೋವನ್ನು ಐಆರ್‌ಜಿಸಿ ಬಿಡುಗಡೆ ಮಾಡಿದ್ದು, ಅದನ್ನು ಇರಾನ್‌ನ ಪ್ರೆಸ್ ಟಿವಿ ಪ್ರಸಾರ ಮಾಡಿದೆ.

## ಮಿನಿ ನ್ಯೂಸ್

### ಬಂಗಾಳದಲ್ಲಿ ಬಿಜೆಪಿಗೆ 110 ಸ್ಥಾನ

**ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮೊದಲ ಹಂತದಲ್ಲಿ ದಾಖಲೆ ಮಟ್ಟದ ಮತದಾನ ನಡೆದ ಹಿನ್ನೆಲೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಬಿಜೆಪಿ ಪರ ಜನಮತ ಹರಿದಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಇದೇ ವೇಳೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಧಿಕಾರದಿಂದ ಹೊರ ಹೋಗಲಿದ್ದಾರೆ ಎಂದು ಅವರು ಹೇಳಿದ್ದಾರೆ. ಕೋಲ್ಕತ್ತಾದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲ ಹಂತದ ಮತದಾನದ ಮೂಲಕವೇ ಜನರು ತಮ್ಮ ಭವಿಷ್ಯವನ್ನು ನಿರ್ಧರಿಸಿದ್ದಾರೆ. ಪ್ರಧಾನಿ ನರೇಂದ್ರಮೋದಿ ನೇತೃತ್ವದ ಅಭಿವೃದ್ಧಿಗೆ ಬೆಂಬಲ ವ್ಯಕ್ತವಾಗಿದೆ. ಮತದಾನದ ಪ್ರಮಾಣವೇ 'ದೀದಿ' ಹೊರ ಹೋಗುತ್ತಿದ್ದಾರೆ ಎಂಬುದಕ್ಕೆ ಸೂಚನೆ ನೀಡುತ್ತಿದೆ ಎಂದು ಹೇಳಿದರು. ಮೊದಲ ಹಂತದ 152 ಕ್ಷೇತ್ರಗಳಲ್ಲಿ ಬಿಜೆಪಿ 110ಕ್ಕಿಂತ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಅವರು ಭವಿಷ್ಯ ನುಡಿದರು. ಎರಡನೇ ಹಂತದ ಬಳಿಕವೇ ನಾವು ಸರ್ಕಾರ ರಚಿಸುವ ಸ್ಥಿತಿಗೆ ಬರಲಿದ್ದೇವೆ ಎಂದು ಶಾ ಹೇಳಿದರು.

### ಹೊಟ್ಟೆನೋವೆಂದ ಬಾಲಕಿ, ಆಸ್ಪತ್ರೆಗೆ ಹೋದ ಸ್ವಲ್ಪ ಹೊತ್ತಲ್ಲೇ ಹೆರಿಗೆ

**ಅಮೃತಸರ:** ಜಲಂಧರ್‌ನಲ್ಲಿ ಆಘಾತಕಾರಿ ಘಟನೆಯೊಂದು ಬೆಳಕಿಗೆ ಬಂದಿದೆ. ಹೊಟ್ಟೆ ನೋವೆಂದು ಆಸ್ಪತ್ರೆಗೆ ದಾಖಲಾಗಿದ್ದ ಬಾಲಕಿಗೆ ಕಾಣಿಸಿಕೊಂಡಿರುವುದು ಹೆರಿಗೆ ನೋವು, ಆಕೆ ಗರ್ಭಿಣಿ ಎಂದು ಆಗಲೇ ಗೊತ್ತಾಗಿದ್ದು. ಆಕೆ ಹೆಣ್ಣುಮಗುವಿಗೆ ಜನ್ಮ ಕೊಟ್ಟಿದ್ದಾಳೆ. ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ಅಮೃತಸರ ಮೂಲದ ಯುವಕನ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಪಂಜಾಬ್‌ನ ಜಲಂಧರ್ ಜಿಲ್ಲೆಯಲ್ಲಿ ಅತ್ಯಂತ ಕಳವಳಕಾರಿ ಘಟನೆಯೊಂದು ವರದಿಯಾಗಿದೆ. ಸಾಮಾನ್ಯ ಹೊಟ್ಟೆನೋವು ಎಂದು ಚಿಕಿತ್ಸೆಗೆ ಬಂದಿದ್ದ ಅಪ್ರಾಪ್ತ ಬಾಲಕಿಯೊಬ್ಬಳು ಗರ್ಭಿಣಿ ಎಂಬ ವಿಷಯ ತಿಳಿದು ಕುಟುಂಬಸ್ಥರು ದಿಗಿಲುಗೊಂಡಿದ್ದಾರೆ. ಆಸ್ಪತ್ರೆಗೆ ದಾಖಲಾದ ಕೆಲವೇ ಹೊತ್ತಿನಲ್ಲಿ ಬಾಲಕಿ ಮಗುವಿಗೆ ಜನ್ಮ ನೀಡಿದ್ದಾಳೆ.

ಸಂತ್ರಸ್ತೆಯ ಚಿಕ್ಕಮ್ಮ ನೀಡಿರುವ ದೂರಿನ ಪ್ರಕಾರ, ಬಾಲಕಿಗೆ ಸುಮಾರು ಒಂದೂವರೆ ತಿಂಗಳಿನಿಂದ ಹೊಟ್ಟೆನೋವು ಕಾಣಿಸಿಕೊಳ್ಳುತ್ತಿತ್ತು. ಇದಕ್ಕಾಗಿ ಮೊದಲು ಜಲಂಧರ್‌ನ ನೂರ್ಮಹಲ್‌ನಲ್ಲಿರುವ ಖಾಸಗಿ ವೈದ್ಯರ ಬಳಿ ತಪಾಸಣೆ ನಡೆಸಿ ಔಷಧಿ ಪಡೆಯಲಾಗಿತ್ತು. ಆದರೆ, ಏಪ್ರಿಲ್ 19 ರಂದು ನೋವು ತೀವ್ರಗೊಂಡಾಗ ಬಾಲಕಿಯನ್ನು ಫಿಲ್ಲೌರ್‌ನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಬಾಲಕಿಯನ್ನು ಪರೀಕ್ಷಿಸಿದ ಫಿಲ್ಲೌರ್‌ನ ವೈದ್ಯರು ಪರಿಸ್ಥಿತಿ ಗಂಭೀರವಾಗಿರುವುದನ್ನು ಕಂಡು ಬೇರೆ ಆಸ್ಪತ್ರೆಗೆ ದಾಖಲಿಸಲು ಸೂಚಿಸಿದ್ದಾರೆ. ಅಲ್ಲಿ ನಡೆಸಿದ ಹೆಚ್ಚಿನ ತಪಾಸಣೆಯಲ್ಲಿ ಬಾಲಕಿ ಗರ್ಭಿಣಿಯಾಗಿರುವುದು ದೃಢಪಟ್ಟಿತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗಲೇ ಬಾಲಕಿ ಮಗುವಿಗೆ ಜನ್ಮ ನೀಡಿದ್ದಾಳೆ. ಈ ಸುದ್ದಿಯಿಂದ ಆಘಾತಕ್ಕೊಳಗಾದ ಚಿಕ್ಕಮ್ಮ ಬಾಲಕಿಯನ್ನು ವಿಚಾರಿಸಿದಾಗ, ಅಮೃತಸರದ ಯುವಕನೊಬ್ಬ ತನ್ನ ಮೇಲೆ ಅತ್ಯಾಚಾರ ಎಸಗಿರುವುದಾಗಿ ಕಣ್ಣೀರಿಟ್ಟಿದ್ದಾಳೆ.

### ರೈಲಿನ ಮೇಲೆ ಹತ್ತಿ ಹೈವೋಲ್ಟೇಜ್ ತಂತಿ ಸ್ಪರ್ಶಿಸಿ ಸುಟ್ಟು ಕರಕಲಾದ ವ್ಯಕ್ತಿ

**ದರ್ಭಂಗ:** ಕೇವಲ ಒಂದು ಕ್ಷಣದ ಅಜಾಗರೂಕತೆ ಅಥವಾ ದುಸ್ಸಾಹಸ ಹೇಗೆ ಪ್ರಾಣಕ್ಕೆ ಕುತ್ತು ತರುತ್ತದೆ ಎಂಬುದಕ್ಕೆ ಈ ವೈರಲ್ ವಿಡಿಯೋ ಸಾಕ್ಷಿಯಾಗಿದೆ. ಬಿಹಾರದ ದರ್ಭಂಗದಲ್ಲಿ ವ್ಯಕ್ತಿಯೊಬ್ಬ ರೈಲಿನ ಮೇಲೇರಿ ನಡೆಯುವ ಸಾಹಸ ಮಾಡಲು ಹೋಗಿ ವಿದ್ಯುತ್ ತಂತಿ ಸ್ಪರ್ಶಿಸಿ ಪ್ರಾಣಬಿಟ್ಟಿದ್ದಾರೆ. ಸರಕು ರೈಲು ನಿಧಾನವಾಗಿ ಚಲಿಸುತ್ತಿದ್ದಾಗ ಯುವಕ ಬೋಗಿಯ ಮೇಲೆ ಹತ್ತಿದ್ದಾನೆ. ಇದನ್ನು ಗಮನಿಸಿದ ನಿಲ್ದಾಣದಲ್ಲಿದ್ದ ಜನರು ಮತ್ತು ಪ್ರಯಾಣಿಕರು, ಕೆಳಗಿಳಿಯಪ್ಪಾ, ಅಪಾಯವಿದೆ ಎಂದು ಪದೇ ಪದೇ ಕಿರುಚುತ್ತಾ ಎಚ್ಚರಿಕೆ ನೀಡಿದ್ದಾರೆ. ಆದರೆ, ಯಾವುದನ್ನೂ ಲೆಕ್ಕಿಸದ ಯುವಕ ಬೋಗಿಯ ಮೇಲೆ ನಡೆಯುತ್ತಾ ಮುಂದೆ ಸಾಗಿದ್ದಾನೆ. ಯುವಕ ಬೋಗಿಯ ಮೇಲ್ಭಾಗದಲ್ಲಿ ನಿಂತು ತನ್ನ ಕೈಯನ್ನು ಅಪಾಯಕಾರಿಯಾಗಿ ಓವರ್‌ಹೆಡ್ ವಿದ್ಯುತ್ ಮಾರ್ಗದ ಹತ್ತಿರ ಕೊಂಡೊಯ್ದಿದ್ದಾನೆ. ಕೈ ತಂತಿಗೆ ತಗುಲಿದ ತಕ್ಷಣವೇ ದೊಡ್ಡ ಮಟ್ಟದ ಸ್ಫೋಟದಂತಹ ಶಬ್ದದೊಂದಿಗೆ ಬೆಂಕಿ ಕಾಣಿಸಿಕೊಂಡಿತು.

ವಿದ್ಯುತ್ ಆಘಾತದ ತೀವ್ರತೆಗೆ ಯುವಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ರೈಲ್ವೆ ಅಧಿಕಾರಿಗಳು ದೃಢಪಡಿಸಿದ್ದಾರೆ. ಮೃತ ಯುವಕನ ಗುರುತು ಇನ್ನೂ ಪತ್ತೆಯಾಗಿಲ್ಲ. ಈತ ಮಾನಸಿಕವಾಗಿ ಅಸ್ಥಿರವಾಗಿದ್ದನೇ ಅಥವಾ ಆತ್ಮಹತ್ಯೆಗೆ ಯತ್ನಿಸಿದ್ದನೇ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಸದ್ಯಕ್ಕೆ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ.

### ಇರಾನ್ ವಿರುದ್ಧ ಮತ್ತೆ ಹೊಸದಾಗಿ ಯುದ್ಧ ಆರಂಭಿಸಲು ಇಸ್ರೇಲ್ ತಯಾರಿ!

**ಜೆರುಸಲೆಂ:** ಇರಾನ್ ವಿರುದ್ಧ ಮಿಲಿಟರಿ ಕ್ರಮವನ್ನು ಹೆಚ್ಚಿಸಲು ಇಸ್ರೇಲ್ ಸಿದ್ಧವಾಗಿದೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. ಆದರೆ ಮುಂದಿನ ಕಾರ್ಯಾಚರಣೆ ಮುಂದುವರಿಸಲು ಅಮೆರಿಕದ ಒಪ್ಪಿಗೆಗಾಗಿ ಕಾಯುತ್ತಿದೆ ಎಂದು ಜೆರುಸಲೆಂ ಪೋಸ್ಟ್ ವರದಿಯಲ್ಲಿ ಹೇಳಲಾಗಿದೆ. ಭದ್ರತಾ ಮೌಲ್ಯಮಾಪನದ ಸಂದರ್ಭದಲ್ಲಿ, ಇಸ್ರೇಲ್ ಮಿಲಿಟರಿ ವಿಸ್ತೃತ ಕಾರ್ಯಾಚರಣೆಗಳಿಗೆ ಸಜ್ಜಾಗಿದೆ. ಇರಾನ್ ವಿರುದ್ಧ ಹೊಸದಾದ ಯುದ್ಧ ನಡೆಸಲು ಇಸ್ರೇಲ್ ಸಿದ್ಧವಾಗಿದೆ ಎಂದು ಅವರು ಹೇಳಿದರು. ಇಸ್ರೇಲ್ ರಕ್ಷಣಾ ಪಡೆಗಳು ಖಮೇನಿ ಕುಟುಂಬ ನಿರ್ಮೂಲನೆಯನ್ನು ಪೂರ್ಣಗೊಳಿಸಲು ಅಮೆರಿಕದ ಒಪ್ಪಿಗೆಗಾಗಿ ಕಾಯುತ್ತಿವೆ ಎಂದು ಜೆರುಸಲೆಂ ಪೋಸ್ಟ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಆಕ್ರಮಣಕಾರಿ ಮತ್ತು ರಕ್ಷಣಾತ್ಮಕ ಕ್ರಮದ ಸಿದ್ಧತೆ ಕುರಿತು ಮಾಹಿತಿ ನೀಡಲಾಗಿದ್ದು, ರಕ್ಷಣೆ ಮತ್ತು ದಾಳಿ ಎರಡಕ್ಕೂ ಸಿದ್ಧವಾಗಿದ್ದು, ಗುರಿಗಳನ್ನು ಗುರುತಿಸಲಾಗಿದೆ. ಇರಾನ್‌ನ ಆಂತರಿಕ ಭದ್ರತೆ ಕುರಿತು ಪ್ರತಿಕ್ರಿಯಿಸಿದ ಕ್ಯಾಟ್ಜ್, ಇರಾನ್‌ನಲ್ಲಿನ ಭಯೋತ್ಪಾದಕ ಆಡಳಿತ ಮುಖ್ಯವಾಗಿ ಕ್ರಾಂತಿಕಾರಿ ಗಾರ್ಡ್‌ಗಳು ಜನರ ಆಂತರಿಕ ದಮನದಲ್ಲಿ ಪರಿಣತಿ ಹೊಂದಿದೆ ಎಂದು ಅವರು ಹೇಳಿದ್ದಾರೆ.

ಇರಾನ್ ಆರ್ಥಿಕ ದಬ್ಬಾಳಿಕೆ ನಡೆಸುತ್ತಿದೆ ಎಂದು ಅವರು ಆರೋಪಿಸಿದ್ದು, ಜಾಗತಿಕ ತೈಲ ಬೆಲೆಗಳನ್ನು ಹೆಚ್ಚಿಸುವ ಬೆದರಿಕೆಯೊಂದಿಗೆ ಇಂಧನ ಸುಲಿಗೆ ಮಾಡುತ್ತಿದೆ ಎಂದು ಕಿಡಿಕಾರುತ್ತಿದ್ದಾರೆ.



# ಪ್ರಭಾಸ್ ವಿರುದ್ಧ ಸಲ್ಮಾನ್ ಖಾನ್ ಎತ್ತಿಕಟ್ಟಿದ ಟಾಲಿವುಡ್ ಮಂದಿ

ಈದ್ ಪ್ರಯುಕ್ತ ಮಾರ್ಚ್ 5ರಂದು ಸಿನಿಮಾ ತೆರೆಗೆ



ಸಲ್ಮಾನ್ ಖಾನ್ ನಟನೆಯ ಹೊಸ ಸಿನಿಮಾ ರಿಲೀಸ್ ದಿನಾಂಕ ಘೋಷಣೆ ಆಗಿದೆ. ಈ ಚಿತ್ರಕ್ಕೆ ತಾತ್ಕಾಲಿಕವಾಗಿ ಎಸ್ ವಿಸಿ 63 ಎಂದು ಹೆಸರು ಇಡಲಾಗಿದೆ. 2027ರ ಈದ್ ಪ್ರಯುಕ್ತ ಅವರ ಈ ಚಿತ್ರ ರಿಲೀಸ್ ಆಗಲಿದೆ. ಈ ವಿಷಯ ಪ್ರಭಾಸ್ ಅಭಿಮಾನಿಗಳಲ್ಲಿ ಆತಂಕ ತಂದಿದೆ. ಏಕೆಂದರೆ ಈಗಾಗಲೇ ಪ್ರಭಾಸ್ ನಟನೆಯ 'ಸ್ಪಿರಿಟ್' ಸಿನಿಮಾದ ರಿಲೀಸ್ ದಿನಾಂಕ ಘೋಷಣೆ ಆಗಿದ್ದು, ಎರಡೂ ಚಿತ್ರಗಳ ನಡುವೆ ಕ್ಲ್ಯಾಶ್ ಆಗಲಿದೆ. ಈ ಬಗ್ಗೆ ಸೋಷಿಯಲ್ ಮೀಡಿಯಾದಲ್ಲಿ ಚರ್ಚೆ ಆಗುತ್ತಿದೆ. ಪ್ರಭಾಸ್ ಅವರು 'ಸ್ಪಿರಿಟ್' ಸಿನಿಮಾ ರಿಲೀಸ್ ದಿನಾಂಕವನ್ನು ಈ ಮೊದಲೇ ಘೋಷಣೆ ಮಾಡಿದ್ದಾರೆ. ಈದ್ ಪ್ರಯುಕ್ತ ಮಾರ್ಚ್ 5ರಂದು ಸಿನಿಮಾ ತೆರೆಗೆ ಬರಲಿದೆ. ಇದಕ್ಕೆ 'ಅನಿಮಲ್' ಖ್ಯಾತಿಯ ಸಂದೀಪ್ ರೆಡ್ಡಿ ವಂಗ ನಿರ್ದೇಶನ ಮಾಡುತ್ತಿದ್ದಾರೆ. ಹೀಗಾಗಿ, ತೆಲುಗು ಜೊತೆಗೆ ಚಿತ್ರವನ್ನು ಹಿಂದಿಯಲ್ಲೂ ರಿಲೀಸ್ ಮಾಡುವ ಪ್ಲ್ಯಾನ್ ಇದೆ. ಆದರೆ, ಈ ಚಿತ್ರಕ್ಕೆ ಸಲ್ಮಾನ್ ಖಾನ್ ಅವರ ಹೊಸ ಸಿನಿಮಾ ಸ್ಪರ್ಧೆ ನೀಡುತ್ತಿದೆ.

ಸಲ್ಲು ಚಿತ್ರದ ನಿರ್ದೇಶಕ ಹಾಗೂ ನಿರ್ಮಾಪಕರು ತೆಲುಗಿನವರು ಎಂಬುದು ಇಲ್ಲಿ ಗಮನಿಸಬೇಕಾದ ವಿಷಯ. ಪ್ರಭಾಸ್ ಚಿತ್ರದ ವಿರುದ್ಧ ಸಲ್ಮಾನ್ ಖಾನ್ ಅವರನ್ನು ಎತ್ತಿಕಟ್ಟುವ ಕೆಲಸ ಆಗಿದೆ ಎಂಬ ಮಾತು ಕೇಳಿ ಬಂದಿದೆ. ವಂಶಿ ಪೈಡಿಪಲ್ಲಿ ನಿರ್ದೇಶನ ಮಾಡಿದ ಮೊದಲ ಸಿನಿಮಾ ಮುನ್ನ. ಈ ಚಿತ್ರದಲ್ಲಿ ಪ್ರಭಾಸ್ ಜೊತೆ ಕೆಲಸ ಮಾಡಿದ್ದರು. ವಂಶಿ ಈಗ ಸಲ್ಮಾನ್ ಖಾನ್ ಜೊತೆ ಸಿನಿಮಾ ಮಾಡುತ್ತಿದ್ದಾರೆ. ಈ ಚಿತ್ರವನ್ನು ತೆಲುಗು ನಿರ್ಮಾಪಕ ದಿಲ್ ರಾಜು ಪ್ರೆಸೆಂಟ್ ಮಾಡುತ್ತಿದ್ದಾರೆ. ಅವರು ಕೂಡ ಟಾಲಿವುಡ್‌ನವರೇ. ಈ ಹೊಸ ಸಿನಿಮಾ 2027ರ ಮಾರ್ಚ್ 9-1ರಂದು ಈದ್ ಪ್ರಯುಕ್ತ ರಿಲೀಸ್ ಆಗಲಿದೆ. ಈದ್ ಬಾಲಿವುಡ್ ಪಾಲಿಗೆ ವಿಶೇಷ ಎನಿಸಿಕೊಂಡಿದೆ. ಸಲ್ಮಾನ್ ಖಾನ್ ಈ ದಿನಾಂಕ ಮಿಸ್ ಮಾಡುವುದೇ ಇಲ್ಲ. ಇನ್ನು, ಉಳಿದ ಕೆಲ ಸಿನಿಮಾಗಳು ಇದೇ ಸಂದರ್ಭದಲ್ಲಿ ತೆರೆಗೆ ಬರಹುದು. ಇನ್ನು, 'ಸ್ಪಿರಿಟ್' ಚಿತ್ರಕ್ಕೆ ದಕ್ಷಿಣದ ಹೆಚ್ಚು ಬೇಡಿಕೆ, ಸಲ್ಮಾನ್ ಸಿನಿಮಾಗೆ ಉತ್ತರ ಭಾರತದಲ್ಲಿ ಹೆಚ್ಚು ಬೇಡಿಕೆ ಇರುವುದರಿಂದ ಈ ಕ್ಲ್ಯಾಶ್ ಅನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲ ಎಂಬ ಮಾತು ಕೇಳಿ ಬಂದಿದೆ. ಇಷ್ಟೇ ಅಲ್ಲದೆ, ಸಲ್ಮಾನ್ ಅಥವಾ ಪ್ರಭಾಸ್ ಸಿನಿಮಾ ಪೈಕಿ ಯಾವುದಾದರೂ ಒಂದು ಸಿನಿಮಾ ಶೂಟಿಂಗ್ ವಿಳಂಬ ಕಾರಣಕ್ಕೆ ಮುಂದಕ್ಕೆ ಹೋದರೆ ದೊಡ್ಡ ಕ್ಲ್ಯಾಶ್ ಮಿಸ್ ಆಗಲಿದೆ.

# ಡಾ. ರಾಜ್‌ಕುಮಾರ್ ಜನ್ಮದಿನ: ಕನ್ನಡ ನಾಡಿನ ವರನಟನನ್ನು ನೆನೆದ ರಾಜಕೀಯ ಗಣ್ಯರು, ಸಿನಿಮಾ ತಾರೆಯರು



ಕರ್ನಾಟಕ ರತ್ನ, ವರನಟ ಡಾ. ರಾಜ್‌ಕುಮಾರ್ ಅವರಿಗೆ (ಏಪ್ರಿಲ್24) ಜನ್ಮದಿನ. ಅವರು ನಮ್ಮೊಂದಿಗೆ ಇದ್ದಿದ್ದರೆ, ಅವರ 97ನೇ ಹುಟ್ಟುಹಬ್ಬವನ್ನು ಆಚರಣೆ ಮಾಡಬಹುದಾಗಿತ್ತು. ದೈಹಿಕವಾಗಿ ಅಣ್ಣಾವ್ರು ನಮ್ಮೊಂದಿಗೆ ಇಲ್ಲವಾದರೂ, ಮಾನಸಿಕವಾಗಿ ಕನ್ನಡಿಗರ ಮನಸ್ಸೊಳಗೆ ಅವರು ಬೆರೆತು ಹೋಗಿದ್ದಾರೆ. ಅವರ ಜನ್ಮದಿನದ ನೆನಪಿಗಾಗಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಅನೇಕರು ಸ್ಮರಿಸಿದ್ದಾರೆ.

ನಟನಾಗಿ, ಗಾಯಕನಾಗಿ ಮಾತ್ರವಲ್ಲ ಕನ್ನಡ ನಾಡು, ನುಡಿಯ ಬಗೆಗೆ ರಾಜ್‌ಕುಮಾರ್ ಅವರಿಗಿದ್ದ ಪ್ರೀತಿ - ಬದ್ಧತೆಗೆ ಅವರೇ ಸಾಟಿ. ರಾಜ್‌ಕುಮಾರ್ ಎಂದಾಕ್ಷಣ ಥಟ್ಟನೆ ನೆನಪಾಗುವುದು ಅವರ ಸರಳತೆ, ಸಜ್ಜನಿಕೆ, ಅಕ್ಕರೆಯ ಮಾತುಗಳು. ಯಶಸ್ಸು, ಖ್ಯಾತಿ, ಸಂಪತ್ತು ಈ ಎಲ್ಲವೂ ಯಥೇಚ್ಛವಾಗಿ ಬಂದರೂ ರಾಜಣ್ಣನ ವ್ಯಕ್ತಿತ್ವ ಮಾತ್ರ ಬದಲಾಗಲಿಲ್ಲ, ಅವರು ಸಮಾಜಕ್ಕೆ ಮತ್ತಷ್ಟು ಹತ್ತಿರವಾಗುತ್ತಾ ಹೋದರು, ಸುತ್ತಲಿನ ಜನರನ್ನು ಹೆಚ್ಚು ಪ್ರೀತಿಸಲಾರಂಭಿಸಿದರು. ನಾಯಕ, ಖಳನಾಯಕ, ಪೋಷಕ ಹೀಗೆ ಪ್ರತಿಯೊಂದು ಪಾತ್ರಕ್ಕೂ ಜೀವತುಂಬುತ್ತಿದ್ದ ಅವರು ತಮ್ಮ ಅತ್ಯದ್ಭುತ ನಟನೆ, ಸುಮಧುರ ಕಂಠಸಿರಿಯ ಮೂಲಕ ಹಲವು ದಶಕಗಳ ಕಾಲ ಕನ್ನಡದ ಸಿನಿಪ್ರಿಯರನ್ನು ರಂಜಿಸಿದವರು.



ನಡೆ - ನುಡಿಯಲ್ಲೂ ರಾಜಕುಮಾರನಾಗಿ ಬಾಳಿದ ಮಹಾನ್ ಚೇತನಕ್ಕೆ ನನ್ನ ಅಭಿಮಾನಪೂರ್ವಕ ನಮನಗಳು ಎಂದು ಸಿಎಂ ಸಿದ್ದರಾಮಯ್ಯ ಬರೆದುಕೊಂಡಿದ್ದಾರೆ.

ಭಾರತೀಯ ಚಿತ್ರರಂಗದ ಧ್ರುವತಾರೆ, ಪದ್ಮಭೂಷಣ ಡಾ. ರಾಜ್ ಕುಮಾರ್ ಅವರ ಜನ್ಮದಿನದಂದು ಗೌರವ ನಮನಗಳನ್ನು ಸಲ್ಲಿಸುತ್ತೇನೆ.

ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯಾಗಿರುವ ಅವರು ಐತಿಹಾಸಿಕ ಹಾಗೂ ಪೌರಾಣಿಕ ಪಾತ್ರಗಳ ಮೂಲಕ ಕನ್ನಡ ಚಿತ್ರರಂಗ ಮತ್ತು ಸಾಂಸ್ಕೃತಿಕ ಲೋಕಕ್ಕೆ ನೀಡಿರುವ ಕೊಡುಗೆಗಳು ಸದಾ ಸ್ಮರಣೀಯ. ಕನ್ನಡದ ಅಸ್ಮಿತೆಯನ್ನೇ ಉಸಿರಾಗಿಸಿಕೊಂಡಿದ್ದ ಕರ್ನಾಟಕದ ರತ್ನ ರಾಜ್ ಅವರು, ಗೋಕಾಕ್ ಚಳವಳಿ ಸಂದರ್ಭದಲ್ಲಿ ಮುಂಚೂಣಿಯಲ್ಲಿದ್ದು ಕನ್ನಡ ಭಾಷೆ ಮತ್ತು ನಾಡಿನ ಹಿತಾಸಕ್ತಿಗಾಗಿ ಹೋರಾಡಿದ್ದನ್ನು ಯಾರು ಮರೆಯುವಂತಿಲ್ಲ. ಅಭಿಮಾನಿಗಳನ್ನು ದೇವರಂತೆ ಕಂಡ ಅವರ ನಡೆ, ನುಡಿ, ಸರಳತೆ ಮತ್ತು ವಿನಯ ಎಲ್ಲರಿಗೂ ಆದರ್ಶವಾಗಿದೆ ಎಂದು ಮಾಜಿ ಪ್ರಧಾನಿ ಎಚ್ ಡಿ ದೇವೇಗೌಡ ಅವರು ಟ್ವೀಟ್ ಮಾಡಿದ್ದಾರೆ.

ಡಾ. ರಾಜ್‌ಕುಮಾರ್ ಅವರ 97ನೇ ಹುಟ್ಟುಹಬ್ಬ

# ಕೊಲೆಗಾರನಿಗೆ ನಾಯಕನ ಪಟ್ಟ: ಲಾರೆನ್ಸ್ ಆಫ್ ಪಂಜಾಬ್ ಸಾಕ್ಷ್ಯಚಿತ್ರ ನಿಷೇಧ




ನಾಯಕ ಎಂದರೆ ಒಳ್ಳೆಯವ, ಮಹಿಳೆಯರ ಘನತೆ ಕಾಪಾಡುವವ, ಶಿಷ್ಟರ ರಕ್ಷಣೆ ಮಾಡುವಾತ, ಸುಳ್ಳು ಹೇಳದವ, ಅನ್ಯಾಯದ ವಿರದ್ಧ ಹೋರಾಡುವವ, ಹಣಕ್ಕಾಗಿ ತನ್ನ ಆದರ್ಶ ತ್ಯಜಿಸದವ, ಹಿಂಸೆಯ ವಿರುದ್ಧ ನಿಲ್ಲುವವ. ಆದರೆ ಇತ್ತೀಚೆಗಿನ ಸಿನಿಮಾಗಳಲ್ಲಿ ನಾಯಕ ಎಂದರೆ ರೌಡಿ, ಮಹಿಳಾ ಪೀಡಕ, ಹಿಂಸೆಯನ್ನು ಎಂಜಾಯ್ ಮಾಡುವವ ಎಂದಾಗಿದೆ. ಆದರೆ ಈಗ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ, ನಿಜ ಜೀವನದಲ್ಲಿ ರೌಡಿ, ಭೂಗತ ಪಾತಕಿ, ಕೊಲೆಗಾರರ ಆಗಿರುವವನನ್ನು 'ನಾಯಕ'ನನ್ನಾಗಿಸಲಾಗುತ್ತಿದೆ. ಇಂಥಹದೇ ಥೀಮ್‌ನ ಒಂದು ಡಾಕ್ಯು ಸೀರೀಸ್ ಒಂದು ಬಿಡುಗಡೆ ಆಗಲಿದ್ದು, ಅದರ ಹೆಸರು 'ಲಾರೆನ್ಸ್ ಆಫ್ ಪಂಜಾಬ್ ಇದರ ನಿಷೇಧಕ್ಕೆ ಈಗ ಒತ್ತಾಯ ಕೇಳಿಬಂದಿತ್ತು.

ಅದರಂತೆ ಸರ್ಕಾರ ಇದೀಗ ಡಾಕ್ಯು ಸೀರೀಸ್ ಬಿಡುಗಡೆಗೆ ನಿಷೇಧ ಹೇರಿದೆ. ಲಾರೆನ್ಸ್ ಆಫ್ ಪಂಜಾಬ್ ಡಾಕ್ಯು ಸೀರೀಸ್ (ಸಾಕ್ಷ್ಯ ಸರಣಿ) ಕುಖ್ಯಾತ ಭೂಗತ ಪಾತಕಿ ಲಾರೆನ್ಸ್ ಬಿಷ್ಣೋಯಿ ಕುರಿತಾಗಿದ್ದಾಗಿದೆ. ಸಾಕ್ಷ್ಯ ಸರಣಿ ಆಗಿದ್ದು, ನಿಜ ವ್ಯಕ್ತಿ, ದೃಶ್ಯಗಳು, ವಿಡಿಯೋಗಳ ಜೊತೆಗೆ ಚಿತ್ರೀಕರಿಸಿದ ದೃಶ್ಯಗಳನ್ನು ಸಹ ಒಳಗೊಂಡಿತ್ತು. ಈ ಸಾಕ್ಷ್ಯ ಸರಣಿಯಲ್ಲಿ ಲಾರೆನ್ಸ್ ಬಿಷ್ಣೋಯಿಯನ್ನು ಹೀರೋ ಎಂಬಂತೆ ಬಿಂಬಿಸಲಾಗಿದೆ ಎಂಬ ಆರೋಪವಿತ್ತು. ಇಲ್ಲಿ ತಿಳಿಯಬೇಕಾದ ವಿಷಯವೆಂದರೆ ಲಾರೆನ್ಸ್ ಬಿಷ್ಣೋಯಿ ಪಾತಕಿ ಆಗಿದ್ದು, ಆತನ ಮೇಲೆ 80ಕ್ಕೂ ಅಧಿಕ ಪ್ರಕರಣಗಳು ದಾಖಲಾಗಿವೆ. ಅವುಗಳಲ್ಲಿ ಬಹುತೇಕ ಕ್ರಿಮಿನಲ್ ಪ್ರಕರಣಗಳು. ಕೊಲೆ, ಅತ್ಯಾಚಾರ, ವಂಚನೆ, ಬೆದರಿಕೆ, ವಸೂಲಿ, ಸುಲಿಗೆ ಇನ್ನೂ ಹಲವು.

ಆರು ಗಂಭೀರ ಪ್ರಕರಣಗಳಲ್ಲಿ ಲಾರೆನ್ಸ್ ಅಪರಾಧಿ ಎಂದು ಈಗಾಗಲೇ ಘೋಷಣೆ ಸಹ ಆಗಿದೆ. ಇಂಥಹಾ ವ್ಯಕ್ತಿಯ ಬಗ್ಗೆ ಇದೀಗ ಸಾಕ್ಷ್ಯಚಿತ್ರ ನಿರ್ಮಿಸಲಾಗಿದೆ.

## ದಿ ಕೇರಳ ಸ್ಟೋರಿ 2 ಸಿನಿಮಾ ಒಟಿಟಿ ಬಿಡುಗಡೆ ದಿನಾಂಕ ಪ್ರಕಟ



ದಿ ಕೇರಳ ಸ್ಟೋರಿ ಸಿನಿಮಾ 2023 ರಲ್ಲಿ ಬಿಡುಗಡೆ ಆಗಿತ್ತು. ಕೇರಳದಲ್ಲಿ ನಡೆದ ಮತಾಂತರರ ಬಗೆಗಿನ ಸಿನಿಮಾ ಇದೆಂದು ಹೇಳಲಾದ ಈ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ದೊಡ್ಡ ಗೆಲುವು ಕಂಡಿತ್ತು. ಸಾಕಷ್ಟು ವಿರೋಧವೂ ಸಹ ಸಿನಿಮಾಕ್ಕೆ ವ್ಯಕ್ತವಾಗಿತ್ತು. ಇದೇ ವರ್ಷ ಫೆಬ್ರವರಿ ತಿಂಗಳಲ್ಲಿ ದಿ ಕೇರಳ ಸ್ಟೋರಿ 2 ಸಿನಿಮಾ ಬಿಡುಗಡೆ ಆಯ್ತು. ಈ ಸಿನಿಮಾಕ್ಕೂ ಸಹ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ವಿರೋಧ ವ್ಯಕ್ತವಾಗಿತ್ತು. ಆದರೂ ಬಾಕ್ಸ್ ಆಫೀಸ್‌ನಲ್ಲಿ ತಕ್ಕ ಮಟ್ಟಿಗೆ ಉತ್ತಮ ಪ್ರದರ್ಶನವನ್ನೇ ಕಂಡ ಈ ಸಿನಿಮಾ ಇದೀಗ ಒಟಿಟಿಗೆ ಬರುತ್ತಿದೆ. ವಿಪುಲ್ ಅಮೃತಲಾಲ್ ಶಾ ನಿರ್ದೇಶಿಸಿ, ನಿರ್ಮಾಣ ಮಾಡಿರುವ **ದಿ ಕೇರಳ ಸ್ಟೋರಿ 2:** ಗೋಸ್ ಬಿಯಾಂಡ್ ಜೀ5 ಒಟಿಟಿಯಲ್ಲಿ ಸ್ಟ್ರೀಮಿಂಗ್ ಆರಂಭಿಸಲಿದೆ. ಸಿನಿಮಾವು ಮೇ 8 ರಂದು ಬಿಡುಗಡೆ ಆಗಲಿದ್ದು, ಹಿಂದಿ ಮಾತ್ರವಲ್ಲದೆ ಇತರೆ ಕೆಲ ಭಾಷೆಗಳಲ್ಲಿಯೂ ಸಿನಿಮಾ ವೀಕ್ಷಣೆಗೆ ಲಭ್ಯವಾಗಲಿದೆ. ಚಿತ್ರಮಂದಿರಗಳಲ್ಲಿ ಬಿಡುಗಡೆಯಾದ 10 ವಾರಗಳ ನಂತರ ಈ ಸಿನಿಮಾ ಡಿಜಿಟಲ್ ಪರದೆಯ ಮೇಲೆ ಬರುತ್ತಿದೆ. ಫೆಬ್ರವರಿ 27 ರಂದು ಈ ಚಿತ್ರವು ಥಿಯೇಟರ್‌ಗಳಲ್ಲಿ ಬಿಡುಗಡೆಯಾಗಿತ್ತು. ಕಾಮಾಖ್ಯ ನಾರಾಯಣ್ ಸಿಂಗ್ ನಿರ್ದೇಶನದ ಈ ಚಿತ್ರದಲ್ಲಿ ಐಶ್ವರ್ಯಾ ಓಜಾ, ಉಲ್ಕಾ ಗುಪ್ತಾ ಮತ್ತು ಅದಿತಿ ಭಾಟಿಯಾ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

# ತಮನ್ನಾ ಭಾಟಿಯಾ ದೇಹದ ಬಗ್ಗೆ ಕೀಳು ಹೇಳಿಕೆ, ಕಾಲಿಗೆ ಬೀಳಲು ರೆಡಿ ಎಂದ ನಟ

ಅನ್ನು ಕಪೂರ್ ಬಾಲಿವುಡ್ ಮತ್ತು ಹಿಂದಿ ಟಿವಿ ರಂಗದ ಬಲು ಹಿರಿಯ ನಟ. ರಾಜ್‌ಶ್ರೀ ಪಾನ್ ಮಸಾಲ ಜಾಹೀರಾತುಗಳಿಂದ ಅಂತೂ ಭಾರಿ ಜನಪ್ರಿಯತೆಯನ್ನು ಅನ್ನು ಕಪೂರ್ ಪಡೆದುಕೊಂಡಿದ್ದಾರೆ. ಒಂದಿಲ್ಲೊಂದು ಸಂದರ್ಶನ, ಪಾಡ್‌ಕಾಸ್ಟ್‌ಗಳಲ್ಲಿ ಕಾಣಿಸಿಕೊಳ್ಳುತ್ತಲೇ ಇರುವ ಅನ್ನು ಕಪೂರ್, ಇತರೆ ನಟ-ನಟಿಯರ ಬಗ್ಗೆ ಮಾತನಾಡುವುದು ತುಸು ಹೆಚ್ಚು. ಇತ್ತೀಚೆಗೆ ಸಂದರ್ಶನವೊಂದರಲ್ಲಿ ಮಾತನಾಡುತ್ತಾ, ನಟಿ ತಮನ್ನಾ ಭಾಟಿಯಾ ಅವರ ದೇಹದ ಬಗ್ಗೆ ಕೀಳು ಅಭಿರುಚಿಯಿಂದ ಮಾತನಾಡಿದ್ದರು. ನೆಟ್ಟಿಗರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಹಿರಿಯ ನಟ ಅನ್ನು ಕಪೂರ್ ಒಂದು ಸಂದರ್ಶನದಲ್ಲಿ ತಮನ್ನಾ ಅವರ ಆಜ್ ಕಿ ರಾತ್' ಐಟಂ ಹಾಡಿನ ಬಗ್ಗೆ ಮಾತನಾಡುತ್ತಾ, ಅವರ ದೇಹವನ್ನು ಹಿಂದಿಯಲ್ಲಿ ದೂಧಿಯಾ ಬದನ್ (ಹಾಲಿನಂಥ ಮೈಮಾಟ) ಎಂದು ಬಣ್ಣಿಸಿದ್ದರು. ಹಿಂದಿಯಲ್ಲಿ ಇದು ತುಸು ಅಶ್ಲೀಲ ಅರ್ಥ ನೀಡುವ ಮಾತಾಗಿದೆ. ಈ ಹೇಳಿಕೆಗೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು ಮತ್ತು ಅನೇಕರು ಇದನ್ನು 'ಅಶ್ಲೀಲ ಮಹಿಳೆಯ ಬಗ್ಗೆ ಅಗೌರವ ಎಂದು ಟೀಕಿಸಿದ್ದರು.ಅನ್ನು ಕಪೂರ್ ಅವರು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಳ್ಳುತ್ತಾ, ಇಂಗ್ಲಿಷ್‌ನಲ್ಲಿ 'ಮಿಲ್ಕಿ ಬಾಡಿ ಎಂದರೆ ಯಾರೂ ಆಕ್ಷೇಪಿಸುವುದಿಲ್ಲ, ಆದರೆ ನಾನು ಹಿಂದಿಯಲ್ಲಿ ಹೇಳಿದ್ದಕ್ಕೆ ಜನರಿಗೆ ಸಮಸ್ಯೆಯಾಗಿದೆ. ನಮ್ಮ ಸ್ವಂತ ಭಾಷೆಯಲ್ಲಿ ಹೇಳಿದ್ದು ಹೆಚ್ಚು ಚುಚ್ಚಿದಂತೆ ಕಾಣುತ್ತದೆ' ಎಂದು ಸಮಜಾಯಿಷಿ ಕೊಟ್ಟಿದ್ದಾರೆ. ನಾನು ಅವರ ದೇಹವನ್ನು ಕೇವಲ ಶ್ಲಾಘಿಸಿದ್ದೇನೆಯೇ ಹೊರತು ಯಾವುದೇ ಕೆಟ್ಟ ದೃಷ್ಟಿಯಿಂದ ಅಥವಾ ಕಾಮದ ದೃಷ್ಟಿಯಿಂದ ನೋಡಿಲ್ಲ. 71 ವರ್ಷದ ವ್ಯಕ್ತಿಯಾದ ನನಗೆ ಅವರ ವಯಸ್ಸಿನ ಮಕ್ಕಳಿದ್ದಾರೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಈ ಹೇಳಿಕೆಯಿಂದ ನಟಿ ತಮನ್ನಾ ಅವರಿಗೆ ಬೇಸರವಾಗಿದ್ದರೆ ಕ್ಷಮೆಯಾಚಿಸಲು ತಮಗೆ ಯಾವುದೇ ಮುಜುಗರವಿಲ್ಲ.



# ಸ್ಟೇಡಿಯಂನಿಂದ ಹೊರಹೋದ ಮುಂಬೈ ಮಾಲೀಕ ಆಕಾಶ್ ಅಂಬಾನಿ



ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ (ವಿರುದ್ಧ ಹೀನಾಯವಾಗಿ ಸೋತಿದೆ. ತಂಡದ ಮಾಲೀಕ ಆಕಾಶ್ ಅಂಬಾನಿ ಪಂದ್ಯ ಮುಗಿಯುವ ಮೊದಲೇ ಕ್ರೀಡಾಂಗಣದಿಂದ ಹೊರನಡೆದರು. ಐಪಿಎಲ್ ಇತಿಹಾಸದಲ್ಲಿ ಚೆನ್ನೈ ವಿರುದ್ಧ ಮುಂಬೈ ತಂಡವು ರನ್‌ಗಳ ವಿಷಯದಲ್ಲಿ ಅತಿದೊಡ್ಡ ಸೋಲನ್ನು ಅನುಭವಿಸಿತು. ವಾಂಖೆಡೆಯಲ್ಲಿ ಮುಂಬೈ 103 ರನ್‌ಗಳಿಂದ ಸೋತಿತು. ಮುಂಬೈ ಸೋಲುತ್ತಿರುವುದನ್ನು ಕಂಡ ಆಕಾಶ್ ಅಂಬಾನಿ, ಪಂದ್ಯ ಮುಗಿಯುವವರೆಗೆ ಕಾಯದೆ ಕ್ರೀಡಾಂಗಣದಿಂದ ನಿರ್ಗಮಿಸಿದರು.

ಚೆನ್ನೈ ತಂಡವು ನೀಡಿದ 208 ರನ್ ಗುರಿ ಬೆನ್ನಟ್ಟಿ ಮುಂಬೈ ಬ್ಯಾಟಿಂಗ್ ಲೈನ್ ಯಾವುದೇ ಹೋರಾಟವಿಲ್ಲದೆ ಶರಣಾಗುವುದನ್ನು ನೋಡಿ, ಆಕಾಶ್ ಅಂಬಾನಿ ಅವರ ಮುಖವು ಸ್ಪಷ್ಟವಾಗಿ ನಿರಾಶೆಗೊಂಡಿತ್ತು. ಪಂದ್ಯ ಅರ್ಧ ಮುಗಿದ ತಕ್ಷಣ ಅವರು ಡಗೌಟ್‌ನಿಂದ ಹೊರಬಂದರು. ಕ್ರೀಡಾಂಗಣದಿಂದ ಹೊರನಡೆಯುವಾಗ ಗ್ಯಾಲರಿಯಲ್ಲಿದ್ದ ಅಭಿಮಾನಿಗಳಿಗೆ ಅವರು ಕೋಪದಿಂದ ಸನ್ನೆ ಮಾಡುತ್ತಿರುವ ದೃಶ್ಯಗಳು ಸಹ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದೆ. ಮುಂಬೈ ಆಡಳಿತ ಮಂಡಳಿ ಮತ್ತು ಆಟಗಾರರ ನಡುವಿನ ಉದ್ವಿಗ್ನತೆಯ ಬಗ್ಗೆಯೂ ಸಕ್ರಿಯ ಚರ್ಚೆಗಳು ನಡೆಯುತ್ತಿವೆ. ಚೆನ್ನೈ ತಂಡವು ನೀಡಿದ್ದ 208 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಐದು ಬಾರಿಯ ಚಾಂಪಿಯನ್ ಮುಂಬೈ ತಂಡವು ಕೇವಲ 104 ರನ್‌ಗಳಿಗೆ ಆಲೌಟ್ ಆಯಿತು. ಆಡಿದ ಏಳು ಪಂದ್ಯಗಳಲ್ಲಿ ಐದರಲ್ಲಿ ಸೋತಿರುವ ಮುಂಬೈ ತಂಡವು ಪಾಯಿಂಟ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. ಪ್ಲೇ-ಆಫ್ ಅವಕಾಶಗಳನ್ನು ಜೀವಂತವಾಗಿಡಲು ತಂಡವು ಉಳಿದಿರುವ ಎಲ್ಲಾ ಪಂದ್ಯಗಳನ್ನು ಗೆಲ್ಲಲೇಬೇಕು.

ರೋಹಿತ್ ಶರ್ಮಾ ಅವರಿಂದ ನಾಯಕತ್ವವಹಿಸಿಕೊಂಡ ಹಾರ್ದಿಕ್ ಪಾಂಡ್ಯ ಅವರ ನಾಯಕತ್ವದಲ್ಲಿ ಮುಂಬೈ ತಂಡವು ಇನ್ನೂ ತನ್ನ ಲಯ ಕಂಡುಕೊಂಡಿಲ್ಲ. ಹಾರ್ದಿಕ್ (97 ರನ್), ಸೂರ್ಯಕುಮಾರ್ ಯಾದವ್ (156 ರನ್) ಮತ್ತು ಜಸ್ಪ್ರೀತ್ ಬುಮ್ರಾ (2 ವಿಕೆಟ್) ಅವರಂತಹ ದೊಡ್ಡ ಆಟಗಾರರ ಫಾರ್ಮ್ ಕೊರತೆಯು ಈ ಋತುವಿನಲ್ಲಿ ತಂಡವನ್ನು ದುರ್ಬಲಗೊಳಿಸಿದೆ. ಯುವ ಆಟಗಾರ ತಿಲಕ್ ವರ್ಮಾ (181 ರನ್) ಮಾತ್ರ ತಂಡದಲ್ಲಿರುವ ಏಕೈಕ ಸಮಾಧಾನಕರ ಅಂಶ. ಆದಾಗ್ಯೂ, ಮುಖ್ಯ ಕೋಚ್ ಮಹೇಲ ಜಯವರ್ಧನೆ ಅವರು ಯಾವುದೇ ಆಟಗಾರರು ಫಾರ್ಮ್‌ನಲ್ಲಿಲ್ಲ ಮತ್ತು ಸಮಸ್ಯೆ ಸ್ಥಿರತೆಯ ಕೊರತೆ ಎಂದು ಹೇಳಿದರು. ನಾವು ಬ್ಯಾಟಿಂಗ್ ಮತ್ತು ಬೌಲಿಂಗ್‌ನಲ್ಲಿ ವಿಫಲರಾಗಿದ್ದೇವೆ. ವಿಶ್ವಕಪ್ ನಂತರದ ವಿರಾಮವನ್ನು ಸೋಲಿಗೆ ದೂಷಿಸಲಾಗುವುದಿಲ್ಲ. ಮುಂಬರುವ ಪಂದ್ಯಗಳಲ್ಲಿ ನಾವು ಶಿಸ್ತಿನಿಂದ ಆಡಿದರೆ ಮಾತ್ರ, ನಾವು ಚೇತರಿಸಿಕೊಳ್ಳಬಹುದು ಎಂದು ಜಯವರ್ಧನೆ ಸ್ಪಷ್ಟಪಡಿಸಿದರು.

# ಮುಂಬೈ ವಿರುದ್ಧ ಸಾಧನೆ ಮಾಡಿದ ಸಂಜು ಸ್ಯಾಮ್ಸನ್

10 ಬೌಂಡರಿ ಮತ್ತು 6 ಸಿಕ್ಸರ್

54 ಎಸೆತ 101 ರನ್



ಐಪಿಎಲ್ 2026 ರ 33ನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಮಣಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಲೀಗ್‌ನಲ್ಲಿ ತನ್ನ ಮೂರನೇ ಗೆಲುವು ದಾಖಲಿಸಿತು. ಸಿಎಸ್‌ಕೆ ತಂಡದ ಈ ಗೆಲುವಿನಲ್ಲಿ ಸ್ಟಾರ್ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಸಂಜು ಸ್ಯಾಮ್ಸನ್ ಸಿಡಿಸಿದ ಸ್ಮರಣೀಯ ಶತಕ. ತಮ್ಮ ಇನ್ನಿಂಗ್ಸ್‌ನಲ್ಲಿ 54 ಎಸೆತಗಳನ್ನು ಎದುರಿಸಿದ ಅಜೇಯ 101 ರನ್ ಬಾರಿಸಿದರು. ಅವರ ಇನ್ನಿಂಗ್ಸ್‌ನಲ್ಲಿ 10 ಬೌಂಡರಿ ಮತ್ತು 6 ಸಿಕ್ಸರ್‌ಗಳು ಸೇರಿದ್ದವು. ಇದರೊಂದಿಗೆ ಅವರು ಪ್ರಮುಖ ದಾಖಲೆಯನ್ನು ನಿರ್ಮಿಸಿದರು. ಐಪಿಎಲ್ ಇತಿಹಾಸದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಟಗಾರನೊಬ್ಬ ಮುಂಬೈ ಇಂಡಿಯನ್ಸ್ ವಿರುದ್ಧ ಶತಕ ಗಳಿಸಿದ್ದು ಇದೇ ಮೊದಲು. ಇದಕ್ಕೂ ಮೊದಲು, ಸಿಎಸ್‌ಕೆ ಬ್ಯಾಟ್ಸ್‌ಮನ್ ರುತುರಾಜ್ ಗಾಯಕ್ವಾಡ್ ಮುಂಬೈ ವಿರುದ್ಧ ಅತಿ ಹೆಚ್ಚು ಅಂದರೆ ಅಜೇಯ 88 ರನ್ ಬಾರಿಸಿದ್ದು, ಈವರೆಗಿನ ದಾಖಲೆಯಾಗಿತ್ತು. ಇದೀಗ ಅವರ ದಾಖಲೆಯನ್ನು ಸಂಜು ಸ್ಯಾಮ್ಸನ್ ಮುರಿದಿದ್ದಾರೆ. ಇದು ಐಪಿಎಲ್ 2026ರಲ್ಲಿ ಸಂಜು ಸ್ಯಾಮ್ಸನ್ ಅವರ ಎರಡನೇ ಶತಕವಾಗಿದೆ.

ಇದರೊಂದಿಗೆ, ಒಂದೇ ಆವೃತ್ತಿಯಲ್ಲಿ ಎರಡು ಶತಕಗಳನ್ನು ಬಾರಿಸಿದ ಎರಡನೇ ಚೆನ್ನೈ ಸೂಪರ್ ಕಿಂಗ್ಸ್ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಇದಕ್ಕೂ ಮೊದಲು ಶೇನ್ ವ್ಯಾಟ್ಸನ್ 2018ರಲ್ಲಿ ಅತ್ಯಧಿಕ ಶತಕ ಗಳಿಸಿದ್ದರು. ಸಂಜು ಸ್ಯಾಮ್ಸನ್ ಈಗ ಐಪಿಎಲ್‌ನಲ್ಲಿ ಸಿಎಸ್‌ಕೆ ಪರ ಅತಿ ಹೆಚ್ಚು ಶತಕ ಸಿಡಿಸಿದ ಬ್ಯಾಟ್ಸ್‌ಮನ್‌ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಸಿಎಸ್‌ಕೆ ಪರ ತಲಾ ಎರಡು ಶತಕಗಳನ್ನುಗಳಿಸಿದ ರುತುರಾಜ್ ಗಾಯಕ್ವಾಡ್, ಮುರಳಿ ವಿಜಯ್ ಮತ್ತು ಶೇನ್ ವ್ಯಾಟ್ಸನ್ ಅವರೊಂದಿಗೆ ಇದೀಗ ಸಂಜು ಸ್ಯಾಮ್ಸನ್ ಕೂಡ ಸೇರಿಕೊಂಡಿದ್ದಾರೆ. ಹಾಗೆಯೇ ಟಿ20 ಕ್ರಿಕೆಟ್‌ನಲ್ಲಿ ಸಂಜು ಸ್ಯಾಮ್ಸನ್ ಇದುವರೆಗೆ ಎಂಟು ಶತಕಗಳನ್ನು ಬಾರಿಸಿದ್ದು, ಈ ಮೂಲಕ ಅತಿ ಹೆಚ್ಚು ಶತಕ ಬಾರಿಸಿದ ಭಾರತದ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ರೋಹಿತ್ ಶರ್ಮಾ ಕೂಡ ಎಂಟು ಶತಕಗಳನ್ನುಗಳಿಸಿದ್ದಾರೆ. ಅದೇ ಸಮಯದಲ್ಲಿ, ವಿರಾಟ್ ಕೊಹ್ಲಿ ಮತ್ತು ಅಭಿಷೇಕ್ ಶರ್ಮಾ ತಲಾ ಒಂಬತ್ತು ಶತಕಗಳೊಂದಿಗೆ ಮೊದಲನೇ ಸ್ಥಾನದಲ್ಲಿದ್ದಾರೆ.

# ಎಂಎಸ್ ಧೋನಿಗಾಗಿ ಕಾದ ಅಭಿಮಾನಿಗಳಿಗೆ ಸಿಕ್ಕು ಮತ್ತೊಂದು ಬ್ಯಾಡ್ ನ್ಯೂಸ್

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟ್ಸಮನ್ ಹಾಗೂ ಕೀಪರ್ ಎಂಸ್ ಧೋನಿಗೆ ಸ್ನಾಯು ಸೆಳೆತವಿದ್ದು, ಐಪಿಎಲ್ ಆರಂಭ ಆದ ಮೊದಲ ಎರಡು ವಾರ ಅವರು ಲಭ್ಯವಿರುವುದಿಲ್ಲ ಎಂದು ಕೇಳಿ ಅಭಿಮಾನಿಗಳು ಬೇಸರಗೊಂಡರು. ಆದರೆ, ಈಗ ಧೋನಿ ಈಗ ಸತತ ಏಳು ಮ್ಯಾಚ್ ಗಳನ್ನು ಮಿಸ್ ಮಾಡಿಕೊಂಡಿದ್ದಾರೆ. ಈಗ ಅವರ ಬರುವಿಕೆಗಾಗಿ ಕಾದು ಕುಳಿತ ಫ್ಯಾನ್ಸ್‌ಗೆ ಬೇಸರ ಆಗುವ ಸುದ್ದಿಯೊಂದು ಬಂದಿದೆ. ಧೋನಿ ಅವರು ಇತ್ತೀಚೆಗೆ ಪ್ರ್ಯಾಕ್ಟಿಸ್ ಮಾಡುತ್ತಿರುವ ವಿಡಿಯೋ ವೈರಲ್ ಆಗಿತ್ತು. ಇದನ್ನು ನೋಡಿದ ಅನೇಕರು ಧೋನಿ ಮುಂಬೈ ವಿರುದ್ಧದ ಪಂದ್ಯಕ್ಕೆ ಫೀಲ್‌ಗೆ ಇಳಿಯುತ್ತಾರೆ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ, ಹಾಗಾಗಿಲ್ಲ. ಅವರು ಮುಂಬೈ ವಿರುದ್ಧದ ಪಂದ್ಯ ಮಿಸ್ ಮಾಡಿಕೊಂಡಿದ್ದಾರೆ. ಅವರು ಫೀಲ್ಡ್‌ಗೆ ಇಳಿಯದ್ದಕ್ಕೆ ಕಾರಣ ಸಿಕ್ಕಿದೆ. ಸಿಎಸ್‌ಕೆ ಬ್ಯಾಟಿಂಗ್ ಕೋಚ್ ಮೈಕಲ್ ಹಸ್ಸಿ ಈ ವಿಷಯ ರಿವೀಲ್ ಮಾಡಿದ್ದಾರೆ. ಧೋನಿ ಉತ್ತಮವಾಗಿ ಚೇತರಿಕೆ ಕಾಣುತ್ತಿದ್ದಾರೆ. ಅವರು ನೂರಕ್ಕೆ ನೂರು ಪರ್ಸೆಂಟ್ ರೆಡಿ ಆದರು ಎಂದು ಅನಿಸುವವರೆಗೂ ಅವರು ಮೈದಾನಕ್ಕೆ ಇಳಿಯುವುದಿಲ್ಲ ಎಂದಿದ್ದಾರೆ.



# ಕನ್ನಡಿಗ ಪಡಿಕ್ಕಲ್, ಕಿಂಗ್ ಕೊಹ್ಲಿ ಆರ್ಭಟಕ್ಕೆ ಟೈಟನ್ಸ್ ಧೂಳೀಪಟ! ಗುಜರಾತ್ ಮಣಿಸಿ 2ನೇ ಸ್ಥಾನಕ್ಕೇರಿದ ಆರ್‌ಸಿಬಿ



ಬೆಂಗಳೂರಿನ ಎಂ. ಚಿನ್ನಸ್ವಾಮಿ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಬಿ ಭರ್ಜರಿ ಬ್ಯಾಟಿಂಗ್ ಪ್ರದರ್ಶನ ತೋರಿ ಗುಜರಾತ್ ವಿರುದ್ಧ ವಿಕೆಟ್‌ಗಳ ಜಯ ಸಾಧಿಸಿದೆ. ಟಾಸ್ ಸೋತು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟನ್ಸ್ 20 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 205 ರನ್‌ಗಳಿಸಿತ್ತು. ಸಾಯಿ ಸುದರ್ಶನ್ ಶತಕ ಸಿಡಿಸಿ ತಂಡಕ್ಕೆ ನೆರವಾಗಿದ್ದರು. ತವರಿನ ಮೈದಾನದಲ್ಲಿ ಕೊನೆಯ ಲೀಗ್ ಪಂದ್ಯವನ್ನಾಡಿದ ಹಾಲಿ ಚಾಂಪಿಯನ್ ತಂಡ ಗುಜರಾತ್ ಟೈಟನ್ಸ್ ನೀಡಿದ್ದ 206 ರನ್‌ಗಳ ಗುರಿಯನ್ನ ಆರ್‌ಸಿಬಿ 18.5 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಗುರಿ ತಲುಪಿತು.

206 ರನ್‌ಗಳ ಗುರಿ ಬೆನ್ನಟ್ಟಿದ ಆರ್‌ಸಿಬಿ ನಿರೀಕ್ಷಿತ ಆರಂಭ ಪಡೆಯಲಿಲ್ಲ. ತಂಡದ ಮೊತ್ತ 26 ರನ್‌ಗಳಾಗುವಷ್ಟರಲ್ಲಿ ಜೇಕಬ್ ಬೆಥೆಲ್ (14) ರೂಪದಲ್ಲಿ ಮೊದಲ ವಿಕೆಟ್ ಕಳೆದುಕೊಂಡಿತು. ಬೆಥೆಲ್ ಕಟ್ ಶಾಟ್ ಮಾಡಲು ಹೋಗಿ ಶಾರುಖ್ ಖಾನ್‌ಗೆ ಕ್ಯಾಚ್ ನೀಡಿದರು. ಆದರೆ 2ನೇ ವಿಕೆಟ್ ಜೊತೆಯಾಟದಲ್ಲಿ ಒಂದಾದ ದೇವದತ್ ಪಡಿಕ್ಕಲ್ ಹಾಗೂ ಕೊಹ್ಲಿ ಮ್ಯಾಚ್ ವಿನ್ನಿಂಗ್ ಆಟವಾಡಿದರು. ಈ ಜೋಡಿ 59 ಎಸೆತಗಳಲ್ಲಿ 115 ರನ್‌ಗಳ ಜೊತೆಯಾಟ ನಡೆಸಿದರು. ಸ್ಫೋಟಕ ಬ್ಯಾಟಿಂಗ್ ಮಾಡಿದ ಕನ್ನಡಿಗ ಪಡಿಕ್ಕಲ್ 27 ಎಸೆತಗಳಲ್ಲಿ 2 ಬೌಂಡರಿ, 6 ಸಿಕ್ಸರ್‌ಗಳ ಸಹಿತ 55 ರನ್‌ಗಳಿಸಿದರು. ಪಡಿಕ್ಕಲ್ ರಶೀದ್ ಖಾನ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು. ಮುಂದಿನ ಓವರ್‌ನಲ್ಲಿ ವಿರಾಟ್ ಕೊಹ್ಲಿ ಕೂಡ ವಿಕೆಟ್ ಒಪ್ಪಿಸಿದರು. ಶತಕದತ್ತ ಮುನ್ನುಗ್ಗುತ್ತಿದ್ದ ವಿರಾಟ್ 44 ಎಸೆತಗಳಲ್ಲಿ 8 ಬೌಂಡರಿ, 4 ಸಿಕ್ಸರ್‌ಗಳ ಸಹಿತ 81 ರನ್‌ಗಳಿಸಿ ಹೋಲ್ಡರ್ ಬೌಲಿಂಗ್‌ನಲ್ಲಿ ಬೌಲ್ಡ್ ಆದರು.

**6,6,6,6,6,6.. 20 ಎಸೆತಗಳಲ್ಲಿ ಅರ್ಧಶತಕ ಚಚ್ಚಿದ ದೇವದತ್ ಪಡಿಕ್ಕಲ್:** ಐಪಿಎಲ್ 2026ರ 34ನೇ ಪಂದ್ಯವು ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟಾನ್ಸ್ ನಡುವೆ ನಡೆಯಿತು. ಈ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ನೀಡಿರುವ 207 ರನ್‌ಗಳ ಗುರಿ ಬೆನ್ನಟ್ಟಿದ ಆರ್‌ಸಿಬಿ ಪರ ಲೋಕಲ್ ಬಾಯ್ ದೇವದತ್ ಪಡಿಕ್ಕಲ್ ಅಬ್ಬರದ ಅರ್ಧಶತಕ ಬಾರಿಸಿದರು.

# ಭಾರತದಲ್ಲಿ ಸಮಯ ವ್ಯರ್ಥ: ಜೇಕಬ್ ಬೆಥೆಲ್ ಐಪಿಎಲ್ ಬದಲಿಗೆ ಕೌಂಟಿ ಆಡಬೇಕು




ಜೇಕಬ್ ಬೆಥೆಲ್ ವಿಶ್ವದ ಅತ್ಯಂತ ಭರವಸೆಯ ಪ್ರತಿಭೆಗಳಲ್ಲಿ ಒಬ್ಬರು ಮತ್ತು ಖಂಡಿತವಾಗಿಯೂ ಇಂಗ್ಲೆಂಡ್‌ನಲ್ಲಿ ಹೆಚ್ಚು ಚರ್ಚಿಸಲ್ಪಡುವ ವ್ಯಕ್ತಿ. 22 ವರ್ಷದ ಈ ಆಟಗಾರ ಇಂಗ್ಲೆಂಡ್ ಪರ ಎಲ್ಲಾ ಮಾದರಿಗಳಲ್ಲಿ ಶತಕ ಬಾರಿಸಿದ ಅತ್ಯಂತ ಕಿರಿಯ ಆಟಗಾರರಾಗಿದ್ದಾರೆ. ಅವರು ಈಗಾಗಲೇ ವಿದೇಶದಲ್ಲಿ ನಡೆದ ಆಶಸ್ ಮತ್ತು ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ಶತಕ ಗಳಿಸಿದ್ದಾರೆ. ಆದಾಗ್ಯೂ, ಬೆಥೆಲ್ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) 2026ರಲ್ಲಿ ಬೆಂಚ್ ಕಾಯುತ್ತಿದ್ದಾರೆ.

2024ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಬೆಥೆಲ್ ಅವರನ್ನು ಸುಮಾರು 2.60 ಕೋಟಿಗೆ ಖರೀದಿಸಿತ್ತು. ಅವರು 2025ರ ಐಪಿಎಲ್‌ನಲ್ಲಿ ಎರಡು ಪಂದ್ಯಗಳನ್ನು ಆಡಿದ್ದರು ಮತ್ತು ಚೊಚ್ಚಲ ಪಂದ್ಯದಲ್ಲಿಯೇ ಅರ್ಧಶತಕ ಗಳಿಸಿದರು.

ಆದಾಗ್ಯೂ, ಅಂದಿನಿಂದ, ಅವರಿಗೆ ಪ್ಲೇಯಿಂಗ್ ಇಲೆವೆನ್‌ನಲ್ಲಿ ಸ್ಥಾನ ಸಿಕ್ಕಿಲ್ಲ. ಆರ್‌ಸಿಬಿ ಅವರ ಬದಲು ಮತ್ತೊಬ್ಬ ಇಂಗ್ಲಿಷ್ ಆಟಗಾರ ಫಿಲ್ ಸಾಲ್ಟ್ ಅವರಿಗೆ ಪ್ಲೇಯಿಂಗ್ ಇಲೆವೆನ್‌ನಲ್ಲಿ ಸ್ಥಾನ ನೀಡಿದೆ. ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್ ಮತ್ತು ಜಾಶ್ ಹೇಜಲ್‌ವುಡ್ ಸ್ಥಾನ ಪಡೆದಿರುವ ಇತರ ವಿದೇಶಿ ಆಟಗಾರರಾಗಿದ್ದಾರೆ.

ಜೇಕಬ್ ಬೆಥೆಲ್ ಸುಮಾರು ಒಂದು ತಿಂಗಳಿನಿಂದ ಬೆಂಚ್‌ನಲ್ಲಿ ಕುಳಿತಿದ್ದಾರೆ. ಈಮಧ್ಯೆ, ಕೌಂಟಿ ಚಾಂಪಿಯನ್‌ಶಿಪ್ ಆರಂಭವಾಗಿದೆ. ಅವರ ತಂಡ ವಾರ್ವಿಕ್‌ಷೈರ್ 3 ಪಂದ್ಯಗಳನ್ನು ಆಡಿದೆ ಮತ್ತು ಸದ್ಯ ಡಿವಿಷನ್ ಒನ್‌ನಲ್ಲಿ ಎರಡನೇ ಸ್ಥಾನದಲ್ಲಿದೆ. ಆದರೆ, ಬೆಥೆಲ್ ಮಾತ್ರ ಇಂಗ್ಲೆಂಡ್‌ನಲ್ಲಿ ಅಥವಾ ಭಾರತದಲ್ಲಿ ಆಡುತ್ತಿಲ್ಲ.

ಇಂಗ್ಲೆಂಡ್‌ನ ಮಾಜಿ ಟೆಸ್ಟ್ ನಾಯಕ ಅಲಸ್ಟೇರ್ ಕುಕ್ ಅವರಿಗೆ ಬೆಥೆಲ್ ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಆಡುವುದರಲ್ಲಿ ಯಾವುದೇ ಸಮಸ್ಯೆ ಇಲ್ಲ. ಆದರೆ, ಅವರು ಬೆಂಚ್‌ನಲ್ಲಿ ಕುಳಿತಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸೂಕ್ತ ಸಂದರ್ಭಗಳಲ್ಲಿ, ಅವರು ವಾರ್ವಿಕ್‌ಷೈರ್‌ಗಾಗಿ ಆಡುತ್ತಿದ್ದರು. ಇದು ಅವರ ರೆಡ್-ಬಾಲ್ ಆಟದಲ್ಲಿ ಕೆಲಸ ಮಾಡಲು ಅವಕಾಶ ನೀಡುತ್ತಿತ್ತು. ಸಿಡ್ನಿಯಲ್ಲಿ ಬಲವಾದ ಬೌಲಿಂಗ್ ದಾಳಿ ಮತ್ತು ಕಠಿಣ ಪರಿಸ್ಥಿತಿಗಳ ನಡುವೆಯೂ ಬೆಥೆಲ್ ಬ್ಯಾಟಿಂಗ್ ಮಾಡಿದ ರೀತಿ ಅದ್ಭುತವಾಗಿತ್ತು. ಆ ಪ್ರದರ್ಶನದ ಆಧಾರದ ಮೇಲೆ,



ಅವರು ಇನಿಂಗ್ಸ್ ಪ್ರಾರಂಭಿಸಲು ಸಾಕಷ್ಟು ಉತ್ತಮವಾಗಿದ್ದಾರೆ. ಅವರು 3ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಬಹುದಾದರೆ, ಇನಿಂಗ್ಸ್ ಕೂಡ ನಿರ್ವಹಿಸಬಹುದು ಎಂದು ಕುಕ್ ಸ್ಟಿಕ್ ಟು ಕ್ರಿಕೆಟ್ ಪಾಡ್‌ಕ್ಯಾಸ್ಟ್‌ನಲ್ಲಿ ಹೇಳಿದರು.

ಆದರೆ ಅದು ಸೂಕ್ತವಲ್ಲ, ಅಲ್ಲವೇ ಬೆಥೆಲ್ ನಿಜವಾಗಿಯೂ ಈಗ ಓಪನಿಂಗ್ ಮಾಡುತ್ತಿಲ್ಲ. ಏಕೆಂದರೆ, ಅವರು ಐಪಿಎಲ್‌ನಲ್ಲಿ ಏನನ್ನೂ ಮಾಡದೆ ಬೆಂಚ್‌ನಲ್ಲಿ ಕುಳಿತಿದ್ದಾರೆ. ಆದರ್ಶಪ್ರಾಯವಾಗಿ, ಅವರು ಇಂಗ್ಲೆಂಡ್‌ಗೆ ಸಹಾಯ ಮಾಡಲು ವಾರ್ವಿಕ್‌ಷೈರ್‌ಗಾಗಿ ಓಪನಿಂಗ್ ಮಾಡಬಹುದು ಎಂದು ಅವರು ಹೇಳಿದರು.ಬಹುಶಃ ಅವರು ಕೌಂಟಿ ಕ್ರಿಕೆಟ್‌ನಲ್ಲಿ ಆರಂಭಿಕ ಆಟಗಾರನಾಗಿ ಆಡಬಹುದು. ಏಕೆಂದರೆ, ಇಂಗ್ಲೆಂಡ್‌ಗೆ ಜ್ಯಾಕ್ ಕ್ರಾಲಿ ಹೊರಗುಳಿದಿದ್ದರಿಂದ ಆರಂಭಿಕ ಆಟಗಾರನ ಅಗತ್ಯವಿರುತ್ತದೆ. ಬೆಥೆಲ್ ಐಪಿಎಲ್‌ನಲ್ಲಿ ಆಡುವುದರೊಂದಿಗೆ ಮತ್ತೊಂದು ಸಮಸ್ಯೆಯೆಂದರೆ ನ್ಯೂಜಿಲೆಂಡ್ ಸರಣಿ ಜೂನ್ 4 ರಂದು

**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: **udayavahininews@yahoo.com** , epaper.udayavahini.in www.udayavahini.in Udaya vahini news Udaya vahini news
**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**